ಮನುಷ್ಯ ಜಾತಿ
ತಾನೊಂದೆ ವಲಂ



ಚಂದ್ರಶೇಖರ ಪಾಟೀಲ

ಗಾಂಧೀ ಸ್ಮರಣೆ

BVP-1211 27/2/17
1175 - (5).

ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವ ಮಾಲಿಕೆ ಪ್ರಕಟಣೆ

ಗಾಂಧೀ ಸ್ಮರಣೆ

ಚಂದ್ರಶೇಖರ ಪಾಟೀಲ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

Kannada Sahitya Parishattu Centenary Publication

ಗಾಂಧೀ ಸ್ಮರಣೆ
ಚಂದ್ರಶೇಖರ ಪಾಟೀಲ
ಪ್ರಕಾಶಕರು :

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ
ಚಾಮರಾಜಪೇಟೆ
ಬೆಂಗಳೂರು – ೫೬೦ ೦೧೮

ಮುಖಪುಟ ವಿನ್ಯಾಸ : ಸುದೇಶ್ ಮಹಾನ್

ಪುಟಗಳು : ೧೦೮

ಮುದ್ರಣ ಕಾಗದ : ೮೦ ಜಿ.ಎಸ್.ಎಂ.
ಎನ್.ಎಸ್.ಮ್ಯಾಪ್‌ಲಿಥೋ

ಬೆಲೆ : ೭೫=೦೦

ಪರಿಷತ್ತಿನಿಂದ ಮುದ್ರಣ: ೨೦೧೪

ಪ್ರತಿಗಳು : ೧೦೦೦

ಮುದ್ರಣ
ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್
೩/೪, ಮೊದಲನೇ ಮುಖ್ಯರಸ್ತೆ
ನ್ಯೂ ತರಗುಪೇಟೆ
ಬೆಂಗಳೂರು – ೫೬೦ ೦೦೨.

ISBN - 978-93-82446-70-5

GANDHI SMARANE - a collection of poems in Kannada by Chandra Shekara Patila

published by :
Kannada Sahitya Parishattu
Pampa Mahakavi Road
Chamarajapete
Bengaluru - 560018

Cover Page : Sudesh Mahan

Pages : 108

Paper : 80 G.S.M. N.S. Maplitho

Rs : 75=00

Edition by Parishattu : 2014

Copies : 1000

printed at

Omkar Offset Printers
3/4, 1st Main Road
New Taragupete
Bengaluru - 560002.

ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವ ಕೃತಿಗಳ ಆಯ್ಕೆ ಸಮಿತಿ

ಅಧ್ಯಕ್ಷರು

ಶ್ರೀ ಪುಂಡಲೀಕ ಹಾಲಂಬಿ

ಸದಸ್ಯರು

ಡಾ. ಸಿದ್ಧಲಿಂಗಯ್ಯ

ಪ್ರೊ. ಜಿ. ಅಶ್ವತ್ಥನಾರಾಯಣ

ಡಾ. ಶ್ಯಾಮಸುಂದರ ಬಿದರಕುಂದಿ

ಡಾ. ತಾರಿಣಿ ಶುಭದಾಯಿನಿ

ಡಾ. ಮಾಧವ ಪೆರಾಜೆ

ಶ್ರೀ ಸಿ.ಕೆ. ರಾಮೇಗೌಡ, **ಗೌರವ ಕಾರ್ಯದರ್ಶಿ, ಕ.ಸಾ.ಪ.**

ಡಾ. ರಾಜಶೇಖರ ಹತಗುಂದಿ, **ಗೌರವ ಕಾರ್ಯದರ್ಶಿ, ಕ.ಸಾ.ಪ.**

ಶ್ರೀ ಪಿ. ಮಲ್ಲಿಕಾರ್ಜುನಪ್ಪ, **ಗೌರವ ಕೋಶಾಧ್ಯಕ್ಷ, ಕ.ಸಾ.ಪ.**

ಪ್ರಕಟಣಾ ಸಮಿತಿ ಸಂಚಾಲಕ

ಶ್ರೀ ಜೆ.ಎನ್. ಶಾಮರಾವ್

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ಕಾರ್ಯಕಾರಿ ಸಮಿತಿ

ಶ್ರೀ ಪುಂಡಲೀಕ ಹಾಲಂಬಿ., ಅಧ್ಯಕ್ಷರು

ಶ್ರೀ ಸಿ.ಕೆ. ರಾಮೇಗೌಡ, ಗೌರವ ಕಾರ್ಯದರ್ಶಿ

ಡಾ. ರಾಜಶೇಖರ ಹತಗುಂದಿ, ಗೌರವ ಕಾರ್ಯದರ್ಶಿ

ಶ್ರೀ ಪಿ. ಮಲ್ಲಿಕಾರ್ಜುನಪ್ಪ, ಗೌರವ ಕೋಶಾಧ್ಯಕ್ಷ

ಶ್ರೀ ಟಿ. ತಿಮ್ಮೇಶ್, ಬೆಂಗಳೂರು ನಗರ

ಶ್ರೀ ಹುಲಿಕಲ್ ನಟರಾಜ್, ಬೆಂ. ಗ್ರಾಮಾಂತರ

ಶ್ರೀ ಬಿ.ಟಿ. ನಾಗೇಶ್, ರಾಮನಗರ

ಶ್ರೀ ಜೆ.ಜಿ. ನಾಗರಾಜ, ಕೋಲಾರ

ಶ್ರೀ ವೈ.ಎಲ್. ಹನುಮಂತರಾವ್, ಚಿಕ್ಕಬಳ್ಳಾಪುರ

ಡಾ. ಸೋ.ಮು. ಭಾಸ್ಕರಾಚಾರ್ಯ, ತುಮಕೂರು

ಶ್ರೀ ಆರ್. ಮಲ್ಲಿಕಾರ್ಜುನಯ್ಯ, ಚಿತ್ರದುರ್ಗ

ಶ್ರೀ ಎ.ಆರ್. ಉಜ್ಜನಪ್ಪ, ದಾವಣಗೆರೆ

ಶ್ರೀ ಡಿ.ಮಂಜುನಾಥ್, ಶಿವಮೊಗ್ಗ

ಡಾ. ಎಂ. ಚಂದ್ರಶೇಖರ್, ಮೈಸೂರು

ಶ್ರೀ ಸೋಮಶೇಖರ ಬಿಸಲ್ವಾಡಿ, ಚಾಮರಾಜನಗರ

ಶ್ರೀಮತಿ ಮೀರಾ ಶಿವಲಿಂಗಯ್ಯ, ಮಂಡ್ಯ

ಡಾ. ಎಚ್.ಎಲ್. ಜನಾರ್ಧನ, ಹಾಸನ

ಶ್ರೀ ಟಿ.ಪಿ.ರಮೇಶ್, ಕೊಡಗು

ಶ್ರೀ ಎನ್.ಎಸ್. ಶಿವಸ್ವಾಮಿ, ಚಿಕ್ಕಮಗಳೂರು

ಶ್ರೀ ನೀಲಾವರ ಸುರೇಂದ್ರ ಅಡಿಗ, ಉಡುಪಿ

ಶ್ರೀ ಎಸ್.ಪ್ರದೀಪಕುಮಾರ ಕಲ್ಕೂರ, ದಕ್ಷಿಣ ಕನ್ನಡ

ಶ್ರೀ ಯ.ರು. ಪಾಟೀಲ, ಬೆಳಗಾವಿ

ಶ್ರೀ ಮಲ್ಲಿಕಾರ್ಜುನ ಅಯ್ಯಪ್ಪ ಯಂಡಿಗೇರಿ, ವಿಜಾಪುರ

ಡಾ. ವಿಜಯಕುಮಾರ ಕಟಗಿಹಳ್ಳಿಮಠ, ಬಾಗಲಕೋಟೆ

ಡಾ. ಲಿಂಗರಾಜ ರು. ಅಂಗಡಿ, ಧಾರವಾಡ

ಶ್ರೀ ಗುರುಶಾಂತಪ್ಪ ಬಿ. ಮಾಸಣಗಿ, ಹಾವೇರಿ

ಡಾ. ಶಿವಪ್ಪ ಮರಿಬಸಪ್ಪ ಕುರಿ, ಗದಗ

ಶ್ರೀ ರೋಹಿದಾಸ ನಾಯಕ, ಉತ್ತರ ಕನ್ನಡ

ಶ್ರೀ ಮಹಿಪಾಲರೆಡ್ಡಿ ಮುನ್ನೂರ, ಗುಲ್ಬರ್ಗ

ಶ್ರೀ ಸಿದ್ದಪ್ಪ ಎಸ್. ಹೊಟ್ಟಿ, ಯಾದಗಿರಿ

ಪ್ರೊ. ಸಿದ್ರಾಮಪ್ಪ ಮಾಸಿಮಾಡೆ, ಬೀದರ್

ಶ್ರೀ ಮಹಾಂತೇಶ ಮಸ್ಕಿ, ರಾಯಚೂರು

ಶ್ರೀ ವೀರಪ್ಪ ಮ. ನಿಂಗೋಜಿ, ಕೊಪ್ಪಳ

ಶ್ರೀ ಸಿರಿಗೇರಿ ಯರ್ರಿಸ್ವಾಮಿ, ಬಳ್ಳಾರಿ

ಶ್ರೀ ಎಚ್.ಬಿ.ಎಲ್.ರಾವ್, ಮಹಾರಾಷ್ಟ್ರ

ಶ್ರೀ ಎಚ್.ಬಿ. ಶಿವಕುಮಾರ್, ಆಂಧ್ರ ಪ್ರದೇಶ

ಶ್ರೀ ಕೆ.ಪಿ.ಆಚಾರ್ಯ, ತಮಿಳುನಾಡು

ಶ್ರೀ ಸುಬ್ರಹ್ಮಣ್ಯ ವಿ.ಭಟ್, ಕೇರಳ

ಡಾ. ನಾ. ಡಿಸೋಜ
೮೦ನೇ ಅ.ಭಾ.ಕ.ಸಾ. ಸಮ್ಮೇಳನಾಧ್ಯಕ್ಷರು

ಡಾ. ನಲ್ಲೂರು ಪ್ರಸಾದ್ ಆರ್.ಕೆ.
ನಿಕಟಪೂರ್ವ ಅಧ್ಯಕ್ಷರು

ಡಾ. ವಿಜಯದೇವಿ ಎಸ್.ಎಸ್.
ಮಹಿಳಾ ವಿ.ವಿ. ಪ್ರತಿನಿಧಿ

ಡಾ. ತಂಬಂಡ ವಿಜಯ್ ಪೂಣಚ್ಚ
ಕನ್ನಡ ವಿ.ವಿ.ಪ್ರತಿನಿಧಿ

ಶ್ರೀ ಕೆ.ಎ. ದಯಾನಂದ
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಶ್ರೀಮತಿ ಬಿ.ಟಿ. ಲಲಿತಾ ನಾಯಕ್
ಮಹಿಳಾ ಪ್ರತಿನಿಧಿ

ಡಾ. ಕಾ.ವೆಂ. ಶ್ರೀನಿವಾಸಮೂರ್ತಿ
ಪರಿಶಿಷ್ಟ ಜಾತಿ ಪ್ರತಿನಿಧಿ

ಶ್ರೀ ಬಿ.ಎಚ್. ಸತೀಶ್‌ಗೌಡ
ಸಂಘಸಂಸ್ಥೆಗಳ ಪ್ರತಿನಿಧಿ

ಅಧ್ಯಕ್ಷರ ಮಾತು

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಶತಮಾನೋತ್ಸವವನ್ನು ಆಚರಿಸಿಕೊಳ್ಳುತ್ತಿರುವುದು ಹೆಮ್ಮೆಯ ವಿಷಯ. ನಾಡು, ನುಡಿ, ಸಾಹಿತ್ಯಕ್ಕೆ ಪ್ರೇರಕಶಕ್ತಿಯಾಗಿ ಹಾಗೂ ಪೋಷಕವಾಗಿ ದುಡಿಯುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತು ೫-೫-೧೯೧೫ರಂದು ಅಂದಿನ ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರು ಹಾಗೂ ದಿವಾನ್‌ರಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯನವರ ಪ್ರಯತ್ನದ ಫಲವಾಗಿ ಸಂಸ್ಥಾಪನೆಗೊಂಡಿತು. ಈವರೆಗೆ ೨೪ ಜನ ಅಧ್ಯಕ್ಷರು ಪರಿಷತ್ತಿನ ಸೇವೆ ಸಲ್ಲಿಸಿದ್ದಾರೆ. ೮೦ ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷತೆಯನ್ನು ೭೮ ಜನ ಮಹಾನ್ ಲೇಖಕರು ಅಲಂಕರಿಸಿದ್ದಾರೆ. ೮೫ ಜನ ಸದಸ್ಯರಿಂದ ಆರಂಭಗೊಂಡ ಪರಿಷತ್ತಿನ ಇಂದಿನ ಸದಸ್ಯರ ಸಂಖ್ಯೆ ೨,೦೫,೦೦೦. ಪರಿಷತ್ತಿನ ಪ್ರಕಟಣೆಗಳ ಸಂಖ್ಯೆ ೧೪೨೪. ಕೇವಲ ಅಂಕಿಸಂಖ್ಯೆಯ ದೃಷ್ಟಿಯಿಂದಲೇ ಕನ್ನಡ ಸಾಹಿತ್ಯ ಪರಿಷತ್ತಿನ ಸಾಧನೆ ಅನನ್ಯವಾದುದು; ಇನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ ಕೊಡುಗೆಯಂತೂ ಅವಿಸ್ಮರಣೀಯವಾದುದು.

ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವದ ಅಂಗವಾಗಿ ಕೆಲವೊಂದು ಮಹತ್ವದ ಯೋಜನೆಗಳನ್ನು ಪರಿಷತ್ತು ಕೈಗೊಂಡಿರುತ್ತದೆ. ಮೊದಲನೆಯದಾಗಿ, ಎರಡು ಶತಮಾನಗಳಿಗೂ ಮೀರಿದ ಅವಧಿಯ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಗಳ ರಚನೆ ಹಾಗೂ ಪ್ರಕಟಣೆ. ಈ ೧೭ ಸಂಪುಟಗಳ ರಚನೆಯ ಕಾರ್ಯದಲ್ಲಿ ಈಗಾಗಲೇ ಪರಿಣತ ಸಂಪಾದಕರು ಹಾಗೂ ನೂರಾರು ಲೇಖಕರು ಕ್ರಿಯಾಶೀಲರಾಗಿದ್ದಾರೆ. ಎರಡನೆಯದಾಗಿ, ಪರಿಷತ್ತಿನ ನೂರರ ಸಂಭ್ರಮಕ್ಕೆ ಕಿರೀಟಪ್ರಾಯವಾಗಿ ಕನ್ನಡದ ನೂರು ಮೌಲಿಕ ಗ್ರಂಥಗಳ ಮುದ್ರಣ. ಜೊತೆಗೆ, ಪರಿಷತ್ತಿನ ನೂರು ವರ್ಷಗಳ ಇತಿಹಾಸವನ್ನು ದಾಖಲಿಸುವ ನೆನಪಿನ ಸಂಪುಟದ ಪ್ರಕಟಣೆ.

'ಕನ್ನಡ ಸಾಹಿತ್ಯ ಪರಿಷತ್ತು ಶತಮಾನ : ಕೃತಿ ನೂರು' ಎಂಬ ಯೋಜನೆಯಡಿ ಪುಸ್ತಕಗಳ ಆಯ್ಕೆಗೆ ಪರಿಣತರ ಸಮಿತಿಯನ್ನು ರಚಿಸಲಾಯಿತು. ಈ ಆಯ್ಕೆ ಸಮಿತಿಯು ನೂರು ಪುಸ್ತಕಗಳನ್ನು ಆಯ್ಕೆಮಾಡಿ ಕೊಟ್ಟಿರುತ್ತದೆ. ಕನ್ನಡ ಸಾಹಿತ್ಯದ ವಿವಿಧ ಘಟ್ಟಗಳು, ಚಳುವಳಿಗಳು ಹಾಗೂ ವಿವಿಧ ಸಾಹಿತ್ಯಿಕ ಸಂವೇದನೆಗಳನ್ನು ಆಯ್ಕೆ ಸಮಿತಿಯು ಗಮನದಲ್ಲಿರಿಸಿಕೊಂಡು ನೂರು ಪುಸ್ತಕಗಳನ್ನು ಆಯ್ಕೆ ಮಾಡಿರುತ್ತದೆ. ಇದರಲ್ಲಿ ಸಾಹಿತ್ಯದ ಎಲ್ಲ ಪ್ರಕಾರಗಳಿಗೂ ಪ್ರಾತಿನಿಧ್ಯವಿರುವಂತೆ ಸಹ ನೋಡಿಕೊಳ್ಳಲಾಗಿದೆ. ಪ್ರತಿಭೆ, ಪ್ರಾದೇಶಿಕತೆ ಹಾಗೂ ಸಾಮಾಜಿಕ ನ್ಯಾಯಗಳನ್ನು

ಪರಿಗಣಿಸಲಾಗಿದೆ. ಈಗಾಗಲೇ ಸಮಗ್ರವಾಗಿ ಲಭ್ಯವಿರುವ ಹಾಗೂ ಮತ್ತೆ ಮತ್ತೆ ಪುನರ್‌ಮುದ್ರಿತವಾಗಿರುವ ಕೃತಿಗಳಿಗೆ ಆದ್ಯತೆ ನೀಡಿಲ್ಲವಾಗಿದ್ದರೂ, ಒಟ್ಟಾರೆ ಕನ್ನಡ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡಿರುವ ಲೇಖಕರನ್ನು ಬಹುಮಟ್ಟಿಗೆ ಉಳಿಸಿಕೊಳ್ಳಲಾಗಿದೆ. ಇಂಥ ಮಹತ್ವದ ಪುಸ್ತಕಗಳ ಪಟ್ಟಿಯನ್ನು ಸಿದ್ಧಪಡಿಸಿಕೊಟ್ಟ ಆಯ್ಕೆ ಸಮಿತಿ ಸದಸ್ಯರಾದ ಡಾ. ಸಿದ್ಧಲಿಂಗಯ್ಯ, ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಶ್ಯಾಮಸುಂದರ ಬಿದರಕುಂದಿ, ಡಾ. ರಾಜಶೇಖರ ಹತಗುಂದಿ, ಡಾ. ತಾರಿಣಿ ಶುಭದಾಯಿನಿ ಹಾಗೂ ಡಾ. ಮಾಧವ ಪೆರಾಜೆ ಅವರಿಗೆ ನನ್ನ ಕೃತಜ್ಞತೆಗಳು.

ಈ ನೂರು ಕೃತಿಗಳನ್ನು ಏಕ ಚೌಕಟ್ಟಿನಲ್ಲಿ, ಆದರೆ ವಿವಿಧ ಕಲಾವಿನ್ಯಾಸಗಳಲ್ಲಿ ಮುದ್ರಿಸಲು ಸಹ ಯೋಜಿಸಲಾಗಿದೆ. ಸಾಧ್ಯವಾದ ಮಟ್ಟಿಗೂ ಒಟ್ಟಾರೆ ಗುಣಮಟ್ಟದಲ್ಲಿ ಏಕರೂಪತೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸಲಾಗಿದೆ.

ಪರಿಷತ್ತಿನ ಯೋಜನೆಯಡಿ ತಮ್ಮ ಕೃತಿಯನ್ನು ಪುನರ್‌ಮುದ್ರಿಸಲು ಅನುಮತಿಯನ್ನು ಕೋರಿದಾಗ, ಪರಿಷತ್ತಿನ ಮೇಲಿನ ಗೌರವದಿಂದಾಗಿ ಚಂದ್ರಶೇಖರ ಪಾಟೀಲ ಅವರು ತಮ್ಮ ಒಪ್ಪಿಗೆಯನ್ನು ನೀಡಿ ಹೃತ್ಪೂರ್ವಕವಾಗಿ ಸಹಕರಿಸಿದ್ದಾರೆ. ಅವರಿಗೆ ನನ್ನ ಗೌರವಪೂರ್ವಕ ಕೃತಜ್ಞತೆಗಳು.

ಈ ಮೊದಲ ಕಂತಿನ ಪುಸ್ತಕಗಳನ್ನು ಅಂದವಾಗಿ ಮುದ್ರಿಸಿಕೊಟ್ಟ ಮೆ॥ ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್ ಅವರಿಗೆ ನನ್ನ ಕೃತಜ್ಞತೆಗಳು.

ದಿನಾಂಕ : ೧೫-೦೯-೨೦೧೪
ಬೆಂಗಳೂರು

ಪುಂಡಲೀಕ ಹಾಲಂಬಿ
ಅಧ್ಯಕ್ಷರು

ಗಾಂಧೀ ಸ್ಮರಣೆಗೆ ಮೊದಲು ಎರಡು ಮಾತು

ಲಂಕೇಶ್ ಈ ಸಂಕಲನಕ್ಕೆ ಬರೆದ ಹಿನ್ನುಡಿಯಲ್ಲಿ ಒಂದೆಡೆ ಹೇಳಿದ್ದಾರೆ : "ಕಳೆದ ಎರಡು ವರ್ಷಗಳ ಮೌನದಲ್ಲಿ, ಸಾರ್ವತ್ರಿಕ ಸ್ಮಶಾನ ಮೌನದಲ್ಲಿ, ಪಾಟೀಲರ ಒಂದೇ ಒಂದು ಧ್ವನಿ ಎಲ್ಲರಿಗೂ ತಾಗುವ ನೈತಿಕ ಹಾಗೂ ಕಲಾತ್ಮಕ ಗುಣ ಪಡೆದಿದೆ. ಇವರ ಧ್ವನಿ ಕೂಡ ನಾವು ಸೃಷ್ಟಿಸಿದ ವಾತಾವರಣ ಮತ್ತು ಕೃತಿಗಳ **ಸಹಜ ತಾರಕವಾಗಿದೆ** ಎಂದು ನಾನು ಯಾವುದೇ ಆತ್ಮ ಪ್ರಶಂಸೆಯ ಭಯವಿಲ್ಲದೆ ಹೇಳಬಲ್ಲೆ." (ನಾನು ದಪ್ಪಕ್ಷರದಲ್ಲಿ ತೋರಿಸಿದ) ಲಂಕೇಶರ ಮಾತು ನೂರಕ್ಕೆ ನೂರರಷ್ಟು ಖರೇ ಮಾತು. ನನ್ನ ಇತ್ತೀಚಿನ ಕೃತಿಗಳ ಹಿಂದೆ ಈ ಸಮುದಾಯ ಪ್ರಜ್ಞೆ ಇದೆ. ನಿನ್ನೆಯ ಹಾಳು ನೆನಪಿನಲ್ಲೋ ನಾಳೆಯ ಹಾಳು ಕನಸಿನಲ್ಲೋ ವಿಹರಿಸಿ, ಅನುಭವದ "ಪುನಃ ಸೃಷ್ಟಿ" ಮಾಡಿಕೊಂಡು ಭಾಷೆಯಲ್ಲಿ ಅದಕ್ಕೊಂದು "ಕಲಾತ್ಮಕ" ರೂಪು ಕೊಡಲು ತಿಣಕಾಡುವ ಪಲಾಯನದ ಹಾದಿಗೆ ಕೈ ಮುಗಿದು, ಇಂದಿನ ಈ ಕ್ಷಣದ, ಈ ವರ್ತಮಾನದ ಹಸಿ ಹಸಿ ಅನುಭವಗಳಿಗೆ ಹಾಗೆಯೇ ಎದೆಯೊಡ್ಡಿ ನಿಂತು ಬದುಕಿನ ಸವಾಲು ಸ್ವೀಕರಿಸಿದ ಬರಹಗಾರರ ಒಂದು ಗುಂಪಿನ ಸಮಷ್ಟಿ ಅನುಭವವಿದೆ ಈ ನನ್ನ ಧ್ವನಿಯ ಹಿಂದೆ. ಅದನ್ನು ಲಂಕೇಶರಂಥವರು ಗುರುತಿಸದೆ ಇನ್ನಾರು ಗುರುತಿಸಬೇಕು?

ನನಗೆ ನೆನಪಿದೆ. ಒಂಬತ್ತು ವರ್ಷಗಳ ಹಿಂದೆ ನನ್ನ "ಹತ್ತೊಂಬತ್ತು, ಕವನಗಳು" ಹೊರಬಂದಾಗ ನಾನೊಬ್ಬ ಖಾಲಿ ಮನುಷ್ಯನಾಗಿದ್ದೆ. ಬದುಕಿನ ಸಾಧ್ಯತೆಗಳೇ ಮುಗಿದದ್ದರಿಂದ, ಕಾವ್ಯದ ಸಾಧ್ಯತೆಗಳೂ ಅನಿವಾರ್ಯವಾಗಿ ಮುಗಿದಿದ್ದವು. ಹಳೆಯ ನೆನಪುಗಳನ್ನು ಬಿಟ್ಟರೆ ಸ್ವಾನುಭವದ ಬಂಡವಲು ತೀರಿಹೋದಾಗ, ನನ್ನ ಒಣ ವ್ಯಂಗ್ಯದ, ಏಕತಾನದ ಅಂತರ್ಮುಖತೆಯನ್ನು ಭೇದಿಸಿಕೊಂಡು ನಾನು ನಾಟಕಕ್ಕೆ ಕೈ ಹಾಕಿದೆ. 'ಕೊಡೆಗಳು' ಕವನ ಬರೆದ ಕೆಲವು ದಿವಸಗಳಲ್ಲೇ 'ಕೊಡೆಗಳು' ನಾಟಕ ಬರೆದೆ. ಅದು ಹೈದರಾಬಾದಿನಲ್ಲಿ.

ಮೊದಲು ಹೈದರಾಬಾದು. ನಂತರ ಇಂಗ್ಲಂಡು. ಬದುಕಿನ ಬಾಗಿಲಗಳು ಮತ್ತೆ ತೆರೆಯತೊಡಗಿದವು. ಮನುಷ್ಯ ಸಂಬಂಧದ ಸೂಕ್ಷ್ಮಾತಿಸೂಕ್ಷ್ಮ ಎಳೆಗಳು ಮತ್ತೆ ಕೈಗೆ ಹತ್ತತೊಡಗಿದವು. ಇಂಗ್ಲಂಡಿನಲ್ಲಿ ಮೊಟ್ಟ ಮೊದಲ ಬಾರಿ ನನ್ನ ಇಂಡಿಯಾಕ್ಕೆ ಕಣ್ಣು ಮೂಗು ಮೂಡಿದವು. ನನಗೂ ನನ್ನ ಇಂಡಿಯಾಕ್ಕೂ ಇರುವ ಸಂಬಂಧದ ನೆಲೆ ಸಿಗತೊಡಗಿತು. ಸರಿ. ಅಲ್ಲಿಂದ ಹಿಂತಿರುಗಿದಾಗ ನಾನು ಮೊದಲಿನ ನಾನಾಗಿರಲಿಲ್ಲ. ನನ್ನ ಬಗ್ಗೆ, ನಾನು ನಂಬಿಕೊಂಡ ಅನೇಕ ಮೌಲ್ಯಗಳ ಬಗ್ಗೆ ನಾನಿಟ್ಟುಕೊಂಡ ಭ್ರಮೆಗಳೆಲ್ಲ ನಿರಸನಗೊಂಡು ಬದುಕಿನ ಬಗ್ಗೆ ಬೇರೆಯೇ ಬಗೆಯಾದ ಶ್ರದ್ಧೆ ಹುಟ್ಟಿಕೊಂಡಿತು. ಈ ದೇಶದಲ್ಲಿ ಅನಂತರ ನಡೆದ ಅನೇಕ ಚಟುವಟಿಕೆಗಳು ನನ್ನ ಬರಹಕ್ಕೆ, ಬರಹವನ್ನು ಮೀರಿದ ಬದುಕಿಗೆ, ಹೊಸದೊಂದು ಮಗ್ಗುಲನ್ನು ಮೂಡಿಸಿದವು. ಅದರ ಫಲ, ಈ ಅನುಶಾಸನ ಪರ್ವದಲ್ಲಿ ಮೂಡಿ ಬಂದ ಈ ಗಾಂಧೀ ಸ್ಮರಣೆ.

ಈ ಸಂಕಲನದಲ್ಲಿ ಅತ್ಯಂತ ಆತ್ಮೀಯ ಸಂಬಂಧಗಳ, ನಾನು – ನೀನಿನ ಅನೇಕ ಕವನಗಳಿವೆ. ನನ್ನ 'ಸಾಮಾಜಿಕ'ವೆನ್ನಬಹುದಾದ ಕವನಗಳು ನನಗೆಷ್ಟು ಮುಖ್ಯವೋ, ಅಷ್ಟೇ ಮುಖ್ಯ ಈ 'ವೈಯಕ್ತಿಕ' ಕವನಗಳು ಕೂಡ – ಅನುಭವದ ಖರೇತನ ಹಾಗೂ ತೀವ್ರತೆಗಳ ದೃಷ್ಟಿಯಿಂದ. ನನಗನಿಸುತ್ತದೆ : ಬದುಕಿನ ಬಗ್ಗೆ, ಮನುಷ್ಯ ಸಂಬಂಧಗಳ ಬಗ್ಗೆ ನನಗಿರುವ ಈ ಮೂಲಭೂತ ಪ್ರೀತಿ, ಶ್ರದ್ಧೆಯಿಂದಾಗಿಯೇ ಇಲ್ಲಿಯ 'ವೈಯಕ್ತಿಕ' ಕವನಗಳು ಸೆಂಟಿಮೆಂಟಲ್ ಆಗದೆ, ಹಾಗೂ 'ಸಾಮಾಜಿಕ' ಕವನಗಳು ಸಿನಿಕಲ್ ಆಗದೆ ಉಳಿದಿರುವುದು. ಇದು ನನಗೇ ಗೊತ್ತಿರುವ ನನ್ನದೇ ವಿಷಯವಾದ್ದರಿಂದ. ಇದನ್ನು ಸಿದ್ಧ ಮಾಡಲು ಅವರಿವರ ಸಾಕ್ಷಿ ಪುರಾವೆಗಳ ಅಗತ್ಯವೂ ನನಗಿಲ್ಲ.

ಸಂಕಲನದ ಕವನಗಳ ಬಗ್ಗೆ ನಾನೇನು ಹೇಳುವುದು? ಒಂದು ಹೆದರಿಕೆ ಮಾತ್ರ ಇದೆ : ಇಂಥ ಕವನಗಳು ನಮ್ಮ ಅಕ್ಷರ ಪ್ರಪಂಚದಲ್ಲಿ 'ಐತಿಹಾಸಿಕ ದಾಖಲೆ' ಗಳಾಗಿ ಮಾತ್ರ ಉಳಿದು, ಕ್ರಿಯಾರೂಪದ ವಾಸ್ತವ ಪ್ರಪಂಚದ ಇತಿಹಾಸ ಮಾತ್ರ ಕಿಂಚಿತ್ತಾದರೂ ಇವುಗಳಿಂದ ಬದಲಾಗಬಹುದೇ? ಅಂತ. ಬಹುಶಃ ಈ ಪ್ರಶ್ನೆಗೆ ಉತ್ತರವನ್ನು ನಾವು – ನೀವು, ಬರಹವನ್ನೊಳಗೊಂಡ, ಆದರೆ ಬರಹವನ್ನು ಮೀರಿದ ನಮ್ಮ ನಮ್ಮ ವೈಯಕ್ತಿಕ ಹಾಗೂ ಸಾಮಾಜಿಕ ಬದುಕಿನಲ್ಲಿ ಕಂಡುಕೊಳ್ಳಬೇಕೇನೋ. ಸಾಹಿತ್ಯ ಬದುಕಿಗೆ ಹತ್ತಿರವಾಗುವುದು, ಬದುಕಿನ ಒಂದು ಅವಿಭಾಜ್ಯ ಅಂಗವಾಗುವುದು ಈ ಅರ್ಥದಲ್ಲಿಯೇ. ಅಂಥದೊಂದು ಪರ್ವ ಈಗ ಬಂದಿದೆ. ನಾವು ಭವಿಷ್ಯದ ಇತಿಹಾಸಕಾರರ ನಿರ್ಣಾಯಕ ಮಾತುಗಳ ಸಲುವಾಗಿ ಅಲ್ಲ; ನಮ್ಮ ನಮ್ಮ ಸಾರ್ಥಕ ಅಸ್ತಿತ್ವದ ಸ್ವಾರ್ಥಕ್ಕಾಗಿ ನಮ್ಮ ವರ್ತಮಾನವನ್ನು ರೂಪಿಸಿಕೊಳ್ಳಬೇಕಾಗಿದೆ.

* * *

ಈ ಸಂಕಲನದ ಪ್ರಕಟಣೆಯ ಸಂದರ್ಭದಲ್ಲಿ ಕಾಳೇಗೌಡ, ಲಂಕೇಶ್, ತಡಕೋಡ, ಮೂರ್ತಿ, ರಾ. ಸೂರಿ ಮುಂತಾದವರನ್ನು ನೆನೆಯಲೇಬೇಕು. ನೆನೆಯುತ್ತೇನೆ. ಈ ಕವನಗಳ ಅನುಭವದ ಸಂದರ್ಭದಲ್ಲಿ ಮಾತ್ರ ಇಂಥಿಂಥವರನ್ನು 'ನೆನೆಯುತ್ತೇನೆ' ಎಂದು ಹೇಳುವುದೇ ಮೋಸ. ಯಾವಾಗಲೂ ಒಳಗೇ ಇದ್ದವರನ್ನು ನೆನೆಯುವದು ಅಂದರೇನು?

೨೪-೧೧-೭೬ ಚಂದ್ರಶೇಖರ ಪಾಟೀಲ
ಧಾರವಾಡ

ಕವನಗಳು

ಅರಸು ರಾಕ್ಷಸ, ಮಂತ್ರಿಯೆಂಬುವ ಮೊರೆವ ಹುಲಿ
ಪರಿವಾರ ಹದ್ದಿನ ನೆರವಿ
ಬಡವರ ಬಿನ್ನಪವನಿನ್ನಾರು ಕೇಳುವರು?
ಉರಿವುರಿವುತಿದೆ ದೇಶ
ನಾವಿನ್ನಿರಲುಬಾರದೆನುತ್ತ – ಜನ
ಬೇಸರಿನ ಬೇಗೆಯಲಿರದಲೇ ಭೂಪಾಲ ಕೇಳೆಂದ

ಗದುಗಿನ ಭಾರತ : ಸಭಾಪರ್ವ ೧– ೬೨

ಗಾಂಧೀ ಸ್ಮರಣೆ

ಭಾಗ : ಒಂದು

೧೯೬೭-೧೯೭೧

ಕೊಡೆಗಳು

*

ಗಿಡ ಗುಡ್ಡ ಮನೆ ಮಠ
ಅಷ್ಟೇಕೆ ನೆಲ ಮುಗಿಲು
ಎಲ್ಲದಕ್ಕೂ ಬಿಗಿದು ಎಂಥದೋ ಕಣ್‌ಕಟ್ಟು
ಹೆಣೆಯುತಿದೆ ಮಳೆ ಬೂದಿನೀರ ಜಾಲರಿಕಟ್ಟು.
ಬಿದ್ದ ಹೆಜ್ಜೆಯ ತೆಗ್ಗಿನಲ್ಲಿ ಹೊಕ್ಕಿದೆ ನೀರು
ಎದುರು, ಆಚೆ, ಈಚೆ
ಹನಿ ಬಿದ್ದು ಪುಟಿದೆದ್ದ ಇಷ್ಟಿಷ್ಟೆ ಆರತಿ

ನನ್ನ ಕೊಡೆ ಕೆಳಗೆ
ಹೊರಟಿರುವೆ, ಹಿಡಿಕಿ ಗರಗರ ತಿರುವಿ,
ಛತ್ರಪತಿ;
ನಾನೆ, ನಾನೊಬ್ಬನೆ.

ಹೀಗೆ ಹೊರಟಾಗ –
ಎದುರು, ಆಚೆ, ಈಚೆ
ಕೊಡೆ ತೇಲಿಹೋದಂಥ ತೇಲುಭಾವ.
ಬರುವುದೊಮ್ಮೊಮ್ಮೆ ಒಂದೊಂದು
ಸಮಿಸಮೀಪ.
ಹಲೋ..... ನಮಸ್ಕಾರ.....
ಕೊಡೆ ಕಡ್ಡಿ ಕೊಡೆ ಕಡ್ಡಿ ಬೆರಳ ಅಮುಕಿ
ಕಣ್ಣು ಕಣ್ಣಲಿ ಧುಮುಕಿ
ಬಾಯಿ ಉಸುರಿದ ಪ್ರಶ್ನೆಗಿನ್ನೊಂದು ಉತ್ತರ ಉಸುರಿ....
ಹೀಗೆ ನೀರು ಅಂಗಾಲ ಕೊರೆದು....

ದಯಮಾಡಿ.... ಸ್ವಲ್ಪ....
ನಿಮ್ಮ ಕೊಡೆ ಬಗಲೊಳಗೆ ಮಡಿಚಿಟ್ಟುಕೊಂಡು

ಈ ಕೊಡೆಯ ಕೆಳಗೆ
ಈ ಕೊಡೆಯ ಒಳಗೆ
ಈ ನನ್ನ ಬಳಿಗೆ
ಬರುವಿರ?
ಅಥವ,
ನನ್ನ ಕೊಡೆ ಬಗಲೊಳಗೆ ಮಡಿಚಿಟ್ಟುಕೊಂಡು
ನಿಮ್ಮ ಕೊಡೆ ಕೆಳಗೆ,
ನಿಮ್ಮ ಕೊಡೆಯೊಳಗೆ
ಅಥವ.....
ನಾನೆ ಬರಲೆ ?
ಐದಾರು ಹೆಜ್ಜೆ, ಅಷ್ಟೆ. ಒಂದೆರಡು ಮಿನಿಟು.

"ಕ್ಷಮಿಸಿರಿ. ನಾವು ನಿಂತದ್ದು ಕತ್ತರಿದಾರಿ.
ಬೇಕೆಂದರಿಲ್ಲಿಯೇ ಕಾಲು ಹುಗಿದು
ತಾಸುಗಟ್ಟಲೆ ನಾವು ಹರಟೆ ಕೊಚ್ಚೋಣಂತ.
ನಿಮ್ಮ ಕೊಡೆ ನಿಮಗಿರಲಿ
ನಮ್ಮದು, ನಮಗೆ."

ಸರಿ ಹಾಗಾದರೆ ಎಲ್ಲ ಕ್ಷೇಮವಷ್ಟೇ?
ನೋಡೋಣ. ಇನ್ನೊಮ್ಮೆ ಕೂಡಿದರೆ ಕೂಡೋಣಂತ.

ಮತ್ತೆ
ಹೆಜ್ಜೆ ಕಿತ್ತಿರುವೆ.
ಕೊಡೆಯ ಒಜ್ಜೆ ಹೊತ್ತಿರುವೆ.
ಛತ್ರಪತಿ!
ನಾನೆ
ನಾನೊಬ್ಬನೆ.

೧೯೬೭

ಒಬ್ಬ ಬ್ರಹ್ಮಚಾರಿ ಮತ್ತು ಒಬ್ಬ ಗೃಹಸ್ಥ

*

ಅವನೊಬ್ಬ ಹೇಳಿ ಮಾಡಿಸಿದ ಬ್ರಹ್ಮಚಾರಿ.
ಕಂಡಕಂಡವರ ಕೈಹಿಡಿದು ಕೇಳುತ್ತಾನೆ
ಒಂದು ಪ್ರಶ್ನೆ :

'ನಿನ್ನ ಮಗುವನ್ನು ನೀ ಪ್ರೀತಿಸುವಿಯಾ?'
ಹೌದು ಎಂದರೆ 'ಯಾಕೆ' ಎಂದು ಕೆಬರುತ್ತಾನೆ:
'ಹೆಂಡತಿಯ ಪ್ರೀತಿಸು. ಪ್ರೀತಿ ಪಡೆ. ವ್ಯವಹಾರ.
ಮಗುವಿಗೂ ನಿನಗೂ ಏನಪ್ಪ ಗಂಟು?
ನೀ ಸುರಿದ ಹನಿಯಿಂದ ಅದು ಹುಟ್ಟಿತೆಂದೆ?

ಮಂದಿ ಬಯ್ಯುವರೆಂದೆ ?
ಮಾಡಲೇನೂ ಧಂಧೆ ಇಲ್ಲವೆಂದೆ?'
ಏನು ತಲೆ ಒಡಕೊಂಡರೂ ಬಿಡುವುದಿಲ್ಲ.
ಎಲ್ಲದಕ್ಕೂ ಅಡ್ಡಗಾಲು
ಹೊಡೆಯುತ್ತಾನೆ.
'ನೀನೂ ಮದುವೆಯಾಗು, ಹಡೆ ಮಕ್ಕಳನ್ನು.
ಸರಿಯಾಗುವುದು ನಿನ್ನ ತಲೆ'
– ಅಂದರೆ
ನೋ ನೋ ನೋ ಅಂತ ತಲೆ ಕೊಡವುತ್ತಾನೆ

ಕೊನೆಗೊಮ್ಮೆ
ಏಳುಮಕ್ಕಳ ಸೃಷ್ಟಿಕರ್ತನೊಬ್ಬ ಅವನಿಗೆ
ಸಿಕ್ಕ.
ಪ್ರಶ್ನೆ ತೂರಿದ
ಬಂತು ಬಯಸಿದುತ್ತರ ಅಂತೂ :
'ಹುಟ್ಟಿಸಿದ್ದೇನೇ ಇರಲಿ

ಅದು ನನ್ನ ಮೈ ತುಂಬಿ ನಿಂತ ಸೊಕ್ಕಿನ ತುಳುಕು,
ದುಷ್ಟಫಲ,
ತಾಮಸದರಿಷ್ಟ ಸಂತಾನ
ಅದಕ್ಯಾಕೆ ನಾ ಪ್ರೀತಿ ಸುರಿಯಬೇಕು ?'

ಇಬ್ಬರೂ ಕೈಕೈ
ಕುಲುಕ್ಯಾಡಿ ಜಗ್ಯಾಡಿ
ಹಹ್ಹಹ್ಹಾ ಅಂತ ನಕ್ಕೂ
ನಕ್ಕೂ
ಎದೆ ಹಿಡಿದುಕೊಂಡು

ಕೆಮ್ಮತೊಡಗಿದರು.

೧೯೬೭

ವಚನ

*

ಕನಸಲ್ಲಿ ನಿನ್ನ ತಣಿಸಬೇಕೆಂದು
ಮೈ ತುಂಬ ಮೋಡದ ಚೆಂಡು ತುರುಕಿಕೊಂಡು
ಮಲಗಿದ್ದೆ.....

ಗಾಳಿ ಯಾವುದೊ ಹೊಕ್ಕು ಹತ್ತು ಕಡೆ ಹನಿ ಉದುರಿ
ನಿಕಾಲಿಯಾಯಿತು ಮೋಡ

ಮುಗಿಲು ಖಾಲಿ

ಬೇಡ...
ಮೋಡದ ಕೂಡ ಸಲಿಗೆ ಬೇಡ

ಈ ರಾತ್ರಿ
ನಿನ್ನ ಮೈತುಂಬ ಬರಿ
ಚಿಕ್ಕೆಗಳ ಚುಚ್ಚುವೆ.

೧೯೬೮

ನೆನಪುಗಳು

*

ಈ ಬಣ್ಣಗಳೆಂದರೆ
ನನಗೆ ಬಲು ಹೆದರಿಕೆ

ಕಣ್ಣು ಮುಚ್ಚಲೆ?
ಈಜುಗೊಳದೊಳಗೆ ಸುಳಿಸುಳಿಯುವ
ಬರೆ – ಬತ್ತಲ ಮೈಗಳು.

ಕಣ್ಣು ಬಿಚ್ಚಲೆ?
ಸಭಾ ಭವನದ ತುಂಬ
ನೀಟಾಗಿ ಕುಳಿತ
ಮಹನೀಯರು, ಮಹಿಳೆಯರು.

ಯಾವುದು ಚೆಲೋ ಏನೊ
ನನಗೆ ಗೊತ್ತಿಲ್ಲ...

೧೯೬೮

ಹೆಂಡ

*

ನನ್ನ ಮನಸಿನ ನನ್ನ ಕನಸಿನ
ಬರ್ಫ–ಕುಣಿಯಲ್ಲಿ
ಹುಗಿದಿರುವೆ ನಿನ್ನ.

ನಿನ್ನ ಹಿರಿದು ಗಟಗಟ ಕುಡಿದು
ಬಾಟಲಿ ಒಡೆದು
ಹುಡಿ ಮಾಡಲೆ ? ಮಾಡಿ
ಕುಣಿದಾಡಲೆ?

ಬೇಡ.
ನಿನ್ನ ಕಾದಿರಿಸುವೆ :
ನಾನೂ ಬರ್ಫವಾಗುವ
ಕ್ಷಣದ ಈಚೆಯ ಕ್ಷಣಕ್ಕಾಗಿ –

ಮೈಸುಡುವ ಚುರುಕಿಗಾಗಿ.
ಬಾಯ್ತುಂಬ ಕಂಪಿಗಾಗಿ.

೧೯೬೮

ಪರದೇಶಿ

*

ನನ್ನ ನೆಲ ನನ್ನ ಒದ್ದೋಡಿಸಿದ ಮೇಲೆ
ಹತ್ತೂರು ಹರಗ್ಯಾಡಿ
ಬಂದೆ ಇಲ್ಲಿ. ಇಲ್ಲೆ,
ನನಗೆ ಸಲ್ಲದ ನನ್ನದಲ್ಲದ ಈ ನೆಲದಲ್ಲೆ
ಕುಂಟೆ ಹೂಡಿದೆ. ಹರಗಿ
ಬೀಜ ಬಿತ್ತಿದೆ.
ಬೆಳೆದೆ.

ಈ ಸಸಿಯ ಹಸಿರೆಲೆಯ ಬೀಸು ತೋಳುಗಳಲ್ಲಿ
ಜೀಕುವವು ಆ ನೆಲದ ತೋಟ, ಅಡವಿ.
ಈ ಹೂವ ಮೈಮುರಿತ, ತಪ್ಪು ಹೆಜ್ಜೆಗಳಲ್ಲಿ
ಕುಣಿಯುವವು ಆ ನೆಲದ ಮೋಡ, ಮುಗಿಲು.
ಈ ಹಾಲುಗಾಳುಗಳ ತೊದಲು ಮಾತಿನ ಜೊಲ್ಲು
ಹಾಡುವದು ಆ ನೆಲದ ಮಂಜು-ಕಡಲು.

೧೯೬೮

ಮಣ್ಣು

*

ಎಷ್ಟು ಸಲ ಮುಕ್ಕರಿಸಿ ಬಿದ್ದು ಮಣ್ಣು
ಮುಕ್ಕಿಲ್ಲ ನಾನು?
ಲೆಕ್ಕ ಇಡಬೇಕ್ಯಾರು ?
ಅಂಥಲ್ಲಿ ಇಂಥಲ್ಲಿ ಅಂತಿಲ್ಲ.
ನಿಂತಲ್ಲಿ, ಕುಂತ ಕುಂತಲ್ಲಿ;
ನಡೆದಾಗ,
ಯಾರೊ ಅಡ್ಡಿಗ್ಗಾಲು ಹೊಡೆದಾಗ....
ಹೀಗೆ ಹಜಾರ ಸಲ
ದಿಂಡರಕಿ ಹಾಕಿದ್ದೇನೆ
ಬಿದ್ದಿದ್ದೇನೆ. ಬಿದ್ದೆದ್ದಿದ್ದೇನೆ –
ಇದು ಮುಖ್ಯ.
ಎದ್ದು, ಅತ್ತಿತ್ತ ನೋಡಿ,
ಪ್ಯಾಂಟು ಶರ್ಟಿಗೆ ತೆಕ್ಕೆ ಬಿದ್ದ ಹುಡಿ
ಕೊಡವಿಕೊಂಡು
ಕುಂಡಿಯ ಹಿಂದೆ ಕೈಕಟ್ಟಿಕೊಂಡು
ನಡೆ ಮುಂದೆ ನಡೆ ಮುಂದೆ ನಡೆ –
ದಿದ್ದೇನೆ.
ಹೀಗಾದಾಗೆಲ್ಲ
ಮೊದಲ ಸಲ ಮೊಟ್ಟ ಮೊದಲ ಸಲ
ತಿಂದ ಮಣ್ಣಿನ ಕಂಪು
ಬಾಯ್ತುಂಬ ಒಸರುವುದು ಗಾಳಿಯಾಗಿ.
ಅದು
ಎಳೆಯ ತೊಗಟೆಯ ಮೇಲೆ ಚಾಕು ಕೆತ್ತಿದ ಕವನ.
ಮುಂಗೈಯ ಹೂ ಚರ್ಮ –
ದಲ್ಲಿ ಚುಚ್ಚಿದ ಹಚ್ಚೆ.

೧೯೬೮

ಈ

*

ಇದು ಬರೋಬರಿ ಅಲ್ಲ... ಇನ್ನು
ನಾನು ಈ ಕ್ಷಣದಲ್ಲಿ ಬದುಕಬೇಕು

ಅಂತ ನಿರ್ಧರಿಸಿ,
ಹೋದವರಿಗೆ ಬರಬೇಡಿರೆಂದು
ಬರುವವರಿಗೆ ಬರಬೇಡಿರೆಂದು
ಬೇಡಿಕೊಂಡು

ಹಿತ್ತಲಬಾಗಿಲ ಮುಂಚಿಬಾಗಿಲ ಕಿಡಕಿ ಬೆಳಕಿಂಡಿ
ಮುಚ್ಚಿ, ಕೊಂಡಿ ಹಾಕಿ,
ಒಳಸಿಕ್ಕ ಕಣ್ಣ ಹೊರದಬ್ಬಿ
ಹೊರಹೊರಟ ಕಣ್ಣ ಒಳನೂಕಿ
ಒಂದು,
ಎರಡು,
ಮೂರು – ಹಾ,
ಈ ಕ್ಷಣವನ್ನಪ್ಪಲೆಂದು ಆತುರ ತೋಳ
ನಿರ್ವಾತದಲಿ ಚೆಲ್ಲಿದರೆ,

ದೇವಾ !
ನನ್ನನ್ನಪ್ಪಿದ್ದು ನನ್ನ ತೋಳುಗಳೆ !
ಈ ಕ್ಷಣ ಆ ಕ್ಷಣವಾಗಿ
ಕೂಸು ಹೆಣವಾಗಿ
ಆಚೆ ಕಡೆ ಆ ಎಂದು ಬಾಯಿ ತೆರೆದು
ಹಲ್ಕಿಸಿದು ನಕ್ಕು ಕಣ್ಣಲ್ಲಿ ನಕ್ಕು
ಕೈಯ ಬೀಸಿತ್ತು.

೧೯೬೮

ಸ್ಫೂರ್ತಿ

*

ಗುತ್ತಾಗಿ ಬೆಳೆದ ಒಣಗಿದೆಲೆ ಗಿಡದೊಳಗೆ
ಗಾಳಿ ಹೊಕ್ಕು
ಪುರ್ರೆಂದು ಹಾರಿದವು ಹಕ್ಕಿ. ಹೊಕ್ಕವು
ಮತ್ತೆ ಒಳಗೆ. ಗೂಡಿಸಿಕೊಂಡು ಕೂತವು
ಗೂಡಿನೊಳಗೆ.

೧೯೬೮

ಮಾಧ್ಯಮ

*

ಕೆಂಪು ಹೂಗಳ ಹಸಿರು ಎಲೆಗಳ
ಕರಿಯ ನೆರಳುಗಳು
ಬಿಳಿಯ ಗೋಡೆಯ ಮೇಲೆ,

ಕುಡಿತದಮಲಿನ ಜೋಡು ಮೇಳ ಕುಣಿತ.

ನುಸುಳುವುದು ಮೋಡದ ನೆರಳು ಒಮ್ಮೊಮ್ಮೆ,
ಹರಡುವುದು ಮಸಕು ಮುಸುಕು.

ಮತ್ತೆ ಸೂರ್ಯನ ಬೆರಳು ಮುಸುಕು ಸರಿಸಿ
ಕುಣಿಸುವುದು ನೆರಳುಗಳ.

ಈ ನೆರಳುಗಳ ಸಖ್ಯ ಸೂರ್ಯನ ಕೂಡ.
ಕೆಂಪು ಹೂಗಳು, ಹಸಿರು ಎಲೆಗಳು
ಬರಿಯ ಮಾಧ್ಯಮ.

ಅಷ್ಟೆ

೧೯೬೮

ಒಂದೊಂದು ಕ್ಷಣ

*

ಒಂದೊಂದು ಕ್ಷಣ ಒಂದೊಂದು
ತೆರೆ.

ಆಳದ ತಳಾತಳದ ಹರಳು.
ಸಮೀಪ,
ಮುಂಗೈಯ ಹಸಿರು ನರದಷ್ಟು ಸಮೀಪ,
ಮುತ್ತಾಗಿ ನಡುಗುವದು.

ಮುಗಿಲು ಮೋಡ ಚಿಕ್ಕೆ ಚಂದಪ್ಪಗಳ
ಉಪರಾಟಿ ಜಗತ್ತಿನ ಕೂಡ,
ಹರಳಿನಾಸೆಗೆ ದಂಡೆ ಹಿಡಿದ ನನ್ನ
ಬಿಂಬ ಕೂಡ
ನಡುಗುವುದು.

ತೆರೆ ತೆರೆ ತೆರೆ ಹರಿದರೇನು,
ಪಾತಳಿ ಅಷ್ಟೆ.
ಥರ ಥರ ನಡುಗಿದ್ದಷ್ಟೆ
ಖರೆ.

೧೯೬೮

ಬೆದರು

*

ಇಲೆಕ್ಟ್ರಿಸಿಟಿ ಬಗ್ಗೆ ನಿನ್ನ ಲೆಕ್ಚರು ಕೇಳಿ
ನಿದ್ದೆ ಬಂತು. ಪ್ರಿಯಾ,

ಬರಬಾರದೆ? ಬಂದು
ಸ್ವಿಚ್ ಒತ್ತಬಾರದೆ?
ಸ್ವಿಚ್ಚೆಲ್ಲಿ ! ಹುಚ್ಚಪ್ಪ, ಮೈತುಂಬ ಸ್ವಿಚ್ಚು,
ಕೈ ಹಚ್ಚು ಕಚ್ಚು ಬಿಚ್ಚು.
ಮುಚ್ಚು....

ಬೆಚ್ಚಿದೆಯಾ? ಶಾಕ್ ನೆನಿಸಿ
ಬೆದರಿದೆಯಾ
ಪ್ರಿಯಾ? ಓಹ್

ಸರಿ. ಒದರು.

೧೯೬೮

ಕವನ

*

ನಾನು ಮಾಡಿದ್ದು ಮಾಡಲೆಳಸಿದ್ದು ಮಾಡ
ಲಾಗದ್ದು ಮಾಡದ್ದು ಮಾಡಬಯಸಿದ್ದು ಮಾಡ
ಬೇಕಾದದ್ದು ಎಲ್ಲ

ಎಲ್ಲ ಒಳಹೊಕ್ಕು ಹೊಲ
ಗೇರಿ ಹುಚ್ಚಾ ಬಟ್ಟೆ ಕಲ್ಲಾ ಬಿಲ್ಲಿ ಕನಸ–ಸುಂಟರ
ಗಾಳಿ ಕೈಗೆ ಸಿಕ್ಕು ತೂರ್ಯಾಡಿ
ಹಾರ್ಯಾಡಿ ಗಿರಿಗಿರೀ

ಗಿರಿಗಿರೀ ತಿರುಗಿ ತಿರುತಿರುಗುತ್ತ ಹೊರ ಬಂದು
ದುಂಡನ್ನ ಕವನವಾಗುವುದು....

೧೯೬೮

ಚಿಕ್ಕ ಪದ್ಯಗಳು

*

ಮುಗಿಲ ಬಿಸಿ ಹೆಚ್ಚಾಗಿ
ಹಸಿ ಮೋಡ ಹುಚ್ಚಾಗಿ
ಎಂದು ನೆಲ ಕಂಡೇನೊ ಅಂತ ಅರಬಡಿಸಿ
ಧೋ ಧೋ ಅಂತ ಮಳೆ ಸುರಿಸಿ
ಮನೆಮಸಣಹಳ್ಳಹೊಳೆಗಟಾರದತುಂಬನೀರಹರಿಸಿ

ದ ಮೇಲೆ

ಟಪ್... ಟಪ್....
ಅಂತ ಒಂದೊಂದೆ ಹನಿ, ಆಗೀಗ,
ಗಾಳಿ ಜೋಕಾಲಿ ಜೀಕಿ,
ಬಿದ್ದು, ಬಿದ್ದಲ್ಲೆ
ಇಂಗಿ....

ಹಾಗೆ ಈ
ಚಿಕ್ಕ ಚಿಕ್ಕ ಪದ್ಯಗಳು.

೧೯೬೮

೫೦ರ ಅಡಿಗರು

*

ಛೆ, ಏನು ಸೋಜಿಗ ಕಣ್ರಿ.

ಇದ್ದಕ್ಕಿದ್ದಂತೆ ಹಳೆ ಮನೆ ಬಿದ್ದು
ಅದರ ಪಾಯದ ಮೇಲೆ
ಹೊಸ ಮನೆ ಎದ್ದು
ಅಟ್ಟದ ಮೇಲೆ ಅಟ್ಟ ಅಟ್ಟದ ಮೇಲೆ ಅಟ್ಟ
ಹುಟ್ಟಿದ್ದು.....

ಹಳೆಯ ಕತೆ ಅಂತೀರ? ಅನ್ರಿ.

ಹಳೆಯ ಕತೆ. ಆದರೂ ಎಂಥ ಕತೆ ಸ್ವಾಮಿ!
ದಂಥೆಯಿಲ್ಲದ ದರಿದ್ರ ಜೋಬದ್ರ
ಮಾತು ಬರಿ ಮಾತುಗಳ ಜೋಲುಕುಡಿ ಕತ್ತರಿಸಿ
ಕಸಿ ಮಾಡಿ, ಹೂಗಳ ಬಾಯಿ
ತುಂಬ ಮಣ್ಣಿನ ಬಾಸ ತುಂಬಿದಾಗ,
ಹೂ ತುತೂರಿಯಾಗಿ
ಮಣ್ಣಿನತ್ತರು ಸುತ್ತ ಸಿಂಪಡಿಸಿತು.
ಬೆರಳು ಮೋಹನ ಮುರಲಿ ತೂತ ತೊರೆದು,
ಬೆರಳು ಕೈಯಾಗಿ
ಚಂಡೆ ಮದ್ದಳೆಗೊಮ್ಮೆ ಕೈ ಹಚ್ಚಿದಾಗ
ಗಾರುಡಿಗ ಪುಂಗಿ
ಹಾವಿನ ಬುಟ್ಟಿಯಲ್ಲೇ ಮಂಗಮಾಯ.
ಮಲ್ಲಾಡದ ಹಕ್ಕಿ ಹಾಡು
ಓ ಅದು ದೊಡ್ಡ ರಾಮಾಯಣಂ.

ಚಂಡೆ ಸಪ್ಪಳ ಕೇಳಿ,
ಗೊಂದಲಾಪುರ ವಾಸಿನೀ ಈ ಸುವಾಸಿನಿ :
ನಿನ್ನೆ ಮೊನ್ನೆ
ಏಳು ಮಲ್ಲಿಗೆ ಮೊಗ್ಗೆ ತೂಗಿದ್ದ ನಮ್ಮ
ಕವಿತಾ ಕನ್ನೆ –
ಇದ್ದಕ್ಕಿದ್ದಂತೆ ದೊಡ್ಡವಳಾಗಿ
ಹೂವಾಗಿ ಕಾಯಾಗಿ
ಸಟ್ ಸಟ್ ಸಟ್ ....
೧, ೨, ೩,...... ಮಕ್ಕಳ ತಾಯಾಗಿ
ಈಗ ಆಗಿದ್ದಾಳೆ ಹಣ್ಣು.

ಮಕ್ಕಳೆ,
ಕಿವುಚಬೇಡಿರಿ ಇನ್ನು.
ನಾ ಮತ್ತೆ ಕಾಯಾಗಿ ಮಿಡಿಯಾಗಿ ಹೂವಾಗಿ
ದೇಟಿನಗುಂಟ ಒಳಸೇರಿ ಬೀಜವಾಗಿ
ಮತ್ತೆ ಮುಗಿಲಿನ ಮಿಂಚ
ಮತ್ತೆ ಮುಗಿಲಿನ ಗುಡುಗ
ಬಯಸಿ, ಮುಗಿಲಿನ ದಾರಿ ಕಾಯಬೇಕು.
ಅಲ್ಲಿಯ ತನಕ
ನಿಮ್ಮ ನಿಮ್ಮ ಗುಬ್ಬಿ ಮನೆಗಳಲ್ಲಿ
ನಿಮ್ಮ ನಿಮ್ಮ ಕನ್ನೆಯರ ಕೂಡ
ಚೆನ್ನಾಟ ಕಟೆಯಿರಿ ನನ್ನ ಮುದ್ದು ಕಂದಮ್ಮಗಳಿರಾ.

೨

ಈ ಪರಿಸ್ಥಿತಿ ಇತ್ತು. ಸರಿ.
ಈಗ ಅಡಿಗರಿಗೆ ೫೦.
ಚಂಡೆ ಬಾರಿಸಿದ ಕೈ
ಬೋಳು ತಲೆ ಮೇಲೆ.
ಬೋಳು ತಲೆ ಮೇಲೆ
ಮುತ್ತಿನ ಕಿರೀಟ.
ಮುತ್ತಿನ ಕಿರೀಟದಲ್ಲಿ
ಅಲ್ಲಲ್ಲಿ ಕಾಜಿನ ಟುಕಡಿ.

ಕಾಜಿನ ಟುಕಡಿಯ ತುಂಬ
ಪರಾಕು ಪಂಪುಗಳ ಪ್ರತಿಬಿಂಬ.

ಅಡಿಗರಿಗೆ ಈಗ ತಾನೆ ೫೦.
ಇನ್ನೂ ೧೦ ವರ್ಷ ಹರಕತ್ತಿಲ್ಲ ....

ಅಂತೀರ? ಅನ್ರಿ.

೧೯೬೮

ನಾನು ಮತ್ತು 'ನಾನು'

*

ಇದು ಬ್ರಹ್ಮಗಂಟೇ ಇರಬೇಕು.
ಎಷ್ಟು ತಿಣಕ್ಯಾಡಿದೆ ಎಷ್ಟು ಕೊಸರ್ಯಾಡಿದೆ
ಮತ್ತೂ ಸರಗಂಟು ಕಗ್ಗಂಟೆ.
ಕುಣಿಕೆ ಬಿಗಿತ.

ಬಿಟ್ಟಿರಲೆ? ಊಂಹೂ,
ಮಂದಿ ಕೆಡಿಸಿಗಿಡಿಸ್ಯಾರೆಂಬ ಸಂಶಯ _
ಪಿಶಾಚಿ ನಾನು.
ಕಟ್ಟಿಕೊಳ್ಳಲೆ? – ಅದೂ ಒಂದು ಇಲ್ಲದ ಪಿಟ್ಟಿ
ಅಂತ ಅಡವಿಯ ನೆನೆವ ಸನ್ಯಾಸಿ ನಾನು.

ಇದು ಕುತ್ತಿಗೆಯ ಬಿಗಿಯಿತೋ
ಉಸುಲು ಕಟ್ಟಿದ ಹಾಗೆ.
ಸಡಿಲಾಗಿ ಉಚ್ಚಿತೋ, ಎಲ್ಲ
ಕಳಕೊಂಡ ಹಾಗೆ.

ಒಮ್ಮೊಮ್ಮೆ ಈ ಇದರ ಜೋಡಿ ನಾನು
ಕ್ಷುದ್ರ, ಸ್ವಾರ್ಥಿ, ಹೆಣಗ, ಷಂಢ.
ಮತ್ತೊಮ್ಮೆ :
ನಮ್ಮ ಲೀಲಾಜಾಲದಲ್ಲಿ
ಇಡಿ ಜಗತ್ತನ್ನೆ ಹುಟ್ಟಿಸಿದ,
ಮತ್ತೊಂದು ಹುಟ್ಟಿಸಬಲ್ಲ
ಅರ್ಧನಾರೀಶ್ವರರು
ನಾವು.

೧೯೬೮

ಶ್ರದ್ಧಾಂಜಲಿ

*

ಅಂವ ಸತ್ತ.
ನನ್ನ ಅವನ ಅಷ್ಟ ದೋಸ್ತೀ ಏನಿರಲಿಲ್ಲ. ಅಷ್ಟs
ಹಲೊ ಹಲೊ.

ಅಂವ ಹೋದ. ಸ್ಕೂಟರ್ ಟ್ರಕ್ಕಿಗೆ ಹಾಯ್ದು.
ಖಲಾಸ್.

ಯಾವದು ಶಾಶ್ವತರಿ ಅಂತ ಯಾರೋ ಅಂದದ್ದಕ್ಕ
ಹೌದರಿ ಅಂದು
ಸ್ಕೂಟರ್ ಕೊಳ್ಳಬೇಕಂತ ಮಾಡಿ
ಸಾಲ ತಗೀಬೇಕಂತ ವಿಚಾರ ಮಾಡಬೇಕಂತ ಮಾಡಿದ್ದು
ಕ್ಯಾನ್ಸಲ್ ಮಾಡಿ
ಯಾಕೋ ಎಲ್ಲಾ ಹಳೇಹುಡಿಗೇರ ನೆನಪಾಗಿ
ಅವರ ನಗಿ ನೆನಪಾಗಿ
ಅವರ ಕಣ್ಣು ಅವರ ತುಟಿ ಗಲ್ಲಾ
ಅವರದೆಲ್ಲಾ ನೆನಪಾಗಿ
ಒಬ್ಬೊಬ್ರ ಹತ್ರ ಒಂದೊಂದ ತಾಸು ಕಳದು ಎಲ್ಲಾ ಹಿರಕಂಡು
ಬಂದು ಬಿಡಬೇಕನಿಸಿ

ರೂಮಿಗೆ ಬಂದೆ. ರೂಮಿಗೆ ಬಂದು
ಊಟದ ಡಬ್ಬಿ ಬಂದಿತ್ತು. ಊಟ ಮಾಡಿದೆ,
ಮಾಡಿ
ಸತ್ತವನ ಮನ್ಯಾಗ ಉಳದವರು ಏನ ಮಾಡತಿದ್ದಾರೀಗ
ಅಂತ ಲೆಕ್ಕ ಹಾಕಿ

ನಿದ್ದಿ ಬಂದಂಗಾಗಿ
ಹಾಸಿಗಿ ಹಾಸಿದೆ. ಹಲ್ಲಿ ಒಮ್ಮೆ ಲೊಚ್ ಅಂತು.

ಅದಿನ್ನೊಮ್ಮೆ ಲೊಚ್ ಅನ್ನೋದರಾಗ ನಾನೇ ಗೊಟಕ್
ಅಂದರ ?
ಅನಬಾರದ? ಅನಬಾರದ್ಯಾಕ? ಅನಬೇಕ್ಯಾಕ ?
ಅಂತ ಹೀಂಗ
ಹಳ್ಳಾ ಬಿದ್ದಾಗ

ಮತ್ತ ಯಾರದೋ ನೆನಪಾಗಿ ಹಾಂಗ ಕಣ್ಣು ಮುಚ್ಚಿ
ಹೀಂಗ ಮಲಗಿಸಿಕೊಂಡು
ಮಲಗಿದೆ.

೧೯೯೮

ಜ್ಯೂನಿಯರ್ ಕವಿಗಳಿಗೊಂದು

ನಮೂನಿ ಉಪದೇಶ

*

ನಿಮ್ಮ ತಾಯಿ ಮಲೀ ಬಿಡಿಸಿ
ಎಷ್ಟ ವರಷಾತ್ರಿ?
ಬಚ್ಚಲದಾಗ ಬರೇಬತ್ಲ ನಿಮ್ಮನ್ನಿಲ್ಲಿಸಿ
ಮೈ ತಿಕ್ಕಿ ತಿಕ್ಕಿ.....
ಹಿಂಗೆಲ್ಲಾ ಮಾಡೋದ ಬಿಟ್ಟು ಎಷ್ಟು ದಿನಾ ಆತ್ರಿ?
ನೀವು ನಿಮ್ಮ ಮೀಸಿಗೆ ದಾಡಿಗೆ
ಮೊದಲನೇ ಸಲ ರೇಜರ್ ಹಚ್ಚಿ
ಮಂಜಿನ ಹನಿಹಂಗ ಮಾರಿತುಂಬ ರಕ್ತಾ ಮಾಡಿಕೊಂಡದ್ದು
ಮೊನ್ನೆ ಮೊನ್ನೆ,
ಅಲ್ಲ?

ಸೀರೀ ಸುತ್ತಿದ ಮೈ ಇನ್ನೂ
ಮೈಗೆ ಜುಮ್ ಅನಿಸಿಲ್ಲ.
ನಿಮ್ಮ ಗಲ್ಲಾ ಬೆಚ್ಚಗ ಮಾಡಿ
ಕಿವ್ಯಾಗ ಗುಂಯ್ ಗುಂಯ್ ಅಂದು
ಎದ್ಯಾಗ ಪಟಾಕ್ಷಿ ಹಾರಿಸಿಲ್ಲ.
ತೀಡಿ ತೀಡಿ ಪತ್ರಾ ಬರೆದು
ಅಕ್ಷರದಾಗಿನ ಕಿಂಡ್ಯಾಗಿಂದ ಖಿಸಕ್ಕಂತ ನಕ್ಕಿಲ್ಲ,
ಇನ್ನೂ ನಿಮ್ಮನ್ನಗಿಸಿಲ್ಲ.
ಖಾಲೀ ಬೆನ್ನ ಸವರಿಕೆಂತ ಇನ್ನೊಂದು ಮೈಯಾಗ ನೀವು
ಹೂವಿನ ಕೊಳ್ಳೀ ಆಡಿಸಿಲ್ಲ.
ಬೆಂಕೀನಾದ ಹಾಡಿಸಿಲ್ಲ.
ಅಲ್ಲ?

ಇಲ್ಲಾ ಇಲ್ಲಾ ಇಲ್ಲಾ ಅಂದ್ರ
ಕವಿತಾ ಯಾಕ ಬರೀತೀರಿ?
ಹೆಣ್ಣಿನ ಮೈಯಾಗ ಈಸ್ಯಾಡಿ
ತಳಾ ಕಂಡು ನೆಲೀ ತಂದು ದಂಡಿಗೆ ಬಂದು
ಮ್ಯಾಲ ಬಕಬರಲ ಬಿದ್ದೋರಂಗ
ಕವಿತಾ ಯಾಕ ಬರೀತೀರಿ?

ಚೈನೀ ಹೊಡಿಯೋ ವಯಸ್ಸಿನಾಗ ಚೈನೀ ಹೊಡೀಬೇಕ್ರೆಪ.

ಹೋಗ್ರಿ. ಹೋಗ್ರಿ.
ಮಾರಿಗಷ್ಟು ಪೌಡರ್ ಮೆತ್ತಿ
ತುಟೀಮ್ಯಾಗ ನಗೀ ಕೆತ್ರಿ.
ಮೈಯನ ಎಣ್ಣೀ ಕಣ್ಣಾಗ ಚಿಮ್ಮಿ
ಕಣ್ ನೆಟ್ಟಲ್ಲಿ ಬೆಂಕೀ ಬಿತ್ರಿ.
ಹುಂಜದಂಗ ನಡೀರಿ ನವಿಲಿನಂಗ ಕುಣೀರಿ
ಹೆಣ್ಣ ಕಂಡ್ರ ಕಣ್ಣ ಹೊಡಿರಿ
ಕೋಗಲೀ ಹಂಗ ಸೀಟೀ ಹೊಡಿರಿ
ಪ್ರೀತಿ ಮಾಡ್ರಿ ಮಾಡಿಸಿಕೊಳ್ರಿ
ಎಲ್ಲಾ ಧೂಳ ಝಪಾಟ್ಯಾಗಿ.....

ಆಮ್ಯಾಲ ಬೇಕಾರ ಕವಿತಾ ಬರೀರಿ.
ಹಿರೇರು ಹೇಳಿಲ್ಲೇನು ಮತ್ತ?
ಮಲೀ ಬಿಟ್ಟು ಮಲೀ ಹಿಡೇದರಾಗ
ಸಾಲೀ ಕಲೀಬೇಕು! ಹಂಗ,
ಡಿಟ್ಟೋ ಬಿಟ್ಟು ಡಿಟ್ಟೋ ಹಿಡಿದ ಮ್ಯಾಲ
ಕವಿತಾ ಬರೀಬೇಕು.

೧೯೬೯

ಈ ಗೀಗಿನ ಕವಿ ತೆಗಳು

*

ಈ
ಗೀಗಿನ ಕವಿ
ತೆಗಳು ಅಂದರೆ ಬೋಳಿ
ಸಿದಂತೆ ಹಳ್ಳಿ
ಹಜಾಮ :
ಅಲ್ಲಲ್ಲಿ ಬರೆ
ದಂತೆ ಚುಟು ಚುಟು
ಕ ತಲೆ ತುಂಬ.

ಬೇಂದ್ರೆ put up
ಗಪ್ಪಿರಲಿ; come
ಬಾರ ಪಾ
ಟೀಲ ಪೀ ಲಂ
ಕೇಶ
ತಿರುಮ
ಲೇಶ
ನಾಡಿಗ ಅಡಿ
ಗಾದಿ ಅನಂಗ
ಮೂರ್ತಿಗಳೆಲ್ಲ ನಿಸ್ಸಾರ
ಅಹಂ Mother
ಎಲ್ಲ ಹೊಸೆದ ಪೂರ್ತಿ
ಲೈನು ಕತ್ತರಿ
ಸಿ ಕಟ್ ಕಟ್
ಕಟ್ಟಿಡ್ಡಿ ಕಟ್ ಮಾಡಿ
ದರೆ ಹಾ ರು

ಚಿ ಹೆಚ್ಚು
ಹಾ ದರ
ಕಡಿಮೆ ! ಕಣ್ಣಿಗೆ
ಕರಿ
ಗೆಡಬು ಕಿವಿಗೆ
Curry
ದೆಣ್ಣೆ.
ಇದೆಲ್ಲಾ ಏಕೆ
ರಾಮಾ
ನುಜನ್ (ಬಿಟ್ಟು ಊರ್
ಮಿಳೆ ಬೆನ್ನು
ಹತ್ತಿ ಸೀತೆ?) ಆ
mary
ಕೆಯಲ್ಲಿ ಹೊಕ್ಕು
ಳಲ್ಲಿ ಹೂವಿಲ್ಲದ್ದ
ಕಂಡ ಪರಿ
ತಾಪವಲ್ಲ
ವೇನ್ರೀ ಕವಿಗಳೇ
ತ್ಯಾದಿಗಳೇ?

೧೯೭೦

ಪಕ್ಷಾಂತರಿಗಳ ಸಮೂಹಗಾನ

(ಒಂದು instant ಚಿಲ್ಲರೆ ಪದ್ಯ)

*

ನಾವು ಪಕ್ಷಾಂತರಿಗಳು.
ನಾವು ಗಂಡಸರಲ್ಲ
ನಾವು ಹೆಂಗಸರಲ್ಲ
ನಾವು ಪಂಡಸರು ! ಒಮ್ಮೊಮ್ಮೆ
ನಾವು ಪಂಗಸರು.
ನಮಗೆ ಬೇಕ್ಕಾದ್ ಮಾಡ್ರಿ.
ಹಿಂದೆ ಬಂದರೆ ಹಾಯಿರಿ ಮುಂದೆ ಬಂದರೆ ಒದೆಯಿರಿ.
ಎಡಕೆ ಬಂದರೆ ಎಳೆಯಿರಿ ಬಲಕೆ ಬಂದರೆ ಬಿಗಿಯಿರಿ.

ನಾವು
ತಿಳುವು ತೊಗಲಿನ ಹೆಣಗರಲ್ಲ.
ಕಂಡ ಕಂಟಿಗೆ ಕಾಲು ಎತ್ತುವ
ಒದ್ದ ಕಾಲಿಗೆ ಮುದ್ದು ಮಾಡುವ
ಸ್ವಾಮಿ ಭಕ್ತ ಸೊಣಗರು !

ನಮಗೆ ಹೆಸರೇ ಇಲ್ಲ.
ನೀವು ಬೇಕ್ಕಾದಾಗ ಕುಟ್ಟುಟ್ಟ ಕುರ್‍್ರ ಅಂದು
ಹೇಲಗುಗ್ಗುರಿ ತಿಂದು
ಬೇಕ್ಕಾದ ಹೆಸರಿಡಿರಿ.
ನೀವು ಕೊಟ್ಟದ್ದೇ ನಮ್ಮ ಹೆಸರು.

ಸ್ವಾಮಿ, ನೀವು ಬೇಕ್ಕಾದ್ ಮಾಡ್ರಿ.
ನೀವು ಗುಂಡು ಹೊಡಿರಿ.
ಹುತಾತ್ಮರಾಗುತ್ತೇವೆ.
ನೀವು ಪಂಪು ಹೊಡಿರಿ,
ಮಹಾತ್ಮರಾಗುತ್ತೇವೆ.

ನೀವು ಜೋಕು ಹೊಡಿರಿ, ನಾವು ನಗುತ್ತೇವೆ.
ಹೋಗೋ ಹೋಗು – ಅನ್ನಿರಿ,
ಮುಂದಿನ ಮನೆಗೆ ಹೋಗುತ್ತೇವೆ.

ನಾವು
ಯಾವ ಪಸ್ಸಿನ ಗೂಢ ಪಾಪ ಲೇಪಿತರಲ್ಲ.
ನಕ್ಷತ್ರ ಲೋಕದ ರೈಲಿನೋಟಕ್ಕೆ
ತಂತಿ ಮೀಟುವರಲ್ಲ.
ನಾವು ಈ ಇವತ್ತಿನ ದಿವಸದ
ಈ ನೆಲದ ಈ ಗಾಳಿಯ ಈ ಬೆಂಕಿಯ
ಈ ಇತ್ಯಾದಿಗಳ ಮಕ್ಕಳು,

ಮುಂಡೇ ಮಕ್ಕಳು.
ಅಪ್ಪನ ಅರಿವಿಲ್ಲ ಅವ್ವನ ಖಬರಿಲ್ಲ
ಮಕ್ಕಳದಂತೂ ಹೆದರಿಕೆ ಇಲ್ಲ.
ಏಕೆಂದರೆ ನಾವು ಪಂಡಸರು ಮತ್ತು ಆಗೀಗ ಪಂಗಸರು.

ನೀವು ಸೀಟಿ ಹೊಡೆದರೆ ಸಾಕು,
ನಾವು ಜಯಘೋಷ ಹಾಕುತ್ತೇವೆ.
ಉದಾ :
ಇಂದಿರಾ ಗಾಂಧಿಗೆ ಜಯವಾಗಲಿ.
(ಮಹಾತ್ಮಾ ಗಾಂಧಿಗೂ ಜಯವಾಗಲಿ).
ಸಣ್ಣ ಕಾರಿನ
ಸಂಜಯ ಗಾಂಧಿಗೆ ಜಯವಾಗಲಿ.
ಪ್ರೊಫೆಸರ್ ಪೋಎಟ್ ಜನಸಂಘ ಕ್ಯಾಂಡಿಡೇಟ್
ಉಡುಪಿಯ ಅಡಿಗರಿಗೆ ಜಯವಾಗಲಿ.
ಯಾರ‍್ಯಾರಿಗೆ ಬೇಕೋ ಅವರಿಗೆಲ್ಲ
ಜಯವಾಗಲಿ.

ಅಂತೂ
‘ಸರ್ವರಿ’ಗೆ,
ಅಂದರೆ ನಮಗೆ
ಜಯವಾಗಲಿ! ೧೯೭೧

ಭಾಗ : ಎರಡು

೧೯೭೨-೧೯೭೩

ಮಣಿಕಟ್ಟಿಗೊಂದು ವಾಚು

*

ಸಿಕ್ಕಿಸಿಕ್ಕವರ ಮಣಿಕಟ್ಟಿಗೆ
ಕಣ್ಣು .... ಸಾಧ್ಯವಿದ್ದರೆ ಕೈ .... ಹಾಕಿ
ಟೈಮೆಷ್ಟು ? ಕೇಳಿ, ಟೈಮಿಷ್ಟು ಅಂದಾಗ
ಇರಬಹುದು ಅಂದುಕೊಂಡು
ಮುಗಿಲು ನೋಡಿ ನೆರಳು ನೋಡಿ
ತಾಸು ಹೆಚ್ಚು ತಾಸು ಕಡಿಮೆ ....
ಹೀಗೆ ಕೈಗೆ ವಾಚಿಲ್ಲದೆ,
ನಾಚಿಕೆ ಇಲ್ಲದೆ
ಸಂಸಾರ ಮಾಡಿದವ ನಾನು.

ಇಲ್ಲಿ – ಇಂಗ್ಲಂಡಿನಲ್ಲಿ –
ಹಾಗೆ ಮಾಡುವಂತಿಲ್ಲ.
ಕಲ್ಲು ತೂರಿದ ಹಾಗೆ ಪ್ರಶ್ನೆ ಕೇಳುವಂತಿಲ್ಲ.
ಮುಗಿಲ ಕಡೆ ನೋಡುವಂತಿಲ್ಲ.
ನೆರಳು ನಂಬುವಂತಿಲ್ಲ.

ಕಣ್ಣಲ್ಲಿ ಹಣುಕಿದರೆ
ಹನ್ನೆರಡೊ, ಹದಿಮೂರೊ, ಹದಿನಾಲ್ಕೊ,
ಎದೆ ಪಾಡುಗಾಯಿ. ತೊಡೆ ಎಳೆಬಾಳೆ.
ಈಗಾಗಲೇ ಎದೆ ಹಣ್ಣಾಗಿ, ತೊಡೆ
ಈಡನ್ ಬೃಂದಾವನದಲ್ಲಿ ಕಾರಂಜಿ
ಹೀರಿರಬಹುದು.
ಉತ್ತ ಬೀಜ ಉಸುಲು ಪಡೆವುದರೊಳಗೆ
ಲೀನವಾಗಿರಬಹುದು.

ಇಲ್ಲ. ನೆರಳು ನಂಬುವಂತಿಲ್ಲ.
ತೋಲುಮೈ – ಜೋಲುರೆಪ್ಪೆಯ ಗಂಡು
ಬಿದ್ದು ಎದ್ದರೆ ಸಾಕು

ಸಹಾರಾದಲ್ಲಿ ಹಸಿರುಕ್ರಾಂತಿ ಮೊಳಗಿಸಬಹುದು.
ಮಂಜು ಮುಗಿಲು, ಮಬ್ಬು ಮುಗಿಲು, ಹುಂಬ ಮುಗಿಲು.
ಹೊಟ್ಟೆಯೊಳಗೆಂಥಲ್ಲಿ ಸೂರ್ಯ – ಚಂದ್ರ – ಚಿಕ್ಕೆಗಳನ್ನ
ಅವಚಿಕೊಂಡಿದೆಯೇನೊ.
ಮುಗಿಲು ನಂಬುವಂತಿಲ್ಲ.

ಇಬ್ಬನ್ನಿ ಈಸುತ್ತ ಆಗೀಗ ಬಿಸಿಲು
ಕೆಳಗಿಳಿದು, ಹಸಿರು ಹುಲ್ಲಿನ ಮೇಲೆ
ಹಳದಿ ಎಲೆಗಳ ಮೇಲೆ ಹಾಸುಗಲ್ಲಿನ ಮೇಲೆ
ತೆರೆದ ಎದೆಗಳ ಮೇಲೆ
ಕರೆದ ತೊಡೆಗಳ ಮೇಲೆ ಮಲಗುತ್ತದೆ.
ಮುಂಜಾವಾಗಿರಬಹುದು ಇಲ್ಲ ಸಂಜೆ
ಯಾಗಿರಬಹುದು ಇಲ್ಲ
ಸಂಜಾವು ಆಗಿರಬಹುದು
ಏಕೆಂದರೆ

ಇಲ್ಲಿ ಸೂರ್ಯ
ಸಭ್ಯ ಗ್ರಹಸ್ಥನಲ್ಲ.
ತೊಡಕುಕಾಲು, ಅಡ್ಡಕಿರಣ. ಅಡ್ಡಡ್ಡ ಸನ್ನೆ.
ಎದೆಗುದಿಯ ಅನನುಭವಿ ಉಡಾಳಪ್ರೇಮಿ.
ಅವನು ಹರಗ್ಯಾಡಿದಂತೆ
ನೆರಳು ಕಾಲಕಾಲಲ್ಲೆ ಸುಳಿಯುತ್ತದೆ. ಅವನು
ಮನಸಿನಾಚೆಯ ಮಂಜಲ್ಲಿ ಕರಗಿದಾಗ
ನೆರಳು ಇಂಗುತ್ತದೆ –
ಎದೆಯಲ್ಲಿ ತೊಡೆಯಲ್ಲಿ ಕಣ್ಣಲ್ಲಿ ಕನಸಲ್ಲಿ.

ಹೌದು. ಇಲ್ಲಿ
ಮಣಿಕಟ್ಟಿಕೊಂದು ವಾಚು ಬೇಕೇಬೇಕು,
ಟಿಕ್ ಟಿಕ್ ಅಂದರೂ ಅಷ್ಟೆ. ಗಪ್ಪಿದ್ದರೂ ಅಷ್ಟೆ.
ಅದರಿಂದಲೇ
ಮುಗಿಲಿಗೆ ನೆರಳಿಗೆ ಭಂಡ ಬಿಸಿಲಿಗೆ
ಒಂದು ರೀತಿಯ
ಅರ್ಥ.

೧೯೭೨

ಇಂಗ್ಲಂಡಿನ ಮುದಿಯರು

*

ಕುಳಿತಿದ್ದಾರೆ ಬುದ್ಧನ ಹಾಗೆ
ಉಣ್ಣೆಯ ಚೀಲದಲ್ಲಿ.
ಕುಸಿಗೋಣು ಮಾಡಿ ಬತ್ತಿಯ ಹಾಗೆ
ಎಣ್ಣೆಯಿಲ್ಲದ ಪಣತಿಯಲ್ಲಿ.

ಸುಂಯ್‌ಗುಡುವ ಕಾರುಗಳು. ಕಣ್ಣು
ಹೊಡೆಯುವ ಕೆಂಪು ಹಸಿರು ಲೈಟು. ಲುಟು ಪುಟು
ಜಿಗಿವ ಮಕ್ಕಳು. ಮೈಗೆ ಮೈ
ತಿಕ್ಕುತ್ತ ಪುರುಪುರು ಉರಿವ
ಗಂಡುಗಳು ಹೆಣ್ಣುಗಳು ಹಿಂದೆ ಮುಂದೆ
ಎಡಕ್ಕೆ ಬಲಕ್ಕೆ

ಪುಟಿವ ಕಾರಂಜಿ ನಡುವೆ
ತೂಗುತ್ತಿದ್ದಾರೆ.
ಬುದ್ಧನ ತಲೆ ಮೇಲಿನ
ಬೋಧಿವೃಕ್ಷದ ಬೋಳು ಟೊಂಗೆಯಂತೆ.
ಅಥವ ಗಾಳಿ
ಉಫ್ ಅಂದರೆ ಸಾಕು
ಅಲುಗುವ ಜೋ
ತಾಡುವ ಕಳಚು
ವ ಹಳದಿ ಎಲೆಯಂತೆ

೧೯೭೨

ಇಂಗ್ಲಂಡ್ : ಒಂದು ಬಯಕೆ

*

ಸ್ವಲ್ಪ
ಬಿಸಿಲು ಬಿದ್ದರೆ ಸಾಕು. ಎದ್ದು
ಹೊರಗಡೆ ಹರಿದು ದಾರಿಬದಿ
ಬೆಂಚು ಆಕ್ರಮಿಸಿ
ಗ್ಲೋವ್ಸ್ ಹಾಕಿದ ಕೈಗೆ ಕೈ ಹೆಣೆದು
ಗುಬ್ಬಿ ಮರಿಯಾಗಿ ಕುಸಿಕುಳಿತ
ಮುದುಕರು, ಮುದುಕಿಯರು...

ಬಸ್ ಸ್ಟಾಪ್ ಬಳಿಗೇ
ಬೆನ್ನಿಗೊಂದು ಕೈ ಮೊಲೆಗೊಂದು ಕೈ
ಕೊಟ್ಟು, ಕಣ್ಣ ಕಣ್ಣಲ್ಲೆ
ಬಿದ್ದಾಡಿ ಮುದ್ದಾಡಿ ಹೊರಳ್ಯಾಡಿ
ಮುದ್ದಿಯಾಗುವ
ಹುಡುಗ – ಹುಡುಗಿಯರು....

ತಾಯ ಕಾಂಗರೂ – ಚೀಲದಲ್ಲಿಯೇ
ನನ್ನ ಕರಿಮುಖ ನೋಡಿ
ಬೆಳ್ಳಗೆ ನಗುವ
ಮಗು....

ಇವರನ್ನೆಲ್ಲ
ಹೀೕೕಗೆ
ಶಬ್ದದಲ್ಲಿ ಹಿಡಿದು ಬೂಚು ಹಾಕಿ
ಹಿಪ್ ಪಾಕೆಟ್‌ನಲ್ಲಿ ತುರುಕಿ
ತಿರುಗಬೇಕೆನ್ನಿಸುತ್ತದೆ.

೧೯೭೨

ಮಹಾತ್ಮಾ ಗಾಂಧಿ ಮತ್ತು ನಾಯಿ

*

ಬಿಳಿಯರ ಈ ಇಂಗ್ಲಂಡಿನಲ್ಲಿ
ನನ್ನ ದಾರಿ ನಾ ಹಿಡಿದು
ಹೊರಟಿದ್ದಾಗೊಮ್ಮೆ

ಬಿಳಿನಾಯಿಯೊಂದು ಬೆನ್ನತ್ತಿತು.
ಹಚ್ಯಾ ಹಚ್ಯಾ ಅಂದೆ. ಗೌ ಗೌ ಅಂತು.
ಟಾಮಿ ಟಾಮಿ ಅಂದರೂ ಗೌ ಗೌ ಅಂತು.
ಒಡೆಯ ಕರೆದಾಗ
ನನ್ನನ್ನೊಮ್ಮೆ ದುರುದುರು ನೋಡಿ
ಹಿಂದೆ ಬಾಲ ಸಿಗಿಸಿಕೊಂಡು
ಹಿಂತಿರುಗಿತು.

ದುರ್ಯೋಧನನಂತೆ ಕೆಟ್ಟ
ಥಂಡಿಯಲ್ಲೂ ಬೆವರಿ
ಸೌಥಾಫ್ರಿಕೆಯಲ್ಲಿ ಮಹಾತ್ಮಾ ಗಾಂಧಿ
ಗಾದದ್ದು ನೆನಿಸಿಕೊಂಡೆ.

ಈಗ ಯಾವ ಬಿಳಿ ಮೋತಿ ಕಂಡರೂ –
ನಾಯಿಯದಿರಲಿ ಮನುಷ್ಯರದಿರಲಿ –
ನಾನೊಬ್ಬ
ಮಹಾತ್ಮಾ ಗಾಂಧಿ
ಅನಿಸುತ್ತದೆ.

೧೯೭೨

ಧ್ವಂಸ

*

‘ನಿನ್ನ ಸಾಮ್ರಾಜ್ಯದ
ಗಡಿ ಕಿಸಿದೆ. ಒಳಹೊಕ್ಕೆ.
ಮುಂಜರಿದೆ. ಹಿನ್ನುಗ್ಗಿ ಮುನ್ನುಗ್ಗಿ ಹಿಂಜರಿದು
ರಾಜಧಾನಿಯ ಮೇಲೆ ಬೆಳ್ಳಿ ಮಳೆ
ಗರೆದೆ.
ಅಂತೂ ಇಂತೂ ನಿನ್ನ ನಾನು
ಗೆದ್ದೆ.’

ಎದ್ದೆ.
ಬಡಬಡಿಸುತ್ತ
ಸುತ್ತ
ತೊಡಗಿದೆ ಗಾದೆ.

‘ಹುಚ್ಚಪ್ಪ’
– ಎಂದು ಅದುರಿತು ತುಟಿ.
ಅರಗಚ್ಚ ಮಳೆ ಇಂಗಿ, ಮತ್ತೆ
ಬಿರುಕು, ಎರೆಬೀಡು. ನೀರಡಿಕೆ.
ಮತ್ತೆ
ಖಾಲಿ ಮುಗಿಲಿನ ತುಂಬ ಕರಿ ಕರಿ ಮೋಡ.
ಗುಡುಗು ಸುಳಿದಾಡಿ ತಿಣುಕಿತು ಮಿಂಚು.

ಸಿಡಿಲು ಹೊಡೆದಾಗ
ಇಬ್ಬರೂ ಧ್ವಂಸ.

೧೯೭೨

ಅಂತರ

*

ಮೊದಲನೇ ಸಲ
ನಿನ್ನನ್ನೋದಿದಾಗ
ನೀನು ಕಂಸಿನೊಳಗೋ ಇಲ್ಲ
ದಪ್ಪಕ್ಷರದೊಳಗೋ
ಇದ್ದು
ಕಣ್ಣಿಗೆ ಹೊಡೆಯುತ್ತಿದ್ದಿ.

ಈಗ ನೋಡಿದರೆ
ಮಟಾಮಾಯ !
ಎಲ್ಲಿ ಅಂತ ಅತ್ತಿತ್ತ ಹುಡುಕಾಡಿದರೆ :

ನನ್ನ ಭಾಷೆಯ ಸ್ವರ-ವ್ಯಂಜನ-ಕೊಂಡಿ-ಕೊಂಬು
ಸುತ್ತಿಕೊಂಡು, ಕೈಗೆ ಸಿಕ್ಕದ ಹಾಗೆ
ಕವನದರ್ಥದ ಹಾಗೆ
ಜಾರುತ್ತಿ. ಜಾರಿ ಜಾರಿ
ಕಣ್ಣಲ್ಲಿ ಹಾರಿ ಮೈ-ಮನಸಿನುದ್ದಕ್ಕೂ
ಜೋಕಾಲಿ ಜೀಕುತ್ತಿ.

ಅಲ್ಲ?

೧೯೭೨

ಟಿಪ್ಪಣಿ

*

ನನಗರ್ಥವಾಗುವುದಿಲ್ಲ ನಿನ್ನ ಕವಿತೆ.
ಅಕ್ಷರಕ್ಷರದ ನಡುವೆ
ಏನೊ ಕಿವಿಕಚ್ಚಾಟ.
ಶಬ್ದ ಶಬ್ದದ ನಡುವೆ ಕಣ್ಣು ಮುಚ್ಚಾಲೆ

ಸಾಲು ಸಾಲುಗಳ ನಡುವಿನ ಮೌನ
ತುಟಿ ಬಿಗಿದು ಮಾಡುತ್ತಿರುವ
ಸನ್ನೆ
ನನಗೆ ಸೊನ್ನೆ

ಬೇಗ
ಸರಳಗದ್ಯದಲ್ಲಿ
ಅಡಿ ಟಿಪ್ಪಣಿ ಬರೆದು ಕಳಿಸು.

೧೯೭೨

ಪ್ರೀತಿ_ಅಂದರೆ

*

ಪ್ರೀತಿ ಅಂದರೆ
ಗೋರಿ ಅಗಿದಂತೆ.
ನಾನು ನಿನ್ನೊಳಗೆ ನೀನು ನನ್ನೊಳಗೆ.

ಅಗಿಯುವುದು ಅಂದರೆ
ಆಳದಲ್ಲೇನೇನೊ ಹುಡುಕಲು ಹೋಗಿ
ಎಲುಬು ಹಿರಿಯುವುದು. ಹಿರಿದು
ಹೊರಗೆ ಎಸೆಯುವುದು.

ಅಹುದು.
ಅಗಿಯುತ್ತ ಅಗಿಯುತ್ತ ಸುರಂಗ ಕೊರೆದು,
ಪೃಥ್ವಿಯಾಚೆಯ ಕಿಂಡಿಯಿಂದ
ಹೊರಬಂದು
ನಾವು
ಕೂಡಬಹುದು.

ಬಹುದು.

೧೯೭೨

ಕನಸುಗಳು

*

ಕನಸುಗಳು.....

ಬಾಳೆಗಿಡದ ಸುತ್ತ ಮಲ್ಲಿಗೆ ಬಳ್ಳಿ.
ಗೊನೆ ಬಾಗಿ
ತೆರೆದ ಮಲ್ಲಿಗೆ ಹೊಕ್ಕ ಸುಲಿದ ಬಾಳೆಯ
ಹಣ್ಣು.

ಕಾಯಾಗಿ ಮಾಗಿ
ಹಣ್ಣಾಗಿತ್ತು ಮಲ್ಲಿಗೆ.
ಹೂವಾಗಿ ಬಿರಿತಿತ್ತು ಬಾಳೆ ಹಣ್ಣು.
ಈಗ ಮಲ್ಲಿಗೆ ಸುತ್ತ
ಬಾಳೆ–ತೋಳು.

ಕನಸುಗಳು. ವಿ –
ಚಿತ್ರ ಕನಸಗಳು.

೧೯೭೨

ಕ್ರಿಸ್‌ಮಸ್ ಗೀತೆ

*

ಗಂಡುಹೆಣ್ಣು ಗಂಡುಹೆಣ್ಣು ಗಂಡುಹೆಣ್ಣು ಗಂಡುಹೆಣ್ಣು
ಟೇಪು ತಿರುಗಿ ತಿರುಗಿದಂತೆ ಗಾನ ಸುರುಳಿ ಸುರುಳಿ ಬಿಚ್ಚಿ
ಗಾಳಿಯಾಗಿ ಮೈಯ ಹೊಕ್ಕು ಗಂಡುಹೆಣ್ಣು ತುಟಿಗೆ ತುಟಿ
ಕಟಿಗೆ ಕೈ ಗಂಡುಹೆಣ್ಣು ಕಣ್ಣಿನಂಚಿನಲ್ಲಿ ಒಸರಿ
ಮೌನದಲ್ಲಿ ಏನೊ ಉಸುರಿ ಏನು ಬೇಕು ಮುತ್ತು ಬೇಕು
ಮುತ್ತು ಹಿಡಿ ಮತ್ತೆ ಏನು ಗಂಡುಹೆಣ್ಣು ಮತ್ತೆ ಏನೊ
ತುಟಿಯ ಬಿರಿತ ಮೊಲೆಯ ಮಿಡಿತ ನಡದ ಸುತ್ತ ಕೈಯ ಹಿಡಿತ
ಕೆಂಪು ಚರ್ಮ ಬಿಳಿಯ ಚರ್ಮ ಕಪ್ಪು ಕರಿ ಕಂದು ಚರ್ಮ
ಮಬ್ಬುಗತ್ತಲಲ್ಲಿ ಬರಿ ನೆರಳು ನೆರಳು ಗಂಡುಹೆಣ್ಣು
ಗಾಳಿ ಬಳ್ಳಿಯಲ್ಲಿ ಹೊಕ್ಕು ಎಲೆ ಹೂವು ಮೊಗ್ಗೆ ಪಕಳೆ
ಕುಣಿಸಿದಂತೆ ಪರಮೇಶ್ವರ ಬ್ರ್ಯಾಂಡಿ ಕುಡಿದು ಹೆಣ್ತಿ ಕೂಡ
ಬಿದ್ದು ಎದ್ದು ಮಣಿದು ಕುಣಿದು ಸೃಷ್ಟಿಕರ್ಮ ನಡೆಸಿದಂತೆ
ಗಂಡುಹೆಣ್ಣು ಕಂಟಮಟ ವಿಸ್ಕಿ ಬ್ರ್ಯಾಂಡಿ ಕಣ್ಣಗುಂಟ
ಸೋರಿ ಸೋರಿ ತುಟಿಯ ತುದಿಗೆ ಮುಗುಳಾಗಿ ನಗೆಯಾಗಿ
ಗಂಡನೆಲ್ಲೊ ಹೆಣ್ತಿಯಲ್ಲೊ ಎಲ್ಲೆಲ್ಲೂ ಗಂಡುಹೆಣ್ಣು
ಲಿಲಿ ಕ್ರಿಸ್ ಆಗಸ್ಟಿನ್ ಮಾರ್ಗರೆಟ್ ಸೂ ಚಂದ್ರ
ಗಂಡುಹೆಣ್ಣು ಪ್ಯಾಟ್ ಕೆವಿನ್ ಬಾಬ್ ಲಲಿತ ಕಿಂಗ್ ಗಂಗಿ
ಏನು ನಲ್ಲೆ ಹೌ ಆರ್ ಯು ಫೈನ್ ನಲ್ಲ ಹೌ ಆರ್ ಯು
ಗ್ಲಾಸು ತಾ ವೈನು ಸುರುವು ಗಂಡುಹೆಣ್ಣು ಬಳಿಗೆ ಬಾ
ಬಂದೆ ನೋಡು ಪಿಸುಮಾತು ನಿನ್ನ ನಗೆ ನನ್ನ ಕಣ್ಣು
ಸೀಳಿ ಹೊಕ್ಕು ಎಲುಬಿನಲ್ಲಿ ಬೆಂಕಿ ಸುರಿದು ಹರಗ್ಯಾಡಿ
ಹೊರಗೆ ಥಂಡಿ ಒಳಗೆ ತಿಂಡಿ ಹೊರಗೆ ಗಿಡ ಮರ ಕಂಟಿ
ಲೈಟಿನಲ್ಲಿ ಬತ್ತಲೆ ಕತ್ತಲಲ್ಲಿ ಇಲ್ಲಿ ನೀನು

ಸೀರೆ ಫ್ರಾಕು ಅದು ಇದು ತೊಟ್ಟ ನೀನು ಬತ್ತಲೆ
ಗಂಡುಹೆಣ್ಣು ತೇಲಿ ಬರುವ ಜಾಸ್ ಗಾನ ಗಂಡುಹೆಣ್ಣು
ತಮ್ಮ ಕುಣಿತಕಲ್ಲವೇನ ನಮ್ಮ ಕುಡಿತಕಲ್ಲವೇನ
ಗಲ್ಲ ಹೊರಳಿಸಿಲ್ಲಿ ಇದೋ ಹಿಡಿ ಬೆಲ್ಲ ಹಿಡಿದೆ ನಲ್ಲ
ನಿನ್ನ ಹೆಸರು ಗೊತ್ತಿಲ್ಲ ನನ್ನದು ಬೇಕ್ಯಾರಿಗೆ
ವಿಸ್ಕಿ ಗುಟುಕು ಗುಟುಕರಿಸುತ ದೇವರಂತೆ ಬುದ್ಧನಂತೆ
ಪೃಥ್ವಿಯಂತೆ ಕುಳಿತ ನಾನು ಗಂಡುಹೆಣ್ಣು ಗಂಡುಹೆಣ್ಣು
ತೇಲುಗಣ್ಣ ಕದ ತೆರೆದೆ ಬಂದರವರು ಒಳಹೊಕ್ಕರು
ನರದ ತುಂಬ ಸುಗ್ಗಿ ಕುಣಿತ ಲೇ ಲಾಲಿ ಲೇಸೋ
ಮೂರು ಮಾತ್ರೆ ಗಣಗಳೆಲ್ಲ ಪುಟ್ಟ ಪುಟ್ಟ ಕಾಲಾದವು
ತೊಡೆಯಾದವು ಸೊಂಟವಾಗಿ ಮೊಲೆಯಾದವು ಮುಖವಾದವು
ಪೃಥ್ವಿ ತಿರುಗಿ ಸೂರ್ಯ ಚಂದ್ರ ಚಿಕ್ಕೆಯಿಂದ ಬೆಳಕ ಹಿಂಡಿ
ಕನಸಿನಲ್ಲಿ ತುರುಕಿತು ರಕ್ತದಲ್ಲಿ ಬಿತ್ತಿತು
ನಾನು ನಾನು ಅಂದರೇನು ನಾನು ನೀನು ಅಲ್ಲವೇನು
ಅವನು ಅವಳು ಇವನು ಇವಳು ಸರ್ವಗಿರ್ವನಾಮವೆಲ್ಲ
ಅದು ಇದು ಎಲ್ಲ ಒಂದು ಗಂಡುಹೆಣ್ಣು ಗಂಡುಹೆಣ್ಣು
ಪೃಥ್ವಿ ತಿರುಗಿ ಟೇಪು ತಿರುಗಿ ಗಾನ ಹರಿದು ಮಡುವಾಯಿತು
ಮಡುವಿನಲ್ಲಿ ತಿರುಗಿ ತಿರುಗಿ ತಳ ಕಂಡೆ ಬುಡ ಕಂಡೆ
ಬಡಕೊಂಡೆ ಎಲ್ಲಿ ಲಿಲಿ ಎಲ್ಲಿ ಬಾಬ್ ಗಂಗಿ ಗೌರಿ
ಎಲ್ಲೆಲ್ಲೂ ಗಂಡುಹೆಣ್ಣು ಯಾವ ಹೆಣ್ಣು ಯಾರ ಹೆಣ್ಣೊ
ಯಾರ ಬಾಯಿಗೀಗ ಹಣ್ಣೊ ಕುಣಿ ಕುಣಿ ಕುಡಿ ಕುಡಿ
ಶಿವ ಹೆಲೆನ್ ಮಾವೊ ಸೀತೆ ಇಂದಿರಾ ನೆಪೋಲಿಯನ್
ಗಣಪ ರೂಥ್ ಗಂಡುಹೆಣ್ಣು ಕಾಮರಾಜ ಜಾಕೆಲಿನ್
ನಿದ್ದೆಯಲ್ಲಿ ಕುಣಿದರು ಇತಿಹಾಸದ ಪೇಜು ಹರಡಿ
ಥೈ ಥೈ ತುಳಿದರು ನಿನ್ನೆ ನಾಳೆ ಅಡ್ಡಗಟ್ಟಿ
ಇಂದಿನಲ್ಲಿ ಗಂಡುಹೆಣ್ಣು ಗಂಡುಹೆಣ್ಣು ಕುಡಿದರು
ಈ ಕ್ಷಣದ ಮೊಲೆ ಹಿಚುಕಿ ಈ ಕ್ಷಣದ ಬೆಂಕಿ ಸವಿದು
ಈ ಕ್ಷಣದಲಿ ಉರಿದು ಬೆಳಗಿ ಈ ಕ್ಷಣದಲಿ ಮಡಿದರು.
ಗುಡ್ ನೈಟ್ ಓ ಕೇ ಸ್ವೀಟ್ ಡ್ರೀಮ್ಸ ಜೋಕೇ
ಸೀ ಯು ಲೇಟರ್ ಹೋಪ್ ಸೋ ಸಾಕೇ ಓಕೇ
ಹಾಕಿ ಕೇಕೆ ನಕ್ಕರು ಒಬ್ಬರೊಳಗೆ ಒಬ್ಬರು

ಒಳಹೊಕ್ಕರು ಹೊರಬಂದರು ನಕ್ಕು ಮತ್ತೆ ಹೊಕ್ಕರು
ನೆರಳು ನೆರಳು ಬೆರಳು ಹೆಣೆದು ಒಂದಾದವು ಎರಡಾದವು
ಗಂಡುಹೆಣ್ಣು ಟೇಪು ತಿರುಗಿ ಗಂಡುಹೆಣ್ಣು ಗಾನ ಹರಡಿ
ಕ್ರಿಸ್ತ ರಕ್ತದಂಥ ವೈನು ಕುಡಿದರು ಮೈಯ ತುಂಬ
ಕಣ್ಣ ಮೊಳೆಯ ಜಡಿದು ಜಡಿದು ಕೊಂದರು ಮೈಯ ತುಂಬ
ಬಡಿದುಕೊಂಡು ಸತ್ತರು ಹುಟ್ಟಿದರು ಬದುಕಿದರು
ಟೇಪು ತಿರುಗಿ ಗಂಡುಹೆಣ್ಣು ಗಂಡುಹೆಣ್ಣು ಗಂಡುಹೆಣ್ಣು......

೧೯೭೨

ಇಂಗ್ಲಂಡಿನಲ್ಲಿ ಮಂಜು

*

ಕಂಟಮಟ ಕುಡಿದಾಗ ಇದ್ದೇನೆಂದರಿದ್ದೇನೆ
ಇಲ್ಲವೆಂದರೆ ಇಲ್ಲ. ಹಾಗೆ
ಇಲ್ಲಿ ಮಬ್ಬು ಡಬ್ಬು ಹಾಕಿದಾಗ
ಬೆಳಗು ಮುಂಜಾನೆ ಮದ್ಯಾಣ ಸಂಜೆ ರಾತ್ರಿಗಳೆಲ್ಲ
ಒಂದರೊಳಗೊಂದು ಹೊಕ್ಕೊಂಡು
ವಾರ–ತಾರೀಖು ನೋಡಲು ದಿನಪತ್ರಿಕೆಯ
ಹಾದಿ ಕಾಯಬೇಕಾಗುತ್ತದೆ.

ಕಿಡಕಿ. ಕಿಡಕಿಯಾಚೆ ಜಗತ್ತು.
ಆಫ್ರಿಕನ್ನರ ತಲೆ ಹಾಗೆ ಗಿಜಿಬಿಜಿಯೆನುವ
ಹೂವಿರದ ಎಲೆಯಿರದ ಕಡ್ಡಿ ಕಡ್ಡಿ ಗಿಡ
ಟೊಂಗೆ ಟೊಂಗೆಗೆ ಟುಣ್ ಟುಣ್ ಹಾರಿ ಆಗೀಗ
ಜೀವರಸದ ಗುಳ್ಳೆ ಎಬ್ಬಿಸುವ
ಪುಟ್ಟ ಪುಟ್ಟ ಚಿಟಗುಬ್ಬಿಯಂಥ ಪಕ್ಷಿ.
ಬೂದಿ ಮುಗಿಲಲ್ಲಿ ಬೂದಿ ಮಂಜಲ್ಲಿ
ಬಣ್ಣ ಕಳಕೊಂಡು ಬರಿ ಕರಿಯ ಗೆರೆಯಾಗಿ
ಹರಿದಾಡುವ ಪಕ್ಷಿ.

ಈ ಮಂಜಿನಲ್ಲಿ ಧುಮುಕಿದರೆ ತೀರಿತು
ಸುತ್ತ ಮಂಜಿನ ಗಾಲಿ. ಚೆಂದಪ್ಪನ ಸುತ್ತ
ಚೆನ್ನಮ್ಮನ ದಂಡೆ. ಆ ದಂಡೆಯಾಚೆ
ಜಗತ್ತು. ಮಂಜಿನ ಜಗತ್ತು. ಈ ಗಾಲಿ
ಕೊರಳಿಗೆ ಕಟಿಕೊಂಡು ಈಸುವದಷ್ಟೆ
ಮಾಡಬಹುದಾದ ಕರ್ತವ್ಯ.

ಯಾರೊ ಸಂಭವಿಸುತ್ತಾರೆ ಧುತ್ ಅಂತ. ಹ್ಯಾಮ್ಲೆಟ್‌ನ
ಅಪ್ಪನ ದೆವ್ವದಂತೆ. ಹಲೋ ಅನ್ನುತ್ತಾರೆ.

ಮತ್ತೆ ಕರಗುತ್ತಾರೆ. ಕಳ್ಳನಂತೆ. ವಿಟನಂತೆ.
ಮಾಡಿದ ಮಾಡಲಾಗದ ಪಾಪಕ್ಕೆ ಪ್ರಾಯಶ್ಚಿತ್ತ
ಪಡುವ ಪಾಪಿಯಂತೆ.
ಹಿಂದೆ ಮುಂದೆ ಕಣ್ಣು ಹಾಯಿಸುತ್ತ.
ದಿಕ್ಕಿಲ್ಲದೆ ಘುಟಪಾತು ಬಾ ಅಂದತ್ತ
ನಡೆಯಬೇಕು.

ಬುದ್ಧನಂತೆ ಕ್ರಿಸ್ತನಂತೆ – ಅದೇಕೆ, ಪಕ್ಷಿ ಹೂಡಿದ
ಪುಟ್ಟರಥದಲ್ಲಿ ಮೆರೆವ ನಮ್ಮ ಶನಿದೇವರಂತೆ –
ತಲೆಸುತ್ತ ಮಂಜಿನ ಪ್ರಭಾವಲಯ ಬಿಗಿದುಕೊಂಡು
ಹಿಂದೋ ಮುಂದೋ ಅಂತೂ ಹೊರಟಾಗ

ಸೂರ್ಯನೆಂದೆಂದಿಗೂ ಮುಣುಗದಿದ್ದ ಸಾಮ್ರಾಜ್ಯದ
ಈ ಮಧ್ಯ ಬಿಂದುವಿನಲ್ಲಿ
೩–೪ ದಿನಗಳಿಂದ ಸೂರ್ಯನ ಸುದ್ದಿಯೇ ಇಲ್ಲವಲ್ಲ
ಅನಿಸಿ ನಗೆ ಉಕ್ಕುತ್ತದೆ.
ಉಕ್ಕಿ ಖಿಕ್ ಅಂತ ನಕ್ಕಾಗ ಬಾಯೊಳಗಿಂದ
ಮಂಜು ಹೊಗೆಯಾಗಿ ಚಿಮ್ಮಿ
ಹೊರಗಿನ ಮಂಜಿನೊಡನೆ ಒಂದಾಗುತ್ತದೆ.

೧೯೭೩

ಇಂಗ್ಲಂಡಿನಲ್ಲೊಬ್ಬ ಇಂಡಿಯನ್

*

ಸಾಕ್ಸು ಬನಿಯನ್ನು ಚಡ್ಡಿ ಬೂಟು
ಅಂಡರವೇರು ಶರಟು ಪ್ಯಾಂಟು
ಸ್ವೆಟರು ಕೋಟು ನೆಕ್‌ಟಾಯಿ
ಓವರುಕೋಟು ಹ್ಯಾಟು

ಗಳ ಉಳ್ಳಾಗಡ್ಡಿ ಪದರಗಳಲ್ಲಿ
ಸಿಕ್ಕೊಂಡು ಸೊನ್ನೆಯಾಗಿ
ಕೊಡೆಯ ಬುಡಕ್ಕೆ ಗುಬ್ಬಿಯಾಗಿ
ರೋಡಿನಗುಂಟ ದೆವ್ವನಂತೆ ಉರುಳು

ರುಳಿ ಹೊರಟಾಗ ಹೂ ಕಳಚಿ ಎಲೆ ಬಿಚ್ಚಿ
ಬರೇ ಬತ್ತಲ ಉದ್ದೋಕ ನಿಂತ
ಹಲಕಟ್ಟು ಗಿಡ ಮರ ಕಂಡು
ಹೊಟ್ಟೆಯ ಕಿಚ್ಚು ಕೆಬರುತ್ತಾನೆ.

ಥೂ. ಹೊಟ್ಟೆಕಿಚ್ಚಿಗೂ ಇಲ್ಲಿ ಕಾವಿಲ್ಲ.
ಖಾಲಿ ಹೊಗೆ. ಥಂಡಿ. ಬಾಯಿ ತೆಗೆದರೆ ಸಾಕು
ಬಾಯಿ ತೆಗೆದು ಗಂಟಲು ಕೊರೆದು ಮೈ-ಕೈ-
ಕಾಲು ಸೀಳುವ ಥಂಡಿ. ಬರಿ ಗುಸುಗುಸು ಮಾತು.

ಸಾಮ್ರಾಜ್ಯ ಉರುಳಿಸುವ ಒಳಸಂಚಿನಂತೆ.
ತಂಪು ಮಾತು. ದಿನಗಟ್ಟಲೆ ರಾತ್ರಿಗಟ್ಟಲೆ
ಫ್ರಿಜ್ಜಿನಲ್ಲಿಟ್ಟ, ಹಳಸದ, ಹಳೆಯ ಮಾತು.
ಮತ್ತೆ ಮೌನ. ಸದಾ ಮುಚ್ಚಿದ ಬಾಗಿಲು.

ಮೌನ. ಅಸಹ್ಯ ಮೌನ. ನಾಯಿ ಬೊಗಳುವುದಿಲ್ಲ.
ಕಾರು ಕೂಗುವುದಿಲ್ಲ. ಅಪಶಕುನದ ಬೆಕ್ಕು
ಅಡ್ಡ ಹಾಯುವದಿಲ್ಲ. ಗಟಾರದಗುಂಟ
ಅರ್ಧಾಂಗಿಗಳಾಗಿ ಮಕ್ಕಳು ಕೂಡ್ರುವದಿಲ್ಲ.

ಛೂ. ಇಲ್ಲಿಯ ರೋಡುಗಳಿಗೆ ಗಟಾರಗಳೆ
ಇಲ್ಲ. ಎಲ್ಲ ಭೂಮಿಯ ಒಳಗೆ, ಗಟಾರ
ಪಟಾರ ವಿದ್ಯುತ್ತಂತಿ ಕುಡಿಯುವ ನೀರು.
ರಸ್ತೆ ಕೂಟಕ್ಕೆ ಹಸಿರು ಹಳದಿ ಕೆಂಪುಲೈಟು.

ಇಲ್ಲಿ ರಾಂಗ ಸೈಡಿಲ್ಲ. ಸೀಟಿ ಹೊಡೆದು ಕರೆದು
ಹೆಸರು ಬರಕೊಳ್ಳುವಾಗ ಎಂಟಾಣೆ ಕೊಟ್ಟರೆ
ನಗುವ ಕಂಡಕಂಡಲ್ಲಿ ಸೆಲ್ಯೂಟ ಹೊಡೆಯುವ
ಪೋಲೀಸರಿಲ್ಲ. ಎಂಥ ಸೀಜನ್ನಿನಲ್ಲೂ

ದಾರಿಯ ಮೇಲೆ ನಾಯಿಗಳ ಪ್ರಣಯಲೀಲೆ
ಇಲ್ಲ. ಎಲ್ಲ ನರಮನುಷ್ಯರ ಪಾಲಿಗೇ
ಎಲ್ಲಾ. ಇದ ಕಂಡು ಮತ್ತೊಮ್ಮೆ ಕಿಚ್ಚು
ಕೆಬರುತ್ತಾನೆ. ದೇಶಾಭಿಮಾನದ ಉರಿಗಾಳಿ ಬೀಸಿ

ನನ್ನಜ್ಜ ಮುತ್ತಜ್ಜರನ್ನು ಸುಲಿದವರ
ಮೊಮ್ಮಕ್ಕ – ಮರಿ ಮೊಮ್ಮಕ್ಕಳಲ್ಲವೆ ಇವರು
ಅಂತ ಅವಡುಗಚ್ಚುತ್ತಾನೆ. ಯಾರೋ ಹಲೋ ಅಂದು
ನೀಲಿ ಕಣ್ಣುಗಳಲ್ಲಿ ಪಣತಿ ಹಚ್ಚಿದಾಗ ಹಲೊ ಅಂದು

ಬರೋಬರಿ ಆಗುತ್ತಾನೆ. ರೋಡು ದಾಟಲು ದಾರಿ
ಕಾಯುತ್ತಾನೆ. ಹಸಿರು ಆರಿ ಕೆಂಪು ಉರಿದಾಗ
ಕಾರು ಪಾರುಗಳೆಲ್ಲ ಗಕ್ಕೆಂದು ನಿಂತಾಗ
ಪುಟು ಪುಟು ಪುಟು ಅಂತ ರೋಡು ದಾಟುತ್ತಾನೆ.

೧೯೭೩

ಆರೋಗ್ಯ ಶಾಸ್ತ್ರದ ಮೊದಲ ಪಾಠ

*

ಬಾಯಲ್ಲಿಟ್ಟದ್ದು ಧುಡುಂ ಅಂತ
ಜಠರಕ್ಕೆ ನುಗ್ಗಿದರೆ ಅಪಾಯ.
ಒಂದಲ್ಲ ಎರಡಲ್ಲ ಮೂವತ್ತೆರಡು ಸಲ
ಅಗಿದು, ಜಗಿದು ಜೀವರಸ ನುಂಗಬೇಕು.

ಈ ಪಾಠ ಜಗಿದು ಬಾಯಿಪಾಠ ಮಾಡಿದ, ಪೆಪ್ಪರಮೆಂಟು
ಚಾಕಲೇಟು ದೋಸೆ ಕಟಗು ರೊಟ್ಟಿಗಳಿಂದ
ಅಭ್ಯಾಸ ಸುರುಮಾಡಿ ಕಂಡ ಕಂಡದ್ದಕ್ಕೆ ಬಾಯಿ ಹಾಕಿದ.
ಜಗಿದ. ೧-೨-೩ ಹೀಗೆ ಬೈಠಕ್ಕು ತಗೆದಂತೆ
ಎಣಿಸಿ ಎಣಿಸಿ ಅನುಭವಿಸಿ
ಅನುಭವಸ್ಥನಾದ.

ಹುಡುಗಿಯರ ಕಡೆ ಒಂದಲ್ಲ ಎರಡಲ್ಲ ೧೦ ಸಲ ಎರಡೂ
ಕಣ್ಣು ಹೊಡೆದ. ೧೫ ಸಲ ಪತ್ರ ಬರೆದದ್ದೆ ಬರೆದ.
ಇಡೀ ರಾತ್ರಿ ೧೮ ಸಲ ಮಗ್ಗುಲ ಬದಲಿಸಿ ಕನಸನ್ನು
ಜಗಿಜಗಿದು ೨೦ ಸಲ ಅರಿವೆ ಬದಲಿಸಿದ.
ಬರೆದ.
ಓದಿದ. ಓದಿದ್ದು ಬರೆದ, ಬರೆದದ್ದು ಓದಿ ಮತ್ತೆ
ಬರೆದ. ಎಲಿಯಟ್ ಪೌಂಡರನ್ನು ಬೀರು ಬಾಟಲಿಯಲ್ಲಿ
ಕರಗಿಸಿ ೩೦ ಸಲ ಗುಂಡುಹಾಕಿದ. ಅಡಿಗರಾರ್ಷ ಪ್ರಜ್ಞೆ
ಪ್ರಾಣೇಶಾಚಾರ್ಯರಸ್ತಿತ್ವವಾದ ಸಮಕಾಲೀನ ಪ್ರಜ್ಞೆ
ಎಲ್ಲ ಪ್ರಜ್ಞೆ ತಪ್ಪುವಂತೆ ಜಗಿದು ಜಗಿದು ರೊಮ್ಯಾಂಟಿಕ್ಕರ
ಮೇಲೆ ಚಳ್ಟ ಉಗುಳಿದ.
ಸಮುದ್ರ ಕುಡಿದು ಬಾಯಲ್ಲೆ
ಗುಳು ಗುಳು ಅಂತ ಮುಕ್ಕಳಿಸಿದ. ಮುಗಿಲು ಪರಪರ ಹರಿದು
ಕಟ ಕಟ ಕಡಿದು ೩೨ ಸಲ ಜಗಿದ. ಕೊನೆಗೆ

ಭೂಮಾತೆಯ ಅಂಗಾಂಗಕ್ಕೆ ಬಾಯಿ ಹಚ್ಚಿ
ಮಣ್ಣು ಮುಕ್ಕತೊಡಗಿದ.
ಅವನು ಬಾಯಿ ತೆಗೆದರೆ ಹೊಡೆಯುವುದು ಮಣ್ಣಿನ ವಾಸನೆ.
ನೆರೆಮನೆಯ ಜನದ ಮೂಗಿಗೆಲ್ಲ ಕರವಸ್ತ್ರ–ರಕ್ಷೆ.
ಜಗಿಯಲೇನು ಸಿಗದೆ ಹಾಗೇ ಜಗಿಯುತ್ತ ಕುಳಿತ
೧ ರಿಂದ ೩೨, ೧ ರಿಂದ ೩೨ ಹೀಗೆ ಎಣಿಸುತ್ತ ಕುಳಿತ.
ಹೀಗೆ
೩೩ನೇ ವರ್ಷಕ್ಕೆ ಬಾಯಲ್ಲಿದ್ದ ಹಲ್ಲು
ಕಳಕೊಂಡ.
ಮೊದಲ ಪಾಠ ಕಲಿಸಿದ ಗುರು ಯಾವಾಗಲೋ
ಬಚ್ಚ ಬಾಯಿಗೆ ನಕಲಿ ಹಲ್ಲು ಕಟ್ಟಿಸಿಕೊಂಡು
ಕುಲು ಕುಲು ನಗುತ್ತಿರುವ
ಪರಿಯ
ತಿಳಕೊಂಡ.

೧೯೭೩

ಭಾಗ : ಮೂರು

೧೯೭೪-೭೬

ಸರ್ವಜ್ಞನ ಮ್ಯಾಲೆ ಒಂದ ಕವಿತಾ

*

ಸರ್ವಜ್ಞನ ಮ್ಯಾಲೆ ಒಂದ ಕವಿತಾ
ಬರೀರಿ ಬರೀರಿ ಅಂತ ಹೇಳಿದ್ರು.
ಯಾದ್ಯಾದರ ಮ್ಯಾಲೆ ಎಂಥೆಂಥವರ ಮ್ಯಾಲೆ
ಏನೇನೋ ಬರೀತೇವಂತ
ಸರ್ವಜ್ಞನ ಮ್ಯಾಲೆ ಒಂದು ನಾಕ ಸಾಲು
ಗೀಚೋದು ತ್ರಾಸ?
– ಅಂತ ಅಂಗೈಯಾಗ ತಲೀ ಹಿಡಕೊಂಡು
ತಲ್ಯಾಗ ಅಂಗೈ ಆಡಿಸಿಕೊಂತ ಕುಂತೆ.

ಛೆ ಇವನೌನ.
ತಲೀ ತುಂಬ ತುಡುಗುದನ.
ಸಂಕೇಶ್ವರದ ಸಕ್ಕರೀ ಕಾರಖಾನ್ಯಾಗ
ಕಬ್ಬು ಸಕ್ರಿ ಆಗೂದರೊಳಗ
ತುಡುಗುದನ ಹೊಲಾ ಹೊಕ್ಕು ಕಬ್ಬು ತಿಂದಂಗ.

ದೇಶ ಎಲ್ಲಾ ಕುರುಕ್ಷೇತ್ರ.
ಎಲ್ಲಾ ಕಡಿಗೂ ಲಾಠೀ ಏಟು.
ಬೆಂಗಳೂರ ಪೈಲ್ವಾನರ ಬಾಳೀಹಣ್ಣಿನ ಜಂಗೀ ಕುಸ್ತಿ.
ಸಂಕೇಶ್ವರದಾಗ ಸರ್ವಜ್ಞನ ಜಯಂತಿ.
ಭಾರತ ತುಂಬ ಗಾಂಧೀಜಿ ಪುಣ್ಯತಿಥಿ.

ಮನ್ಯಾಗ ನೋಡಿದರ
ಬೆಳತನಕ ಹೇಣತೀ ಮೌನ ಮೆರವಣಿಗಿ.
ಆಮ್ಯಾಲ
ಆಕೀದ ಬಹಿರಂಗ ಭಾಷಣ.
ಒಂದೇ ಎರಡೇ
ತಲೀ ತುಂಬ ಹಿಂಡದನ.

ಇದೆಲ್ಲಾ ನೋಡಿದಾಗ
ಸರ್ವಜ್ಞ ಮತ್ತೊಮ್ಮೆ ಹುಟ್ಟಿ ಬಾ.....
ಅಂತ ಇಷ್ಟಗಲ ಕಿಸಬಾಯಿ ಕಿಸೇದಕಿಂತ

ನಾನೇ ಸರ್ವಜ್ಞ ಯಾಕಾಗಬಾರದು
ಅಂತ ಅನಸ್ತೇತಿ.

ಈ ಕೋಟು–ಬೂಟು–ಟಾಯಿ–ಗೀಯಿ ಕಳಿಚಿ
ಖಾಲೀ ಲಂಗೋಟಿ ಮ್ಯಾಲೆ ಇಡೀ ಪ್ರಪಂಚಾ ಸುತ್ತಬೇಕು.
ಕಂಡಕಂಡವರ ಕಣ್ಣ ಹಿಂದ ರೆಪ್ಪಿ ಹಿಂದ ಚರ್ಮದ ಹಿಂದ
ಹೊಕ್ಕು ಅವರ ಒಳಗಿನ ಒಳಗಿನ ಗವ್ಯಾಗ ಹೊಕ್ಕು
ಒಳಗಿನಿಂದ ಢಂ ಅಂತ ಅಟಂಬಾಂಬ ಹಾರಸಬೇಕು.
ಜೀವಾ ಹಿಂಡಿ ಮಾತ ಮಾಡಿ
ಡಬ್ಬಣದಾಂಗ ಚೂಪ ಮಾಡಿ
ಕಬ್ಬಣದಾಂಗ ಕಾಸಿ ಕಾಸಿ
ದಪ್ಪ ತೊಗಲಿನ ನಮ್ಮ ಜನಕ್ಕ
ನಮ್ಮ ಮನಕ್ಕ
ಹೆಂಗರ ಮಾಡಿ ಹೆಟ್ಟಬೇಕು.
ಇಂಥಾ ಪದಾ ಕಟ್ಟಬೇಕು–
ಅಂತ ಒಮ್ಮೆ ಅನಸ್ತೇತಿ.
ಹಿಂಗ ಅನಸ್ತೇತಿ ಅನಸ್ತೇತಿ ಅನಕಂತೇನ
ಮೈಯನ ರಕ್ತ ಸುಟ್ಟು ಹೋಗಿ
ಕಬ್ಬಿನನ ರಸ ಸೋರಿ ಹೋಗಿ
ತುಡುಗದನದ ದವಡ್ಯಾಗ ಜಿಬ್ಯಾದ ಕಬ್ಬಿನ ಸಿಪ್ಪಿ

ಇದು
ಸರ್ವಜ್ಞನ ಮ್ಯಾಲಿನ ಈ ಕವಿತಾ.

೧೯೭೪

ಅಕ್ಟೋಬರ್ ೨ ರಂದು ಅಸಾಮಾನ್ಯ
ಗಾಂಧೀಮಾರಾಜನಿಗೆ ಸಾಮಾನ್ಯ ಹೇಳಿದ್ದು

*

ಇವತ್ತಿನ ದಿವಸ,
ಗಾಂಧಿ ಮಾರಾಜ,
ನಮ್ಮದೆಂಥಾ ಪುಣ್ಯಾ ಅಂದಿ!
ಭಾಷಣಾ ಮಾಡಲಿಕ್ಕೆ ಲೇಖನಾ ಗೀಚಲಿಕ್ಕೆ ಕವಿತಾ ಕಿರಚಲಿಕ್ಕೆ
   ಪೇಟಿ ಬಾರಸಲಿಕ್ಕೆ ಡ್ಯಾನ್ಸ ಮಾಡಲಿಕ್ಕೆ
ಎಂಥಾ ಚಾನ್ಸ್ ಅಂದಿ!

ಎಷ್ಟೋ ವರ್ಷದ ಹಿಂದ ನೀ ಹುಟ್ಟಿದ್ದು
ಇವತ್ತ ಸಾರ್ಥಕ ಆತು.
ನೀ ಹುಟ್ಟಿದ ಮ್ಯಾಲೆ ನಾವು ಹುಟ್ಟಿದ್ದು
ನೀ ಸತ್ತ ಮ್ಯಾಗ ನಾವು ಬದುಕಿದ್ದು
ಇವತ್ತ ಸಾರ್ಥಕ ಆತು.

ನೋಡಪ ಗಾಂಧಿ,
ನಾವು ಮಾನ್ಯ ಮಂದಿ ಅಲ್ಲ.
ನಾವು ಸಾಮಾನ್ಯ ಮಂದಿ.

ನೀ ಏನೋ
ಅಹಿಂಸಾ ಅಹಿಂಸಾ ಅಂತ ಎದೀಗೆ ಗುಂಡು ಹೊಡಿಸಿಗೊಂಡಿ.
ಸತ್ಯಾ ಸತ್ಯಾ ಅಂದಿ. ಸತ್ತೇಬಿಟ್ಟಿ.
ರಾಮ ರಾಮ ರಾಮ ಅಂತ ಕೈ ಮುಕ್ಕೊಂಡಿ.
ರಾಜಘಾಟದಾಗ ಬೂದ್ಯಾಗಿ ಅರಾಮ್ ಮಕ್ಕೊಂಡಿ.
ಅಂತೂ ಇಂತೂ ಇತಿಹಾಸದೊಳಗೊಂದು ಜಾಗಾ ಹೊಡಕೊಂಡಿ.

ನಾವು?
ನಾವೇ? ನಿನ್ನ ಹೆಸರಿನ ಚಾಪ್ಟರಿನ ಪ್ಯಾರಾದ ವಾಕ್ಯದ ಶಬ್ದದ
ಅಕ್ಷರದ ಒತ್ತೋ ಕೊಂಬೋ ಕೊಂಡ್ಯೋ ಕೊಸರೋ!

ಹೇಳಿದ್ವೆಲ್ಲ,
ನಾವು ಮಾನ್ಯ ಮಂದಿ ಅಲ್ಲ. ಸಾಮಾನ್ಯ ಮಂದಿ.

ನಾವು ನಿನ್ನ ನೆನೆಸತೀವಿ.
ನೆನಸಬೇಕು ಎನಸತೀವಿ.
ಹಂಗ ಖರೆ ಹೇಳಬೇಕಂದ್ರ
ನೀನ ನಮ್ಮನ್ನ ನೆನಸಬೇಕು! ಅಲ್ಲ.
ನಾವು ನಾವಾಗದಿದ್ರ
ನೀ ನೀ ಹೆಂಗಾಗತಿದ್ದಿ?
ನಾವೇ ಗುಲಾಮರಾಗಿರದಿದ್ರ ನೀ ಸ್ವಾತಂತ್ರ್ಯ ಹೆಂಗ ತರತಿದ್ದಿ?
ನಾವೇ ಚಿಲ್ಲರ ಆಗಿರದಿದ್ರ ನೀ ಮಹಾತ್ಮ ಹೆಂಗಾಗತಿದ್ದಿ?
ನಾವೇ ಗುಂಡ ಹೊಡೀದಿದ್ರ ನೀ ಹುತಾತ್ಮ ಹೆಂಗಾಗತಿದ್ದಿ?
ಅದಕೇ ಹೇಳೋದಪ, ನೀ ನಮ್ಮನ್ನ ನೆನಸಬೇಕು.
ನಗೀ ಬಂದ್ರ ನಗು, ಗಾಂಧಿ. ನಿನ್ನ ಹುಟ್ಟಿದ ಹಬ್ಬದ ದಿವಸ
ಎಲ್ಲಾರೂ ನಗಾವ್ರ. ಆದರ,
ಎಲ್ಲಾರೂ ನಗೇ ಮುಂದ ಯಾರ್ನ ನೋಡಿ ಯಾರ ನಕ್ರು,
–ಮತ್ತ ಯಾಕ ನಕ್ರು–
ಅನ್ನೋದ ತಿಳೆಂಗಿಲ್ಲ.
ನಾನೂ ನಗತಿದ್ದೆ.
ಮೈಯಾಗ ಪ್ರಾಣ ಇಲ್ಲ.
ಗಾಂಧೀಮಾರಾಜಕೀ ಜೈ ಅಂತ ಒದರತಿದ್ದೆ,
ಗಂಟಲದಾಗ ತ್ರಾಣ ಇಲ್ಲ.
ಯಾಕ ಅಂತ ಕೇಳ್ತಿಯಾ?
ಕಾಲ ಕೆಟ್ಟ ಹೋತು ಗಾಂಧಿ!
ಒಂದ ಮುಂಜಾನೆ ಅಲ್ಲ, ಒಂದ ಮದ್ಯಾಣಲ್ಲ, ಒಂದ ಸಂಜಿ ಅಲ್ಲ–
ಪುಟ್ಟಾ ಪೂರಾ ಇಡೀ ದಿವಸ– ಹೂನಪಾ ಇಡೀ ದಿವಸ–
ಗಾಂಧಿ,
ನಿನ್ನ ಹೆಸರು ಮುಂದ ಮಾಡಿ
ಸೇಂದಿ ಅಂಗಡಿ ಬಂದ ಮಾಡಿದರ,
ನಿನ್ನ ಹಿಂದುಸ್ತಾನದೊಳಗ
ಚೈತನ್ಯದ ನಾಂದಿ
ಹೆಂಗ ಆಗಬೇಕು?
ನೀನೇ ಹೇಳು ಗಾಂಧಿ!

೧೯೭೪

ಬಾಬಾ ಮತ್ತು ಎಮ್ಮೀತಮ್ಮಣ್ಣ

*

ಖಾದೀ ಬಾಬಾ ಅಲ್ಲ ಬೂದೀ ಬಾಬಾ ಅಲ್ಲ
ಕ್ಯಾವೀ ಬಾಬಾ ಅಲ್ಲ ಈ ನಮ್ಮ ಬಾಬಾ
ಸನ್ಯಾಸ ಸಾಗರದ ಸಂಸಾರಿ ಇವನಾಗಿ
ಎರಡೂ ದೋಣ್ಯಾಗ ಹೊಂಟಾನ ಬಾಬಾ

ನನ್ನ ಭೂಮೀ ನಿನಗ ನಿನ್ನ ಭೂಮೀ ನನಗ
ಕೊಡಿಸಿ ಮೋಕ್ಷದ ಹಾದಿ ಕಂಡಾನ ಬಾಬಾ
ಭೂತಗನ್ನಡಿಯೊಳಗ ಗಾಂಧೀನ ಇಟಗಂಡು
ಗಾಂಧೀನಾಮದ ಹಲಗಿ ಹೊಡದಾನ ಬಾಬಾ

ಹಲ್ಲಿಲ್ಲದ ಬಾಯಾಗ ಮುತ್ತು ಸುರಕೊಂಡಾನ
ಕೇಳಿದರ ಕಿವಿತುಂಬ ತುರಕ್ಯಾನ ಬಾಬಾ
ಮೈಮ್ಯಾಲ ಬಂದರ, ಬುಗುಬುಗು ಬಸವಣ್ಣ
ಬಾಯ್ಮುಚ್ಚಿ ಉಪವಾಸ ಬೀಳ್ತಾನ ಬಾಬಾ

ಪರಶಿವನ ಹೊತ್ತಾನ ಹೆಳವರನ ಹೊತ್ತಾನ
ಹುಲ್ಲು ಕೊಟ್ಟರ ಸಾಕು ಹೊರತಾನ ಬಾಬಾ
ಅಂತಿಂಥ ಅಸಿಮಿಸಿ ದನಕರ ಬಂದರ
ಮೆಲ್ಲಕ ಝಾಢೀಸಿ ಒದಿತಾನ ಬಾಬಾ

ಎಮ್ಯಾಗ ಎಮ್ಯಾಗಿ, ಎತ್ತಿನಾಗ ಎತ್ತಾಗಿ
ಇರುವಂತಾ ನಿರಂಜನ ಸಿದ್ಧನೀ ಬಾಬಾ
ಎಮ್ಮೀತಮ್ಮಣ್ಣನ ದರುಶನವಾದರ
ಏನೇನು ಮಾಡ್ತಾನೋ ಗೊತ್ತಿಲ್ಲ ಬಾಬಾ

೧೯೭೬

ಬುರಡಿ ಬಾಬಾ ಮಹಿಮೆ

*

ಶಿರಡಿ ಬಾಬಾ ಸತ್ತು, ಕರಡಿ ತಲೆ ಹೊತ್ತಂಥ
ಬುರಡಿ ಬಾಬಾ ಹುಟ್ಟಿ ಬಂದನಂತೆ.
ಲಟಕಿ ಹೊಡೆದರೆ ಸಾಕು, ರೇಶ್ಮೆ ತೋಳೊಳಗಿಂದ
ತತ್ತಿ, ಲಾಡು, ಇಬತ್ತಿ ಹಿರಿದನಂತೆ.

ಅವನು ಉಗುಳಿದ ಮಂತ್ರ 'ಗೋಕು-ಹಾಕಿ'ದರಂತೆ.
ಪದ್ಮವೇಷದ ಭದ್ಮಶ್ರೀಗಳೆಲ್ಲ.
ಅವನ ಛತ್ರಿಯ ಗಿರಕ್ ಅನಿಸಿದನು ಅಂಬಾಪುತ್ರ.
ಯೆಂಡ್ಕುಡುಕ ಸುರಿಸಿದನು ಕಸ್ತೂರಿ-ಜೊಲ್ಲ.

ಸೆಟೆದ ಬೆರಳಿಗೆ ಬಂಗಾರದುಂಗುರ, ಕೈಗೆ
ಬಂಗಾರ ವಾಚು ಅವ ಕೊಟ್ಟನಂತೆ.
ಕಾಲನಪ್ಪಿದ ಖಾಲೀ ಭಕ್ತಾದಿಗಳ ಬಾಯ್ಗೆ
ಮಂತ್ರಿಸಿದ ಬಿಳಿಬೂದಿ ಬಿಟ್ಟನಂತೆ.

ಇವನ ಫೋಟೋದಿಂದ ಮಣ್ಣು ಉದುರುವದಂತೆ,
ನಶೀಬಿದ್ದರೆ ಹೂವು, ಕುಂಕುಮ, ಜೇನು.
ನೀವು 'ಸತ್ಯ' ಅಂದರೆ ಸಾಕು, 'ಸಾಯಿ' ಅನ್ನುವನಂತೆ.
ಬುರಡಿ 'ಬಾಬಾ' ಮಹಿಮೆ ಹೇಳಲೇನು?

೧೯೭೪

ಹಾರುವ ಕುದರಿ

*

ಅಮ್ಮಣ್ಣಿ ಅಮ್ಮಣ್ಣಿ.....
ಕುದರೀ ಮ್ಯಾಲಿಂದ ನೀವು
ಬಿದ್ದಿರೋ ಏನ ಜಿಗದಿರೋ ಏನ ಜಿಗದುಬಿದ್ದಿರೋ....
ಕುದರೀ ನೆಲೀ ಹೆಣ್ಣಿಗೆ ಗೊತ್ತು.
ಹೆಣ್ಣಿನ ನೆಲೀ ಕುದರಿಗೆ ಗೊತ್ತು.

ಮೀಸಿ ಮಣ್ಣಾಗೋ ಹೆದರಿಕೆ ಅಂತೂ
ನಿಮಗಿಲ್ಲ. (ನಿಮ್ಮಪ್ಪನಂತವರಿಗೂ ಇಲ್ಲ).
ಏನೋ ಸ್ವಲ್ಪ ಕುಂಡಿಗಿಂಡಿ ನೋವಾಗಿದ್ರ....
ಅದು ಆಗೋದೇ ಹಂಗ.
ಕುದರೀ ಹತ್ತೋ ಕುಂಡಿ ಅದ್ರ ಇದ್ರ ಹೆಂಗ?

ಅಮ್ಮಣ್ಣಿ, ಅಮ್ಮಣ್ಣಿ.
ಈ ಕುದರಿ ಬಾಳಮಾಡಿ ಹಾರುವ-ಕುದರಿ ಇರಬೇಕು.
ನೀವು ಹತ್ತಿದ ಎಷ್ಟೋ ಕತ್ತಿ
ಕುದರಿ ಆದದ್ದೂ ಖರೆ.
ಆದರ ಈ ಹಾರುವ-ಕುದರೀ ಹತ್ತಿದವರು
ಕತ್ತಿ ಆಗೋದೂ ಅಷ್ಟೇ ಖರೆ.

ಆಗಿದ್ದಂತೂ ಆಗಿ ಹೋತು.
ಒಮ್ಮೆ ಬಿದ್ದು ಎದ್ದ ಮ್ಯಾಲಾದ್ರೂ
ಹಾರುವ ಕುದರೀ ಸಂಗಾ ಬಿಡ್ರಿ
ಕರ್ನಾಟಕದ ರಾಜಕುಮಾರಿ
ಹಾರುವ-ಕುದರೀ ಗೆಣತನ ಮಾಡಿ
ಹಯ ವ ದನಗಳ ತಾಯಿ ಆಗಿದ್ದು.....
ಆ ಕತೀ ಓದಿ ನೋಡ್ರಿ.

೧೯೭೪

ದಲಿತ ಮಂತ್ರಿ ಉವಾಚ

*

ನಾ ದೇವರ್ನ ಬಯ್ಯಂಗಿಲ್ಲ ದಿಂಡರ್ನ ಬಯ್ಯಂಗಿಲ್ಲ
ಗೀತಾ ಒಯ್ದು ಗಟಾರಕ ಒಗೀರಿ ಅನ್ನಂಗಿಲ್ಲ
ನಿಮ್ಮ ಧಾರ್ಮಿಕ ಭಾವನಾದ ಗಟಾರದ ಮ್ಯಾಲ
ತುದಿಗುಂಡೀಮ್ಯಾಲ ಕುಂತು ಹೊಲಗೇರಿ ಮಾಡಂಗಿಲ್ಲ
ನಿಮ್ಮ ಜನಿವಾರ ಇರ್ಲಿ ನಿಮ್ಮ ಶಿವದಾರ ಇರ್ಲಿ
ನಿಮ್ಮ ಉಡದಾರಕೂ ನಾ ಕೈ ಹಾಕಂಗಿಲ್ಲ

ತುಳದು ತುಳದು ಹರ್‍ಯಾಕ ಬಂದ ಶ್ರೀರಾಮನ ಚಪ್ಪಲು ನಾನು
ಅದಕ ನಿಮ್ಮ ಕುರ್ಚೇಮ್ಯಾಲ ಅನವು ಮಾಡಿ ಕೊಟ್ಟೀರಿ
ನಿಮ್ಮ ಕುರ್ಚೇ ಕಾಲು ಗಟ್ಟಿಮುಟ್ಟ ಇರೂತನಕ
ನಾ ನಿಮ್ಮ ತಲೀ ಅಡರಂಗಿಲ್ಲ ಬುದ್ದೀ

ಎನ್ನ ದೇವಾ ಎನ್ನ ರಾಜಾ ಎನ್ನ ಅರಸಾ
ಮುಂಗಾಲೊಡ್ಡಿ ನಾ ಹೇಳ್ತನಿ
ಕರುಣಾದಿಂದಾ ನೀವು ಬಾಯಿಗೆ ಹೆಟ್ಟಿದ ಬೂಸಾ
ನನ್ನ ದವಡ್ಯಾಗ ಇರೂತನಕಾ
ನಾ ನಿಮ್ಮ ದಾಸಾನುದಾಸಾ

೧೯೭೪

ಆಪತ್ ಕವಿತೆ

*

ರವಿ ಕಾಣದ್ದು ಕಾಣುವ ಕಣ್ಣಿಗೆ
ತಗೋ ಕಪ್ಪುಗಾಜಿನ
ತಂಪು ಚಾಳೀಸು.
ಶುಭ್ರ ಹತ್ತಿಯ ಉಂಡಿ
ಕಿವಿಯಲ್ಲಿ ತುರುಕಿಕೊ.
ಮೂಗಿನಲಿ ಹೆಟ್ಟಿಕೋ
ಗುಲಾಬಿ ಪಕಳೆ.
ಹಲ್ಲಿಗೆ ಧಕ್ಕೆ ತರುವ
ನಾಲಗೆಯ ಮಡಚಿಕೊ.
ಬಂಗಾರ ಸೂಜಿಯಿಂದ
ನಿನ್ನ ತುಟಿಗಿದೋ
ರೇಶ್ಮೆ ಹೊಲಿಗೆ.
ನೀನಾಗಬೇಕು ನಿನ್ನ ವಂಶದ
ಶ್ರೇಷ್ಠ ಹಾಗೂ ಕೊನೆಯ
ವಾರಸುದಾರ.
ನಿನ್ನ ಅಷ್ಟಮೇಂದ್ರಿಯಕ್ಕಿದೋ
ಅಪರೇಶನ್ನು. ತಗೋ ೬೦ ರೂಪಾಯಿ.

ಕಂಡದ್ದು
ಕೇಳಿದ್ದು
ಮೂಸಿದ್ದು
ಆಡಬೇಕೆಂದಿದ್ದು
ಮಾಡಬೇಕೆಂದಿದ್ದು
ಎಲ್ಲ ಒಳಸೇರಿ ವಾಯುವಾಗಿ ಘನವಾಗಿ

ಕವಿ ಧಡಂ
ಎಂದು ಹೂಸುಬಿಟ್ಟ.

ಅದೇ ಕವಿತೆಯಾಯಿತು.

೧೯೭೬

ಪ್ರಗತಿ ಪಂಥೀಯ ಪ್ರಣಯಗೀತೆ

*

ಹಾಡೋಣ ಬಾ, ಗೆಳತಿ, ಪ್ರಣಯದಾಪತ್‌ಗಾನ.
ಹೀಗೇ ಇರುವಂತಿಲ್ಲ ನಮ್ಮ ದಿನಮಾನ.
ಎಲ್ಲಾ ಬಿಟ್ಟ ನಾವು ಅಲಖ್ ನಿರಂಜನರು.
ಬಾಯಿ ಬಡಿಯುತ್ತಿರಲಿ ಪ್ರತಿಗಾಮಿ ಜನರು.

ಜಾತಿಗಳ ಉರುಲಿಂದ ಸಾಧ್ಯವೇ ಉದ್ಧಾರ?
ಕಳಚೋಣ ಲಡ್ಡಾದ ಶಿವದಾರ ಜನಿವಾರ.
ನಿನಗು ನನಗೂ ಸಾಕು ಒಂದೆ ಉಡದಾರ.
ಆಪತ್ಕಾಲದಲಿ ಅದೇ ನಮಗೆ ಆಧಾರ.

ನಾವು 'ಮನುಜ'ರು; ನಾವಲ್ಲ 'ಗಂಡು'–'ಹೆಣ್ಣು'.
ಎರಡೂ ಅಲ್ಲದ ನಾವು ಭಾರತದ ಕಣ್ಣು.
ನಮಗೆ ಬೇಕಾಗಿಲ್ಲ ಮದುವೆ–ಗಿದುವೆಯ ಕಟ್ಟು.
ವರದಕ್ಷಿಣೆ ಭೂತಕ್ಕೆ ಇದು ಭಾರೀ ಪೆಟ್ಟು.

ಕುಟುಂಬವಿಲ್ಲದ ಮೇಲೆ ಯೋಜನೆ ಯಾಕಂತೆ?
ಎರಡು ಬೇಕು ಮೂರು ಸಾಕುಗಳ ಚಿಂತೆ?
ನಾ ನಿನ್ನ, ನೀ ನನ್ನ ಜೀವ ಹೀರಿದರೆ ಸಾಕು.
'ಪಾನ'ವೇ ಬೇಡ; 'ನಿರೋಧ' ಮಾತ್ರ ಬೇಕು.

ಕಾಡಿನ ನಿರುಪಯೋಗಿ ಗಿಡಗಳನು ಕಡಿದು,
ಪ್ರಗತಿಪಂಥದ ತುಂಬ ಬೊಡ್ಡೆಗಳ ಬಡಿದು,
ಈ ಆರಾಮರಾಜ್ಯವನು ಅಶೋಕವನ ಮಾಡಿ,
ನಲಿಯೋಣ ಗಿಡದಿಂದ ಗಿಡಕ್ಕೆ ಹಾರ್ಯಾಡಿ.

೧೯೭೬

ಅತಿಥಿ

*

ಹಿಂದಿಬ್ಬರು ಮುಂದಿಬ್ಬರು ರಾಜಭಟರ ನಡುವೆ
ನಡೆದಾಗ ದೊಡ್ಡ ಗೇಟು ಕಿರುಗುಡುತ್ತದೆ.
ಒಂದು ಮೂಲೆಗೆ ಗಾಂಧಿ. ಇನ್ನೊಂದು ಮೂಲೆಗೆ ನೆಹರೂ.
ಗೋಡೆಯ ತುಂಬ ಮತ್ತೊಬ್ಬ ಗಾಂಧಿಯ ಅಮರ ಸಂದೇಶ.

ಭೂಗರ್ಭದ ಕಾಲಕೋಶಕ್ಕಾಗಿ ಹೆಸರು–ದೆಸೆ–ಕುಲಗೋತ್ರ
ದಾಖಲಾಗುತ್ತವೆ–ಎರಡು ಪೋಜಿನ ಫೋಟೋ ಸಮೇತ.
ಮತ್ತೆ, ರಾಜಭಟರ ನಡುವೆ ಅತಿಥಿಗೃಹಕ್ಕೆ ಪ್ರವೇಶ.
ಸಣ್ಣ ಸರಳಿನ ಬಾಗಿಲು ಸರಳವಾಗಿ ತೆರೆದು ಸರಳವಾಗಿ ಮುಚ್ಚುತ್ತದೆ.

ಮಲಗಲು ಹಾಸಿಗೆ. ಹೊದೆಯಲು ಕಂಬಳಿ. ಹೇಲಲು ಪಾಯಖಾನೆ
ಎಲ್ಲಾ ಒಂದೇ ಕಡೆ. ಸರ್ವತಂತ್ರ ಸ್ವತಂತ್ರ ಪ್ರದೇಶ,
ಓದಲು ಪಂಚತಂತ್ರ, ಧರ್ಮಶ್ರೀ, ಪುರುಷೋತ್ತಮನ ಸಾಹಸಗಳು.
ಬರೆಯಬೇಕೆನಿಸಿದರೆ ಉಗುರಿದೆ. ಖಾಲಿ ಗೋಡೆ ಇದೆ.

ಹೊತ್ತು ಹೊತ್ತಿಗೆ ಡಾಕ್ಟರರ ನಾಲಗೆಯ ಶಬರಿ–ಸ್ಪರ್ಶದ ಊಟ.
ಕಟ್‌ಕಟ್ ಬೂಟಿನ ಯೋಗಕ್ಷೇಮ. ಆಕಾಶದಲ್ಲಾಗೀಗ
ವರ್ಣಮಯ ಕ್ರಾಂತಿಯ ಸುದ್ದಿ, ಗಿಳಿವಿಂಡು, ದಾಸರ ಹಾಡು.
ಕುಂಡಿಯ ಹಿಂದೆ ಕೈಕಟ್ಟಿಕೊಂಡು ತಿರಗುಣಿಯ ಓಡಾಟ.

ಸಂಜೆ, ಸೂರ್ಯಪಾನದ ಹೂವು ಗೋಣು ಚೆಲ್ಲುವ ಮುನ್ನ,
ಮುಗಿಲಲ್ಲಿ ಎಲ್ಲೋ ಹಕ್ಕಿ ಲಗಾಟ ಹೊಡೆದಾಗ,
ಗೋಡೆಯಾಚೆಗಿನ ಸ್ವಂತದ ಹಾಳು ಹಂಪೆ ನೆನಪಾಗಿ
ಮೈತುಂಬ ತುಂಗಭದ್ರೆಯ ಸೆಳವು ಹೆಚ್ಚುತ್ತದೆ.

೧೯೭೬

೬೦ರ ಅಡಿಗರ ಅಡಿಗೆ

*

"ಈಗ ಅಡಿಗರಿಗೆ ೫೦.
ಇನ್ನೂ ೧೦
ವರ್ಷ ಹರಕತ್ತಿಲ್ಲ–
ಅಂತೀರ? ಅನ್ರಿ."

ಈ ಮಾತಿಗೆ ಇನ್ನೂ ೧೦
ವರ್ಷ ತುಂಬಿಲ್ಲ. ಆದರೂ
ಅಡಿಗರಿಗೆ ೬೦
ತುಂಬಿದ ಮಸಾಲೆ ಘಾಟು ಹೊಡೆಯುತ್ತಿದೆ.

ಈ ಅರಳುಮರಳಿನ ಕತೆ ಹೇಳಲೇ ಸ್ವಾಮಿ?
ಕೇಳುವಂತವರಾಗಿರಿ :
ಪರಾಕುಗಳ ಪ್ರತಿಬಿಂಬ
ತುಂಬಿದ ಬೋಳು ತಲೆ
ಬರಬರುತ್ತ
ಪೂರ್ಣ ಕುಂಭ
ಗಳ ಭೋ
ಜನಸಂಘದ ಪಾಕಶಾಲೆಯಾದದ್ದು;
ರಮ್ಯರ ಎದೆಗೆ ಒದ್ದು
ನವ್ಯರ ನೆತ್ತಿ ಹತ್ತಿಕ್ಕಿ
ಮೂರನೇ ಪಾದಕ್ಕೆ ಖಾಲಿ ತಲೆ
ಹುಡುಕುತ್ತ ಹೊರಟ
ಬೋಳುತಲೆ ಹುರಿಯಾಳು
ಎಡಬಲ ಎಡಬಲ ಅಂತ ಎಡವಟ್ಟು ದಾರಿ
ಹಿಡಿದು, ಕೊನೆಗೆ ಬಲಗಡೆ ಗಟಾರದಲ್ಲಿ
ಅವತರಿಸಿದ್ದು.....
'ಕಟ್ಟೆಯ ಕಲ್ಲು ಕಟ್ಟೆಗೆ ಕುಂತಂತೆ
ಅಂತೀರ? ಅನ್ರಿ.
ಕಟ್ಟೆ ಅಂದರೂ ಎಂಥಾ ಕಟ್ಟೆ ಮಾರಾಯ್ರೆ!

ಎಂಥೆಂಥವರನ್ನೋ
ವಾತಾಪಿಜೀರ್ಣೋಭವಿಸಿದ
ವೃಂದಾವನ ಕಟ್ಟೆ ಅದು.
ಆ ಕಟ್ಟೆಯ ಸುತ್ತ
ಸತ್ತವರ ನೆರಳುಗಳ ಭದ್ರಪಹರೆ.
ಕೇಳಿಸದೇ ನಿಮಗೆ :
ಚೆಹರೆಪಟ್ಟಿ ಇಲ್ಲದ ಆ ಜಡಭರತರ,
ಉಪರಾಟಿ ಪಾದದವರ,
ಅನೂಹ್ಯ ರೂಪದವರ,
ಅನಂತ ಲೋಕದವರ
ಮೋಹನ ಮುರಲೀಗಾನ?
ಛೆ ನಿಮ! ಮೂಗು ತೆರೆದು ಕೇಳಿರಿ.
ಒಂದು ಜನಾಂಗದ ಕಣ್ಣು ತೆರೆಸಿ
ಮಣ್ಣಿನ ವಾಸನೆ ತುಂಬಿದಾಸಾಮಿ,
ಮತ್ತೊಂದು ಜನಾಂಗದ ಬಾಯಿ ತೆರೆಸಿ
ಶ್ರೀರಾಮನವಮಿಯ ದಿವಸ
ಸುರಿಯುತ್ತಿದ್ದಾನೆ ಮಂತ್ರದ ವಾಸನೆಯ
ತನ್ನ ಸಾವಯವ ಸಂಬಂಧದ
ನವರಸ ಪಾಕದಡಿಗೆ.
ಅಡಿಗೆ ಬಿದ್ದ ಸಮಗ್ರೀಕೃತ ಕಾಗೆಬಳಗ
ಅಡಿಗೆಯಗುಳಗುಳು ಚಪ್ಪರಿಸಿ
ಉಗುಳುತ್ತಿದೆ ಕಾಕಾಗಾನ.
ಪರಲೋಕದಲ್ಲಿರುವ ಓ ಅವರ ತಂದೆಯೇ !
ಕೇಳಿಸದೇ ನಿಮಗೆ?

*

ಸರಿ. ಹೊಟ್ಟೆ ತುಂಬಿದ ಮೇಲೆ
ಕಾಗೆ ಹಾರುತ್ತವೆ.
ಅಳಿದುಳಿದ ತಳದಗುಳು
ಹಳಸಿ ನಾರುತ್ತದೆ.
ಈ ಶತಮಾನದ ಅತ್ಯುತ್ತಮ
ಅಡಿಗೆ. ಅದು
ಇನ್ನೂ ೪೦
ವರ್ಷ ನಾರುತ್ತದೆ–ಅಂತೀರ, ಭಟ್ರೆ? ಅನ್ರಿ.

೧೯೭೬

೨-೧೦-೧೯೭೬ : ಒಂದು ವರದಿ

*

ಮೊನ್ನೆ, ೨-೧೦-೧೯೭೬ ರಂದು ಗಾಂಧೀ ಜಯಂತಿ ದಿನ
ಮಹಾತ್ಮಾ ಮೋಹನದಾಸ ಕ. ಗಾಂಧಿ ಎಂಬವರನ್ನು
ಅಧಿಕೃತವಾಗಿ ನೆನಿಸಲಾಯಿತು.
ಹರಿಭಜನೆ ಮಾಡೋ ನಿರಂತರ, ವೈಷ್ಣವ ಜನತೋ–
ಇತ್ಯಾದಿ ಭಜನೆ ಮುಗಿವುದರೊಳಗೆ
ಸ್ವಲ್ಪೇ ಲೇಟಾಗಿ ಮಂತ್ರಿಗಳು ಆಗಮಿಸಿದರು.

ಗಾಂಧೀ ಹೆಸರು ಹೇಳಿ ಎರಡೊಪ್ಪತ್ತು ಕೂಳು ಕಾಣುವ
ವ್ಯವಸ್ಥಾಪಕರು ಗಾಂಧೀ ಬಗ್ಗೆ
ತಾವು ಮಾಡುತ್ತಿರುವ ಪ್ರಚಾರಕಾರ್ಯದ ಬಗ್ಗೆ
ಮಾನ್ಯ ಮಂತ್ರಿಗಳಿಗೆ ವರದಿ ಒಪ್ಪಿಸಿದರು.
ಮಾಲಾರ್ಪಣೆ, ಗಜರಾರ್ಪಣೆ ಯಶಸ್ವಿಯಾಗಿ ನಡೆದವು.

ಗಾಂಧೀಜಿ (ಬಹುಶಃ ಬಾಯಿ ತಪ್ಪಿ) ೨-೧೦-೧೯೬೯ ರಂದು
ಜನಿಸಿದರೆಂದು ಹೇಳಿದ ಮಾನ್ಯ ಮಂತ್ರಿಗಳು
ತಮ್ಮ ೨೮ ಮಿನಿಟಿನ ಸಂಕ್ಷಿಪ್ತ ಭಾಷಣದಲ್ಲಿ
ಬಾಲಕ "ಮೋನ್ಯಾ"ನ ೧೮ ಬಾಲಲೀಲೆಗಳನ್ನು
ವಿಶದಪಡಿಸಿದರು.
ನಾವು ಗಾಂಧಿಗೆ ಏನು ಕೊಟ್ಟಿದ್ದೇವೆ?–ಅಂತ
ಸಭಿಕರಿಗೆ ಗುಂಡು ಹೊಡೆದು ಕೆಳಗೆ
ಕುಕ್ಕರಿಸಿದರು.

ನಂತರದ ಉಪಸಂಹಾರದಲ್ಲಿ
ಸಾಕ್ರೆಟಿಸ್–ಪ್ಲೇಟೋ–ಬುದ್ಧ–ಬಸವ ಗಾಂಧಿ
ಈ ಪಂಚಾಚಾರ್ಯರನ್ನು ನೆನಿಸಿ ನೆನಿಸಿ
ಮುತ್ತಿನ ಹಾರದ ಅಡ್ಡ ಪಲ್ಲಕ್ಕಿಯಲ್ಲಿ
ಮೆರೆಸಲಾಯಿತು.

ಮಂತ್ರಿಗಳ ಮಗ್ಗುಲಲ್ಲೇ ನಿಂತು ಚಾದಲ್ಲಿ ಬಿಸ್ಕಿಟ್ ನೆನಿಸಿ
ತಿಂದು, ಚಾ ಕುಡಿದು ಮನೆಗೆ ಬಂದಾಗ,
ನೆನಪಿನಲ್ಲಿ ಹುಚ್ಚುನಗೆ ನಕ್ಕಿದ್ದು :

ಒಣಗಿದ ಮಾಲೆ ತೊಟ್ಟ ಜೋಲುಮುಖದ ಗಾಂಧೀ ಫೋಟೋ.
ಕಿವಿ ತುಂಬ ಕ್ಯಾಕಿ ಹಾಕಿದ್ದು :
ರಘಪತಿ ರಾಘವ ರಾಜಾರಾಮ್....

೧೯೭೬

ಹೇಳುವವರು ಕೇಳುವವರು

*

ನಮಗೆ ಹೇಳುವವರು ಕೇಳುವವರು
ಯಾರೂ ಇಲ್ಲ ಅಂತ
ಹೇಳಬೇಡಿರಿ,

ನಮಗೆ ಬೇಕ್ಕಾದ್ದು ಹೇಳಿರಿ.
ಬಯ್ಯಿರಿ, ಹೊಗಳಿರಿ, ಉಗುಳಿರಿ.
ಉಗುಳಿ ಉದ್ಗಾರ ತಗೆಯಿರಿ.
ನೀವು ಹೀಗೆ, ನೀವು ಹಾಗೆ – ಅಂತ
ನಮಗೆ ಕಾಮ, ಅರ್ಧವಿರಾಮ
ಅಥವಾ ಪೂರ್ಣವಿರಾಮವನ್ನೇ ಕೊಡಿರಿ.
ಬೇಕಾದರೆ ಡ್ಯಾಶ್ ಹೊಡೆಯಿರಿ.
ಅಥವಾ ಅನ್ವರ್ಥಕ ಚಿಹ್ನೆಗಳ
ಕತ್ತರಿಯಲ್ಲಿ ಸಿಗಿಸಿ
ಕಟಕಟ ಕತ್ತರಿಸಿರಿ.

ಆದರೆ
ಪ್ರಶ್ನೆಗಳನ್ನು ಮಾತ್ರ
ಕೇಳಬೇಡಿರಿ
ಗೊಂಬೆ ಬೇಕೇ ಪೀಪಿ ಬೇಕೇ.....
ಕೇಳಬೇಕೆನಿಸಿದರೆ
ಗೊಂಬೆ ಕೇಳಿರಿ ಪೀಪಿ ಕೇಳಿರಿ.
ಶ್ರೀಖಂಡ ಚಿರೋಟು ಬೇಸನ್ ಕೇಳಿರಿ.
ನಮ್ಮ ಸಲಹೆ–ಸೂಚನೆ–ಭಾಷಣ ..
ಉಪದೇಶ–ಮಾರ್ಗದರ್ಶನ ಕೇಳಿರಿ.
ನಮ್ಮ ಪಿಟೀಲು ಕೇಳಿರಿ ರೇಡಿಯೋ ಕೇಳಿರಿ.
ನಿಮ್ಮೆದುರು ಕಿನ್ನರಿ ಬಾರಿಸುತ್ತೇವೆ
ಅದನ್ನೂ ಕೇಳಿರಿ.

ಹೆಣ್ಣು ಕೇಳಿರಿ ಹೊನ್ನು ಕೇಳಿರಿ
ಬೇಕಾದರೆ ಮಣ್ಣು ಕೇಳಿರಿ. ಕೊಡುತ್ತೇವೆ.

ಆದರೆ
ಪ್ರಶ್ನೆಗಳನ್ನು ಮಾತ್ರ ಕೇಳಬೇಡಿರಿ.
ಏನು ಕೇಳಿದರೂ
ಪ್ರಶ್ನೆ ಯಾಕೆ ಕೇಳಬಾರದು?
ಎಂಬ ಪ್ರಶ್ನೆ ಮಾತ್ರ
ಎಂದೂ ಕೇಳಬೇಡಿರಿ.

ಏಕೆಂದರೆ ನಾವದಕ್ಕೆ
ಬರೋಬರಿ
ಉತ್ತರ ಕೊಟ್ಟರೂ ನೀವದನ್ನು
ಕೇಳುವ ಪರಿ–
ಸ್ಥಿತಿಯಲ್ಲಿರುವುದಿಲ್ಲ.
ತಿಳಿಯಿತೇ?
ತಿಳಿಯದಿದ್ದರೆ ಕೇಳಿರಿ.

ಈಗಾದರೂ ಹೇಳಿರಿ :
ನಮಗೆ
ಹೇಳುವವರು ಕೇಳುವವರು
ಯಾರೂ ಇಲ್ಲವೇ?

೧೯೭೬

ಲಪಾಟಿ ಪಾಟೀಲನ ಸಮಾಚಾರ

*

ಮೊನ್ನೆ ನಮ್ಮೂರಿಗೆ ಹೋಗಿದ್ದೆ.
ಚುಟ್ಟದ ಜುರಿ ಎಳೆದೆಳೆದು
ಹೊಗೆ ನೆತ್ತಿಗೆ ಹತ್ತಿ
ಕೆಮ್ಮಿ ಕ್ಯಾಕರಿಸಿ
ಗೂರುತ್ತ ಎಪ್ಪತ್ತರ ಲಪಾಟಿ ಪಾಟೀಲ ಕೇಳಿದ :
'ಏನಪಾ ದೇಶದಾಗ ಹೊಸಾ ಸಮಾಚಾರ?'

ನಾನೂ ಹುರುಪಿಗೆದ್ದು ಹುಳ ಕಡಿದವರಂತೆ
ಎಲ್ಲ ಕಡೆ ಓದಿದ್ದ
ಗಾಳ್ಯಾಗ ಕೇಳಿದ್ದ
ಎಲ್ಲಾ ಸಮಾಚಾರ ಬಿತ್ತರಿಸಿದೆ :
ದೇಶದ ರಥ ಇಪ್ಪತ್ತಂಶದ ಚಕ್ರದ ಮೇಲೆ
ಇಳಿಜಾರಿನಲ್ಲಿ ಭರಭರಾಟಿಯಿಂದ ಸಾಗಿದ್ದು :
ಜೀತದಾಳುಗಳೆಲ್ಲ ಜೀತ ಬಿಡಿಸಿಕೊಂಡು
ಕೆಲಸವಿಲ್ಲದೆ ಆರಾಂ ಮನೆಯಲ್ಲಿ ಕುಂತಿದ್ದು;
ಸಂಪು ಗಿಂಪು ಅಂತ ಜಿಗಿದಾಡುತ್ತಿದ್ದ ವಿದ್ಯಾರ್ಥಿಗಳಿಗೆಲ್ಲ
ಮುಕ್ಕಟೆ ಪಾಟಿ ಪುಸ್ತಕ ಸಿಕ್ಕು
ಏನು ಓದಲಿ ಏನು ಬರೆಯಲಿ ಅಂತ ಫಜೀತಿಗಿಟ್ಟದ್ದು;
ಸಾಯಿಬಾಬಾನ ಕೈ ಖಾಲಿ ಆಗಿ
ಅವನ ಭಕ್ತರ ತಲೆಯೊಳಗಿಂದ ಸಹ
ಬೂದಿ ಉದುರತೊಡಗಿದ್ದು;
ಸ್ವರ್ಗಕ್ಕೆ ಏಣಿ ಹಾಕಿದ್ದ ಸಾಮಾನು–ಬೆಲೆಗಳೆಲ್ಲ
ಏಕ್‌ದಮ್ ದಿಕ್ಕು ಬದಲು ಮಾಡಿ
ನರಕದ ಕಡೆ ಹೊರಟಿದ್ದು;
ಕಳ್ಳಪೇಟೆಯ ಖದೀಮರಿಗೆಲ್ಲ
ಮೀಸಿ ಬೋಳಿಸಿ ಮೀಸಾ ಹಚ್ಚಿದ್ದು;
ಉಳುವವರಿಗೇ ಹೊಲಾ ನಿಂತವರಿಗೇ ನೆಲಾ

ಇದ್ದವರದೇ ಮನೆ ಸತ್ತವರದೇ ಸುಡುಗಾಡು
ಇತ್ಯಾದಿ ಕಾನೂನು ಬಂದದ್ದು;
ವರದಕ್ಷಿಣೆ ಬೇಡ ಅಂತ ಹಟ ಹಿಡಿದ ಹರೇದವರು
ಹೆಣ್ಣು ಕಾಣದೆ ಲಗ್ನ ಕಾಣದೆ
ಕಂಡಕಂಡಲ್ಲಿ ಗಿಡ ನೆಡಲು ಓಡಾಡಹತ್ತಿದ್ದು
ಲಂಚ ಗಿಂಚ ಎಲ್ಲ ಮಂಚದ ಬುಡ ಸೇರಿ
ಸಾಚಾತನ ಹಾಸಿಗೆ ಮೇಲೆ ಹೊರಳಾಡತೊಡಗಿದ್ದು;
ಮಾತು ಕಡಿಮೆಯಾಗಿ ಹೆಚ್ಚು ದುಡಿಮೆಯಾಗಿ
ಉಸಿರಾಡಿಸಲಿಕ್ಕೂ ದಮ್ಮು ಇಲ್ಲದಂತಾದದ್ದು;
ಡೊಳ್ಳು–ನಗಾರಿ–ಕೊಂಬು–ಕಹಳೆ ಸಮೇತ
ಹಳ್ಳಿಯ ಜನ ಶಹರದ ಜನ
ಆಪರೇಶನ್ ಮಾಡಿಸಿಕೊಳ್ಳಲು ಮೆರವಣಿಗೆ ತಗೆದದ್ದು;
ಆಮ್ಯಾಲ ಮಳೀ ಆಗಿದ್ದು....

'ಅಲ್ಲಪಾ ತಮ್ಮಾ, ಇಷ್ಟೆಲ್ಲಾ ಸಮಾಚಾರಾ
ಕೇಳಿದ ಮ್ಯಾಲ ಮತ್ಯಾಕ ಆಪರೇಶನ್ನು
ಜರೂರೈತಿ ಹೇಳು?'–
ಅಂತ ಲಪಾಟಿ ಪಾಟೀಲ ಕೇಳಿದ್ದಕ್ಕೆ,
'ಆಪರೇಶನ್ ಮಾಡಿ ಮ್ಯಾಲ ರೊಕ್ಕಾನೂ ಕೊಡ್ತಾರ'
ಅಂದೊಡನೆ –

ಎಲ್ಲಿ ಎಲ್ಲಿ ಅಂತ
ಎಪ್ಪತ್ತರ ಲಪಾಟೀ ಪಾಟೀಲ ಲಪಾಟಿ
ಏರಿಸಿಕೊಂಡು
ಕೊರಿ ಚುಟ್ಟದ ತುಂಡು
ಕಲ್ಲಿಗೆ ತಿಕ್ಕಿ ಕಿವಿಸಂದಿಗೇರಿಸಿಕೊಂಡು
ತಡಿ ತಡಿ ನಾನೂ ಬರ್ತನಿ ನಡಿ
ಅಂತ ಹೊರಟೇ ಬಿಟ್ಟ :
ಭರತಖಂಡದ ಬೆಂಕೀ ಚೆಂಡು
ಬಹದ್ದೂರ್ ಗಂಡು.

೧೯೭೬

ಅಜ ಗಜ

*

೧

ಗಜ ಅಂದರೆ ಗೊತ್ತಿರಬೇಕಲ್ಲ. ಗಜ ಅಂದರೆ ಅಜ ಅಲ್ಲ.
ಗಜ ಅಂದರೆ ಆನೆ; ದೊಡ್ಡ ಸೊಂಡಿಯ, ಗಿಡ್ಡ ಬಾಲದ ಪ್ರಾಣಿ.
ಗಜದ ವೈಶಿಷ್ಟ್ಯ ಎಂದರೆ ಅದರ ದೊಡ್ಡಸ್ತನ.
ಆಡಾಡುತ್ತ ಅಡವಿ ಬಿದ್ದರೆ ಅದು ಹಿಡಿದದ್ದೆ ಹಾದಿ.

ತನ್ನ ಪುಟ್ಟ ಮಾಂಡಲಿಕ ರಾಜ್ಯದಲ್ಲಿ ಅದು ಗಜರಾಜ
ಮತ್ತೇರಿದಾಗಂತೂ ತಾನೇ ಇಂದ್ರನೈರಾವತ.
ಮುಗಿಲಿಗೆ ಸೊಂಡಿ ಎತ್ತಿ ರಾಡಿ ಮಣ್ಣಿಗೆ ನೀರು
ಸಮರಸ ಮಾಡಿ ಸುರಕೊಂಡರದೇ ಗಂಗಾವತರಣ.

ಕುತ್ತಿಗೆ ಮೇಲೆ ಮಾವ ಕುಂತಾಗ ಮಾತ್ರ
ಸೊಂಡಿಗೆ ಸಿಕ್ಕದ್ದೆಲ್ಲ ಅವನಿಗೇ ನೈವೇದ್ಯ.
ಸರ್ಕಸ್ ಸೇರಿಸಿದರೆ ನಾಕುತಂತಿಯ ಮೇಲೆ ನಡೆದು
ಮುಂಗಾಲ ಮೇಲೆ ಗಜಮು ನಿಲ್ಲಲೂ ಸಾಧ್ಯ.

ತಾ ಸತ್ತ ನಂತರದ ತನ್ನ ಎಲುಬಿನ ಕಿಮ್ಮತ್ತು ಕಟ್ಟುತ್ತ
ಈ ಗಜ ವಟಗುಡುತ್ತದೆ : ಇದು ಬರಿ ಗಜವಲ್ಲೋ ಅಣ್ಣ.

೨

ಅಜ ಅಂದರೆ ಆನೆ ಅಲ್ಲ. ಅಜ ಅಂದರೆ ಕುರಿ.
ಅಜಕ್ಕೆ ಮುಗಿಲಿನ ತುಡಿತವಿದ್ದರೂ ಅದಕ್ಕೆ
ಕಾಲ ಕೆಳಗಿನ ಮಣ್ಣ ವಾಸನೆಯದೇ ವ್ಯಸನ.
ಸುತ್ತಮುತ್ತ ಸಣ್ಣ ಅಜಗಳಿದ್ದರೆ ಸಮಾಧಾನ.

ಅಜ ಘೀಳಿಡುವದಿಲ್ಲ. ಅದರದು ಅಜ ವಿಲಾಪ.
ಒಮ್ಮೊಮ್ಮೆ ಗಂಟಲು ಗೊರಗೊರ ಅಂದಾಗ ಆಡು–ಮಾತು.
ಲುಟುಪುಟು ಲುಟುಪುಟು ಅಂತ ಸಮಕಾಲಿನ ಪ್ರಜ್ಞೆಯೊಂದಿಗೆ
ಅಜ ನಡೆದಾಗ, ಮರಿಗಳದಕ್ಕೆ ದಿಗ್ಗಜಾ ಅನ್ನುತ್ತವೆ.

ಅಜದ ವೈಶಿಷ್ಟ್ಯವೆಂದರೆ ಅದರ ಸಣ್ಣ ಸೈಜು.
ಈ ನೆಲದಲ್ಲಿ ಹಂದಿ–ಮಂಗ–ನಾಯಿ ಅವತಾರವಾಗಿರುವಾಗ
ಇದಕ್ಕೂ ಗುಂಗು : ತಾನೂ ಅವತಾರವಿರಬಹುದೆ?
ಎಡವಿದ ಹರಳೆಲ್ಲ ಬಲಿಯ ತಲೆ ಇರಬಹುದೆ?

ಒಮ್ಮೊಮ್ಮೆ ಯಾವುದೊ ಗೂಢ ಪಾಪಲೇಪನದ ನೆನಪಿಂದ
ಅಜ ಅತ್ತಾಗ, ಮರಿಗಳು ಬ್ಯಾ ಅಂತ ಹಿಡಿಯುತ್ತವೆ ಆಲಾಪ.

೩

ಅಜಕ್ಕೆ ಕುರಿತಲೆ, ಗಜಕ್ಕೆ ಆನೆತಲೆ.
ಅಜಕ್ಕೂ ಗಜಕ್ಕೂ ಅಜಗಜಾಂತರ ಖರೆ.
ಆದಿಯಲ್ಲಷ್ಟೆ ಈ ಫರಕು. ಅಂತ್ಯ ಮಾತ್ರ ಒಂದೇ.
ಎರಡಕ್ಕೂ ಬಾಲ ಇದೆ. ಅಲ್ಲದೆ ಎರಡೂ ಪ್ರಾಸ, ಬೇರೆ.

೧೯೭೬

ಏರು ಹುಬ್ಬಿನವರೇ

*

ಆಗಾಗ ಹುಬ್ಬೇರಿಸುವದು
ಬುದ್ಧಿಜೀವಿಗಳ ಲಕ್ಷಣ
ಅಂತ ನೀವು ತಿಳಿದಿದ್ದರೆ
ಅದು ಥೇಟ್ ಹುಂಬರ ಲಕ್ಷಣ.

ಕೇಳಿರಿಲ್ಲಿ,
ಒಂದೇ ದೇವರಿಗೆ ಹಲವು ನಾಮಗಳುಂಟು
ಯದಾ ಯದಾ ಹಿ ಧರ್ಮಸ್ಯ ಗ್ಲಾನಿಯಾದಾಗೆಲ್ಲ
ಆ ದೇವರು
ಆನೆಯಾಗಿ ಸಿಂಹವಾಗಿ ಆಮೆಯಾಗಿ
ಎತ್ತಾಗಿ ಮಂಗನಾಗಿ ನಾಯಿಯಾಗಿ ಹಂದಿಯಾಗಿ
(ಒಮ್ಮೊಮ್ಮೆ ಮನುಷ್ಯನೂ ಆಗಿ)
ಈ ನರಕಕುಂಡದಲ್ಲಿ ಈ ಭರತಖಂಡದಲ್ಲಿ
ಅವತರಿಸಿ
ನಮ್ಮನ್ನೆಲ್ಲ ಉದ್ಧರಿಸಿ
ಸ್ವರ್ಗಕ್ಕೆ ಜಿಗಿಸಿದ್ದಾನೆ.
ಒಂದೇ ದೇವರಿಗೆ
ಹಲವು ನಾಮಗಳುಂಟು. ಹಾಗೇ
ಒಂದೇ ನಾಮಕ್ಕೆ
ಹಲವು ದೇವರು ಗುಂಟು.

ಭೂಮಂಡಲದೊಳು ರಾಮರಾಜ್ಯ ರಾಮರಾಜ್ಯವೆಂದು
ಹೆಸರಾದ ಈ ರಾಮರಾಜ್ಯದಲ್ಲಿ
ಗದ್ದಿಗೆಗೆ ಬರಬೇಕಾದವನು
ರಾಮನೇ.
ಅಥವಾ ರಾಮನಾಮದವನೇ;

ಸೀತಾರಾಮನಿರಲಿ ಸಾಯೀರಾಮನಿರಲಿ
ಹರೇರಾಮನಿರಲಿ ಮುದೀರಾಮನಿರಲಿ
ರಾಜಾರಾಮನಿರಲಿ ರಾಣೀರಾಮನಿರಲಿ
ಆಯಾರಾಮನಿರಲಿ ಗಯಾರಾಮನಿರಲಿ
ಹೆಣ್ಣು ರಾಮನಿರಲಿ ಶಿಖಂಡಿರಾಮನಿರಲಿ....
ಅಂತೂ ರಾಮಾವತಾರ ಬಂದರೇ ನ್ಯಾಯ.
ಬರದಿದ್ದರೆ ಅನ್ಯಾಯ, ಅಕ್ಷಮ್ಯ, ಅತಾರ್ಕಿಕ, ಅಸಂಭವ, ಅ.....

(ಬೇಕಾರೊಂದ್ಯೆದು ದಿನ ಒಂದು
ಮುದ್ದೀಬಸವಣ್ಣನನ್ನು ಶಾಸ್ತ್ರಕ್ಕೆ ಕೂಡ್ರಿಸಿ
ಜಿಗಿಸೋಣ ತಾಷ್ಕೆಂಟಿಗೆ. ಅದಕ್ಕೇನಂತೆ?)

ಇಷ್ಟಾಗಿಯೂ ನೀವು
ತಕ್ಷಣ
ಏರಿಸಿದ ಹುಬ್ಬು ಇಳಿಸದಿದ್ದರೆ :

ಕಪಿಗಳೇ
ಇದೋ ನಿಮಗೊಂದಾಜ್ಞೆ :
ನಿಮ್ಮ ಹಬ್ಬುಗಳನ್ನು ತಕ್ಷಣ
ಇಳಿಸಲಾಗುವದು ; ಮತ್ತು
ಖಡ್ಗದಿಂದ
ಕರಕರ ಬೋಳಿಸಲಾಗುವದು.

೧೯೭೬

ಗೃಹ ಬಂಧನ

*

ಮಾತಾಡ್ರಿ ಅಂದರೆ ಬಹಿರಂಗ ಭಾಷಣ.
ಸುಮ್ಮನಿರ್ರಿ ಅಂದರೆ ಮೌನ ಮೆರವಣಿಗಿ.
ತೂಕಡಿಸಿದರೆ ಹಿಂದೆ ಮುಂದೆ ಆಂದೋಲನ
ಗೊರಕೆ ಹೊಡೆದರೆ ಕ್ರಾಂತಿ ಅಲೆ ಅಲೆಗಳು...

*

ನೋಡುವತನಕ ನೋಡಿ ಒಂದು ಸರೋರಾತ್ರಿ
ಮಂಗಳಸೂತ್ರದ ಉರುಲು ಹಾಕಿದಳು.
ಬೆಳಗು ಹರಿವುದರೊಳಗೆ ಉರವಣಿಗಿ ಗಂಡನಿಗೆ
ಗೃಹಬಂಧನ. ಅವನು ಗೃಹಸ್ಥನಾದ.

ಕಪ್ಪು ಬಾವುಟ ಹೋಗಿ ಮಸೆರಬಿ ಆಯಿತು.
ಕರಪತ್ರ ಕಿರಾಣಿ ಅಂಗಡಿಗೆ ರದ್ದಿ.
ಘೋಷಣೆಗಳೆಲ್ಲ ಊದುಗೊಳವಿಯಲ್ಲಿ ಹರಿದು
ಭಾಷಣದ ಭರಾಟೆಗೆ ಒಲೆ ಉರಿಯಾಯಿತು.

ಹೊತ್ತು ಹೊತ್ತಿಗೆ ಊಟ–ಫರಾಳ ಕಡ್ಡಾಯ :
ತುತ್ತು ಮೂವತ್ತೆರಡು ಜಲ ಜಗಿಯಬೇಕು.
ಕೂಳು ಕರಗಿಸಲು ನೂರು ಹೆಜ್ಜೆ ವಾಕಿಂಗು.
ರಾಘವೇಂದ್ರಜ್ಜನ ಮುಂದೆ ಪದ್ಮಾಸನ.

ಅತ್ತಿತ್ತ ನೋಡಿದರೆ ಅದೇ ಕ್ಯಾಲೆಂಡರ್ ವದನ.
ಕಾಲಕಾಲಲ್ಲಿ ಅವಳ ಕೊರಳಗುದ್ದಿ.
ಕಿವಿ ತುಂಬ ಅವಳದೇ ಸಾವಕಾಶವಾಣಿ. ಅಂತೂ
ಅಂತರಂಗ–ಬಹಿರಂಗದಲ್ಲಿ ಅವಳೇ ಸುದ್ದಿ.

ಹೆಚ್ಚು ಮಾತಾಡಿದರೆ ಬಾಯ್ತುಂಬ 'ಬೆಲ್ಲ'.
ಕೆಮ್ಯಾಡಿದರೆ ಕುಡಿ ಸುಂಟಿ ಖಾಡೆ.
ಕೊಸರ್ಯಾಡಿದರೆ ಬಾಹುಬಂಧನ. ಇರುಳೆಲ್ಲ
ಇಂತಿಷ್ಟು ಟೈಮಿಗೆ ಸಮರಸವೆ ಜೀವನ.

*

ಏಳು ಅಂದಾಗ ಎದ್ದ. ಬೀಳು ಅಂದಂತೆ ಬಿದ್ದ.
ಹೀಗೆಯೇ ಕೆಲಕಾಲ ಉರುಳಲಾಗಿ –
ಆರಾಮ್ ಹರಾಮಾಗಿ ಉಂಡಾಡಿ ಗಂಡ
ಇದ್ದಕ್ಕಿದ್ದಂತೊಮ್ಮೆ ದುಂಡಗಾಗಿ,

ಎರಡು ಸಾಕು, ಮೂರು ಬೇಕು–ಅನ್ನುತ್ತ
ದವಾಖಾನೆಗೆ ಹೋಗಿ ದಾಖಲಾದ.
ಇದೇನ, ನನ ಶಿವನ–ಅಂತ ಹೆಂಡತಿ, ಪಾಪ,
ಮೀಸೆ ತಿರುವುತ ಚಿಂತೆ ಮಾಡಿದಳು.

೧೯೭೬

ನಿನ್ನ ಎಲುಬಿನ ಹಾಡು

*

ಏನ್ರಿ ಚಂಪಾ ಅವರೆ,
ನೀವು ಬರಿ ಚಿಲ್ಲರೆ ವಿಷಯದ ಬಗ್ಗೆ
ಚಿಲ್ಲರೆ ಮಂದಿಯ ಬಗ್ಗೆ ಚಿಲ್ಲರೆಯಾಗಿ
ಬರೆವ ರೇಜರ್ ಕವಿಯಾಗದೆ,
ಮೇಜರ್ ಕವಿಯಾಗಿ
ಸಾರ್ವಕಾಲಿಕ ಶಾಶ್ವತ ಅಮರ
ಸತ್ಯಗಳ ಬಗ್ಗೆ......

ಇತ್ಯಾದಿ ಬೊಗಳುವ ಬಡ್ಡೀಮಗನೇ,
ನನ್ನ ಪ್ರಿಯ ಸ್ನೇಹಿತನೇ,
ಬಾ. ಎದುರಿಗೆ ನಿಲ್ಲು.
ನಿಂತು ಮಾತಾಡು.

ನಾನು ಹಲೋ ಅಂದರೆ ಹಲ್ಲು ಕಿಸಿಯುತ್ತೀ.
ಎಲೇ ಅಂದರೆ ಯಾಕಲೇ ಅನ್ನುತ್ತೀ.
ಡೊಗ್ಗಿದರೆ ತಲೆ ಮೇಲೆ ಹಾರುತ್ತೀ.
ಒದ್ದರೆ ಬೀಳುತ್ತೀ.
ಸಡಿಲು ಸಿಕ್ಕರೆ ಹಿಂದಿನಿಂದ ಹೆಗಲ ಮೇಲೆ
ಕೈ ಹಾಕಿ ಬಗಲಿಗೆ ಚೂರಿ ಹಾಕುತ್ತೀ.
ಮೆತ್ತಗೆ ಕೈ ಅಮುಕಿದರೆ
ಮೆಲ್ಲಗೆ ನಗುತ್ತೀ.
ನಕ್ಕು ಬಾ ಅಂದರೆ
ಹೃದಯದೊಳಗೇ ಹೊಗುತ್ತೀ

ನನ್ನ
ಹಿಂದೆಮುಂದೆಒಳಗೆಹೊರಗೆಕೆಳಗೆಮೇಲೆ
ನೀನೋ
ನಿನ್ನ ನೆರಳೋ

ನಿನ್ನ ನೆನಪೋ
ಉಸಿರಾಗಿ ನನ್ನ ಕೊರಳಿಗೆ ಕುಣಿಕೆ ಹಾಕಿರುವಾಗ
ನಿನ್ನ ಬಿಟ್ಟು ಇನ್ನಾವ ಸುಡಗಾಡ
ಮಣ್ಣಿನ ವಾಸನೆ ಬೆನ್ನು ಹತ್ತಿ
ಕಂಡ ಕಂಡ ಕಲ್ಲಿಗೆ ಕಾಲೆತ್ತಲಿ ಮಗನೇ?

ಅಂತೂ ಮಿಕ್ಕಿ
ನೀನು ಯಾರು?
ಈ ಪ್ಯಾಂಟು ಗೀಂಟು ಕಳಚಿ ಜನಿವಾರ
ಶಿವದಾರ ಉಡದಾರ ಬಿಚ್ಚಿ ಗಂಧ ನಾಮ
ವಿಭೂತಿ ಒರೆಸಿ ಬರೇಬತ್ತಲ
ಉದ್ದೋಕ ನಿಲ್ಲಿಸಿದರೆ ನೀನೊಂದು
ಗಂಡು.
ಅಥವಾ ಹೆಣ್ಣು.

ಮುಂದೆ ಹೋಗಿ ನಿನ್ನ ಚರ್ಮ ಸುಲಿದು
ರಕ್ತ ಬಸಿದು ಎಲುಬಿಗೆ ಸಾಬಾಣ ಹಚ್ಚಿ
ಪಾಲಿಶ್ ಮಾಡಿ ಉದ್ದೋಕ ನಿಲ್ಲಿಸಿದರೆ
ನೀನು
ಕಾಲಾತೀತ ದೇಶಾತೀತ ಅಮರ ಶಾಶ್ವತ....

ಗೆಳೆಯ,
ಈ ನನ್ನ ಎದುರಿಗೆ ಇಲ್ಲಿ ನಿಂತ
ಈ ಕ್ಷಣದ ಈ
ನಿನ್ನ ಎಲುಬಿನ ಹಾಡು,
ನನ್ನ ಎಲುಬಿನ ಹಾಡು
ಅಲ್ಲವೇನು?

ಹೋಗು ಹೋಗೆಲೊ, ಮಂಗ.
ಚರ್ಮ ಏರಿಸಿಕೊಂಡು ಮೇಲೆ
ಡ್ರೆಸ್ಸು ಏರಿಸಿಕೊಂಡು
ಮಾನವನಾಗಿ
ಮರ್ಯಾದೆಯಿಂದ
ಮನೆಗೆ ಹೋಗು.

೧೯೭೬

ಎಲ್ಲಿದ್ದೀರಿ ಎಲ್ಲಿದ್ದೀರಿ

*

ಬಸವಲಿಂಗಪ್ಪ ಸಾಹಿತ್ಯಕ್ಕೆ ಭೂಸಾ ಅಂದಾಗ
ಕೋಲೆಬಸವನಂತೆ ಸೋ ಅಂದ
ಸೋಕಾಲ್ಡ್ ಬುದ್ಧಿಜೀವಿಗಳೇ,
ಸೋಲ್ಜೆನಿತ್ಸಿನ್ ಬಗ್ಗೆ ಚೆ ಗವಾರ ಬಗ್ಗೆ ಪಾಬ್ಲೋ ನೆರೂದ ಬಗ್ಗೆ
ಜೋರು ಭಾಷಣ ಕುಟ್ಟಿ ಮೇಜು ಮುರಿದು,
ಇಲ್ಲಿಯ ನೆಲ ಕ್ರಾಂತಿಗೆ ಹದಗೊಂಡಿಲ್ಲವೆಂದು ಹೇಳಿ
ಆಕಾಶದಲ್ಲಿ ರಂಟೆ ಕುಂಟೆ ಹೂಡಿ,
ಬೆಳಗು ಹರಿವುದರೊಳಗೆ ತಿರುಗುಮುರುಗು ಆಲದ ಮರ
ಇಳಿಬಿಟ್ಟ ಅಗೋಚರ ಖೇಚರರೇ,

ರೋಮ ರೋಮ ಹತ್ತಿ ಉರಿಯುವಾಗ
ಯಾರೊ ದಾನವಾಗಿತ್ತ ಅಲಂಕಾರಗಳನ್ನು ಬೆಂಕಿಗೆಸೆದು,
ಹೊಟ್ಟೆ ತುಂಬಿದ ಮೇಲೆ
ಹುಗ್ಗಿ ತ್ಯಾಗ ಮಾಡಿದ ಧಿಡೀರ್ ಹೀರೋಗಳೇ,
ಕ್ರಾಂತಿಯ ಪಿಟೀಲು ನುಡಿಸುವ
ಭಾರತೀಪುರದ ನೀರೋಗಳೇ,
ಖಾಲಿಹೊಟ್ಟೆಯ ಕೂಗು ಕರುಳು ಕೀಳುವಾಗ
ಅಡಿಗೆಕಾವ್ಯದ ಮಬ್ಬು ನೆತ್ತಿಗೇರಿ
ಕುಲದ ಕೀ ಕೊಟ್ಟರೆ ಸಾಕು ಜನ್ಮದಾಚೆಯ ನೆನಪು ಮರುಕಳಿಸಿ
ಡಿಗಾ ಡಿಗಾ ಅಂತ ಅಡಿಗಡಿಗೆ ಢಿಕ್ಕಿ ಹೊಡೆವ
ಚಿನ್ನದ ನಳಿಗೆಯೊಳಗಣ ಡೊಂಕು ಚೆಂಡಿಕೆಯ
ಕರಣಿಕರೇ ಭಟರೇ ವಿಟರೇ,

ನೆಲ ಬಾ ಬಾ ಎಂದು ಕಾಲು ಜಗ್ಗುವಾಗ
ಶಿರಸ್ಸಿನ ಬ್ರಹ್ಮಸರಸ್ಸಿನಲ್ಲಿ ಬಿದ್ದಾಡಿ,
ಪುರಾಣ ದಂತಕತೆಗಳ ಸನಾತನ ಸಂತೆಯಲ್ಲಿ
ಹೇಷಾರವಗೈಯುವ ಕುದುರೆಮುಖದವರೇ,
*****
ಮೊಲ ಎದ್ದಾಗ ನಾಯಿ ಹೇಲಲು ಹೋಗಿತ್ತಂತೆ.
ಎಲ್ಲಿದ್ದೀರಿ ಎಲ್ಲಿದ್ದೀರಿ ಎಲ್ಲಿದ್ದೀರಿ.....

೧೯೭೬

ಗಾಂಧೀಸ್ಮರಣೆ

*

ಖಾಲೀ ಗದ್ದಲದ ಈ ನಾಡಿನ ಉದ್ದಗಲಕ್ಕೂ
ಈಗ ಶಾಂತಿ ನೆಲೆಸಿದೆ.
ನರನಾಡಿಯೆಲ್ಲ ನಿಂತೇ ಹೋದಂತಾಗಿ
ನಾವೆಲ್ಲ ಯೋಗಿಗಳಾಗಿದ್ದೇವೆ.
ಹಾದಿ ಮಾತು, ಬೀದಿ ಭಾಷಣಗಳ ಸದ್ದಡಗಿ
ಕಿವಿ ತುಂಬ ಹುಲುಸಾಗಿ ಕೂದಲು ಬೆಳೆಯುತ್ತಿದೆ.

ಅನಾಚಾರ ಅತ್ಯಾಚಾರ ಭ್ರಷ್ಟಾಚಾರಗಳ ಬದಲು
ಪತ್ರಿಕೆಗಳ ತುಂಬ ಶುದ್ಧ ಸಮಾಚಾರ ತುಂಬಿದೆ.
ಎಲ್ಲಾ ಸಾಮಾನುಗಳ ಬೆಲೆ ಇಳಿದೂ ಇಳಿದೂ
ಈಗ ಕೈಗೆ ಸಿಗದಂತಾಗಿವೆ.
ಬಿಡಾಡಿ ನಾಯಿಗಳ ನಿರ್ಬೀಜೀಕರಣವಾಗಿದೆ.
ಭಾರತದ ಜನಸಂಖ್ಯೆ ಇಳಿಯುತ್ತಿದೆ.

ನಾಳಿನ ನಾಗರಿಕರಾದ ಇಂದಿನ ಮಕ್ಕಳೆಲ್ಲ
ಸರಿಯಾಗಿ ಸಾಲೆಗೆ ಹೋಗಿ
ಒಂದು ಎರಡು ಬಾಳೆಲೆ ಹರಡು
ಕಲಿಯುತ್ತಿದ್ದಾರೆ.
ಹಸಗಂಡು ಮನೆಗೆ ಬಂದು
ಮಣ್ಣಿನ ವಾಸನೆಯ ತಾಜಾ ಊಟ ಮಾಡುತ್ತಾರೆ.

ಜಾಣ ಬಾಬಾಗಳಿಗೆ ಹುಚ್ಚಗೌಡರ ಬೆನ್ನುಸಿಕ್ಕು
ಧರ್ಮೋದ್ಧಾರದ ಸವಾರಿ ಮುನ್ನಡೆದಿದೆ.
ಅಸ್ಪೃಶ್ಯ ದೇವರಿಗೆ ಹರಿಜನರ ದರ್ಶನವಾಗಿ
ಅವರ ಉದ್ಧಾರವೂ ಆಗುತ್ತಿದೆ.

ಸರಕಾರದ ಕೆಲಸ ದೇವರ ಕೆಲಸವಾಗಿ
ತುಪ್ಪದ ದೀಪ ಧಾಳಾಗಿ ಉರಿಯುತ್ತಿವೆ.
ವಿಶೇಷ ಪ್ರಾರ್ಥನೆಗಳಿಂದಾಗಿ ದೇಶದ ತುಂಬ
ಜಿಟಿ ಜಿಟಿ ಮಳೆ ಹಿಡಿದಿದೆ.
ನಮ್ಮ ತ್ರಿವರ್ಣ ಧ್ವಜ ತೊಯ್ದು ತಪ್ಪಡಿಯಾಗಿ
ಅಶೋಕ ಚಕ್ರ ಸ್ಥಿರವಾಗಿದೆ.

ಹೆದ್ದಾರಿಯ ಮೇಲೆ ಕೆಟ್ಟುನಿಂತ ಟ್ರಕ್ಕು ಕೂಡ
ನಾಡು ಮುನ್ನಡೆದಿದೆ–ಎಂಬ ಸಂದೇಶ ಹೊತ್ತಿದೆ.
ರೇಡಿಯೋದ ಗಿಳಿವಿಂಡು, ಅದೋ,
ಒಕ್ಕೊರಲಿಂದ ಅದೇ ಹಾಡು ಹಾಡುತ್ತಿದೆ.

ಧನ್ಯತೆಯ ಈ ಕ್ಷಣದಿ, ಓ ಮುದ್ದುರಂಗ,
ಕಿವಿ ಮುಚ್ಚಿ, ಕಣ್ಣು ಮುಚ್ಚಿ,
ನೆನೆ ನೆನೆ ಗಾಂಧಿಯನು,
(ಯಾವ ಗಾಂಧಿ? ಅಂತ ತಿಳಿಯದೇ ಪೆದ್ದಲಿಂಗ?)
ಬಾಯಿ ಮುಚ್ಚಿ,
ನೆನೆ ನೆನೆ ಗಾಂಧಿಯನು.

೧೯೭೬

ಹಿನ್ನುಡಿ : ಪಿ. ಲಂಕೇಶ್

೧

But again and again there comes a time in history when the man who dares to say that two and two make four is punished with death.

- Camus : 'The Plague'

ಎಲ್ಲ ಕ್ರೂರ ವ್ಯವಸ್ಥೆಗಳ ದಡ್ಡತನಕ್ಕೆ ಆ ವ್ಯವಸ್ಥೆಗಳು ತಮ್ಮ ಜಾಣ, ಪ್ರಾಮಾಣಿಕ ಮನುಷ್ಯರನ್ನು ನಡೆಸಿಕೊಳ್ಳುವ ರೀತಿ ಸರಿಯಾದ ಗುರುತಾಗಿದೆ. ಮನುಷ್ಯನಿಂದ ಬಹಳಷ್ಟನ್ನು ನಿರೀಕ್ಷಿಸುವ ಈ ವ್ಯವಸ್ಥೆಗಳಿಗೆ ತಿಳಿಯುವದೇ ಇಲ್ಲ; ಮನುಷ್ಯನ ಘನತೆ ಮತ್ತು ಧೈರ್ಯ ಹೋದ ಮೇಲೆ ಆತನ ಬುದ್ಧಿ ಮತ್ತು ಕ್ರಿಯಾಶೀಲತೆಗೆ ಗರ ಹೊಡೆಯುತ್ತದೆ. ಪ್ರೇಮವನ್ನು ನಿರೀಕ್ಷಿಸುವ ಎಲ್ಲರೂ ಸ್ವಾತಂತ್ರ್ಯ ಕೊಡಬೇಕಾಗಿರುವಂತೆ ಯಾವುದೇ ರೀತಿಯ ಒಳ್ಳೆಯದನ್ನು ನಿರೀಕ್ಷಿಸುವ ಪ್ರತಿಯೊಂದು ವ್ಯವಸ್ಥೆಯೂ ತನ್ನ ಪ್ರಜೆಗಳನ್ನು ಗೌರವಿಸುವುದನ್ನು ಕಲಿಯಬೇಕಾಗಿದೆ; ತನ್ನ ಸದಸ್ಯರಲ್ಲಿ ವಿರೋಧವನ್ನು ಪ್ರೇರೇಪಿಸಬೇಕಾಗಿದೆ. ಇದು ನಾಗರೀಕತೆಯ ವಿಚಿತ್ರ ಸ್ವಯಂವಿರೋಧ. ಇದನ್ನು ನೆನೆದು ನಾವು, ತಮ್ಮ ಸ್ವಂತ ಆರಿಸಿಕೆಯಿಂದಲೇ ಗುಲಾಮರಾದವರನ್ನು ನೋಡಿದಾಗ ವ್ಯವಸ್ಥೆಯ ಬಗ್ಗೆ ಮತ್ತು ಆ ಸೇವಕರ ಬಗ್ಗೆ ನಮ್ಮಲ್ಲಿ ಅನುಕಂಪೆ ಮೂಡುತ್ತದೆ. ನಮ್ಮ ಪಾಟೀಲರ 'ಗಾಂಧೀಸ್ಮರಣೆ'ಯಂತಹ ಕವನಗಳ ದೇಶಪ್ರೇಮ, ನಮ್ಮ ರೇಡಿಯೋ ಅಧಿಕಾರಿಗಳಿಗೆ, ವಾರ್ತಾ ಇಲಾಖೆಯವರಿಗೆ ಯಾಕೆ ಕಾಣವುದಿಲ್ಲವೋ ತಿಳಿಯುವುದಿಲ್ಲ; ಈಚೆಗೆ ರೇಡಿಯೋ, ಟೆಲಿವಿಜನ್ ಇತ್ಯಾದಿಗಳ ಮೂಲಕ ಪ್ರಚಾರ ಗಳಿಸುತ್ತಿರುವ ರೇಡಿಯೋ ಕವಿಗಳು, ಟೆಲಿವಿಜನ್ ಕಲಾವಿದರು, ಸಾಕ್ಷ್ಯ ಚಿತ್ರ ನಿರ್ಮಾಪಕರು, ನಮ್ಮ ಜನಕ್ಕೆ, ನಮ್ಮ ಪ್ರಜಾಸತ್ತಾತ್ಮಕ ಸರಕಾರಕ್ಕೆ ಒಳ್ಳೆಯದಕ್ಕೆ ಬದಲು ಕೆಟ್ಟದನ್ನೇ ಮಾಡುತ್ತಾರೆ. ಸದಾ ಹಸ್ತ ಹೊಸೆಯುತ್ತ ದಣಿಗಳ ಕಾಣಿಕೆಗಳಿಗಾಗಿ ಕಾಯುವ ಈ 'ಪ್ರತಿಭೆಯ' ವೀರಾಭಿಮನ್ಯುಗಳು ಎಲ್ಲ ವ್ಯವಸ್ಥೆಯ ನಿರ್ಜೀವ ಭಾರವಾಗುತ್ತಾರೆ; ಮಾತ್ರವಲ್ಲ, ಮನುಷ್ಯರನ್ನು ಹೇಸರಗತ್ತೆಗಳ ಸ್ಥಿತಿಗಳಿಗೆ ಕೊಂಡೊಯ್ಯುತ್ತಾರೆ. ಈ ಕಲಾವಿದರ ಹೆಸರುಗಳನ್ನು ಹೇಳಬೇಕಾದ ಅಗತ್ಯವಿಲ್ಲ ಎನ್ನುವಷ್ಟು ಮಟ್ಟಿಗೆ ಇವರ ಹೆಸರುಗಳು ಜಾಹೀರುಗೊಂಡಿವೆ.

ಈ ವೀರಾಭಿಮನ್ಯುಗಳಿಂದ ಆಗುವ ದೊಡ್ಡ ಅಪಾಯವೆಂದರೆ ಕಲೆ ಎನ್ನುವುದು ಕೇವಲ ಕಸುಬು ಎನ್ನಿಸಿಕೊಂಡು, ಮಾತುಗಳು ಕೇವಲ ಗದ್ದಲಗಳ ಮಟ್ಟದಲ್ಲಿ, ಚಿತ್ರ ಕೇವಲ ಬಣ್ಣದ ಅಥವಾ ರೇಖೆಯ ಮಟ್ಟದಲ್ಲಿ, ನೃತ್ಯ ಕೇವಲ ಚಲನೆಯ ಮಟ್ಟದಲ್ಲಿ ಕಂದಿ ಕೊಳೆಯತೊಡಗುವುದು. ಇದೇ ಮುಂದೆ ಹೋಗಿ ಸಾರ್ವತ್ರಿಕವಾಗುತ್ತದೆ – ರಾಜಕೀಯ: ಅಧಿಕಾರ ಪಡೆಯುವುದು; ವಾಸ್ತುಶಿಲ್ಪ: ಜೈಲುಗಳನ್ನು ಕಟ್ಟುವುದು; ದೇಶಪ್ರೇಮ; ಕಂಡವರ ನಗೆಯನ್ನು, ಮಾತುಗಳನ್ನು ಹೊಸಕುವುದು; ಬುದ್ಧಿವಂತಿಕೆ: ಇಲ್ಲದ ಅರ್ಥ ಹೊರಡಿಸುವುದು–ಇದರಲ್ಲಿ ಪರ್ಯವಸಾನವಾಗುತ್ತದೆ. ಒಂದು ದೇಶದ ಕೆಲವೇ ಕೆಲವರು ಜೀವನ ಕೇವಲ ಬಣ್ಣ, ಗದ್ದಲಕ್ಕಾಗಿ ಅಲ್ಲ ಎಂದು ತೋರಿಸುತ್ತಾರೆ. ಅಂಥವರಲ್ಲಿ ಮೋಹನದಾಸ ಕೆ. ಗಾಂಧಿ ಒಬ್ಬ ಮನುಷ್ಯ.

ಗಾಂಧೀಜಿಯವರ ಬಗ್ಗೆ ಚಿಂತನೆ ಮಾಡುವುದಕ್ಕೆ ಇದು ತಕ್ಕ ಸಮಯ ಎಂದರೆ ಎಲ್ಲರೂ ಹೇಳುವುದನ್ನೇ ಹೇಳಿದಂತಾಗುತ್ತದೆ. ಆದರೆ ಗಾಂಧೀಜಿಯವರಿಗೆ ಮಹಾತ್ಮ ಎಂಬ ಪಟ್ಟಿಯನ್ನು ಹಚ್ಚಿ, ಆತನನ್ನು ತಂದೆ, ದೇವರು ಎಂದೆಲ್ಲ ಕರೆದ ನಾವು ಈಗಾಗಲೇ ಆತನ ಸಮಾಧಿ ಮಾಡಿದ್ದೇವೆ. ನಾವು ಆತನ ಬಗ್ಗೆ ಮರೆತಿರುವ ಕೆಲ ಸಂಗತಿಗಳಿವೆ. ಗಾಂಧಿ ಎಲ್ಲರಂತೆಯೇ ಮನುಷ್ಯನಾಗಿದ್ದ. ಅಷ್ಟೇ ಅಲ್ಲ, ಆತ ನೋಡಲು ಮೈಕಟ್ಟಿನ ದೃಷ್ಟಿಯಿಂದ ನಮ್ಮಲ್ಲಿ ಅನೇಕರಷ್ಟು ಸ್ಫುರದ್ರೂಪಿ ಕೂಡ ಇರಲಿಲ್ಲ. ಆತ ನಮ್ಮೆಲ್ಲರಂತೆಯೇ ಹಲವು ಬಗೆಯ ಸೋಲುಗಳನ್ನು ಅನುಭವಿಸಿದ್ದ, ಹಾಗೆ ಸೋಲು ಆತನ ಜೊತೆಗಾರ ಆಗಿರದಿದ್ದರೆ ಆತ ಸುಮಾರು ನಲವತ್ತು ವರುಷ ಸ್ವಾತಂತ್ರ್ಯಕ್ಕಾಗಿ ಪರದಾಡಬೇಕಾಗಿರಲಿಲ್ಲ. ಆತ ಭಾಷಣಕ್ಕೆ ಹೋದ ಸಭೆಗಳು ಖಾಲಿ ಇದ್ದ ಪ್ರಸಂಗಗಳು, ಆತನ ಮುಖ ಕೆಂಪಾಗುವಂತೆ ಅವಮಾನ ಹೊಂದಿದ ಸಮಯಗಳು ಲೆಕ್ಕವಿಲ್ಲದಷ್ಟು ಇವೆ. ಆದರೆ ಈ ರೀತಿಯ ಸೋಲನ್ನು ನುಂಗಿ ತಮಾಷೆ ಮಾಡಬಲ್ಲ ಹಾಸ್ಯದ ದೃಷ್ಟಿಯನ್ನೂ ಆತ ಪಡೆದಿದ್ದ. ಯಾವುದು ತನ್ನ ನೊಂದ ಜನಕ್ಕೆ ಬೇಕು, ಯಾವುದು ಬೇಡ ಎಂಬುದು ಆತನ ವ್ಯಾವಹಾರಿಕ ದೃಷ್ಟಿಗೆ ಕೂಡಲೇ ಹೊಳೆಯುತ್ತಿತ್ತು. ಆತನ ಕಣ್ಣೆದುರಿಗೇ ಜಗತ್ತಿನ ಎರಡು "ಕ್ರಾಂತಿ"ಗಳು ಆಗಿದ್ದವು. ಒಂದು, ಹಿಟ್ಲರ್ ಜರ್ಮನಿಯಲ್ಲಿ ಮಾಡಿದ ಕ್ರಾಂತಿ ; ಇನ್ನೊಂದು, ಲೆನಿನ್, ಸ್ಟಾಲಿನ್ ಗೆಳೆಯರು ರಷ್ಯಾದಲ್ಲಿ ಮಾಡಿಸಿದ ಕ್ರಾಂತಿ. ನೀತ್ಸೆ ಮಹಾಶಯನಿಂದ ಸ್ಫೂರ್ತಿ ಪಡೆದ ಹಿಟ್ಲರ್ ಪ್ರಜಾಪ್ರಭುತ್ವದ ಏಣಿ ಬಳಸಿಕೊಂಡು, ಆಧುನಿಕ ವಿಜ್ಞಾನದ ನೆರವು ಪಡೆದು ತನ್ನ ಜನಕ್ಕಾಗಿ ಸುಖೀರಾಜ್ಯದ ಸ್ವರ್ಗ ಕಟ್ಟಲು ನೋಡಿದ; ಮಾರ್ಕ್ಸ ಮಹಾಶಯನಿಂದ ಸ್ಫೂರ್ತಿ ಪಡೆದ ಲೆನಿನ್ ತಾನು ಮಾಡುವುದೆಲ್ಲ ವೈಜ್ಞಾನಿಕ ಎಂಬ ಭ್ರಮೆ ಇಟ್ಟುಕೊಂಡು ತನ್ನ ದೇಶವನ್ನು

ನರಕವನ್ನಾಗಿಸಿ, ಸೈಬೀರಿಯಾವನ್ನು ಎಲ್ಲ ಫ್ಯಾಸಿಸ್ಟ್ ವ್ಯವಸ್ಥೆಯ ಸಂಕೇತವಾಗಿಸಿದ. ತಾರುಣ್ಯದಲ್ಲಿದ್ದ ನೆಹರೂ ಅಂಥವರಿಗೆ ಈ ಎರಡು ಕ್ರಾಂತಿಗಳಲ್ಲಿ ಒಂದನ್ನು ಆರಿಸಿಕೊಳ್ಳಲು ಕಷ್ಟವಾಗಲಿಲ್ಲ. ಆದರೆ ಆಗಲೇ ನಡುವಯಸ್ಸು ತಲುಪುತ್ತಿದ್ದ ಗಾಂಧೀಜಿಗೆ ಕೆಲವು ಸೂಕ್ಷ್ಮಗಳು ಹೊಳೆದಿದ್ದವು. ಅವುಗಳನ್ನು ಎರಡು ಭಾಗಗಳಾಗಿ ಇಟ್ಟು ನೋಡಬಹುದು ಎನಿಸುತ್ತದೆ. ಗಾಂಧೀಜಿ ನಮ್ಮಲ್ಲಿ ಹುಟ್ಟಿದ ದೊಡ್ಡ ಜಾತ್ಯತೀತ ಮನುಷ್ಯನೆನ್ನುವುದು ಎಲ್ಲರಿಗೂ ಗೊತ್ತಿದೆ. ಆದರೆ ಆತ ಒಂದು ದೇಶದ ಜನರಲ್ಲಿ ಅಹಂಕಾರ, ಅಧಿಕಾರ-ಮದವನ್ನು ಬಿತ್ತಬಲ್ಲದು ಎಂಬುದು ಆತನಿಗೆ ಗೊತ್ತಿತ್ತು; ಕ್ರೌರ್ಯದ ಮೇಲೆ ಕಟ್ಟಿದ ರಾಷ್ಟ್ರ ಕ್ರೌರ್ಯವನ್ನೇ ತಿಂದು ಬದುಕಬೇಕಾಗುತ್ತದೆ ಎಂಬುದು ಆತನಿಗೆ ಗೊತ್ತಿತ್ತು. ಆದ್ದರಿಂದ ಭಾರತದ ಜನರನ್ನು ಹಿಂಸಾತ್ಮಕ ವ್ಯಕ್ತಿಗಳನ್ನಾಗಿ ಮಾಡಿ ಆ ಮೂಲಕ ಸ್ವಾತಂತ್ರ್ಯ ಪಡೆಯಲು ಗಾಂಧಿ ನಿರಾಕರಿಸಿದ. ಯಾವುದೇ ರಾಷ್ಟ್ರವಾಗಲಿ ಅದೊಂದು ಬೇಕಾದ ವಸ್ತು-ತೀರಾ ಕೆಳಮಟ್ಟದ ವ್ಯಕ್ತಿಗೆ ಕೂಡ ಸವಲತ್ತು ಮತ್ತು ಜೀವನಾಧಾರಗಳನ್ನು ಒದಗಿಸಿಕೊಡಲು ಬೇಕಾದ ಒಂದು ಅಂಶ ಮಾತ್ರ, ಎಂಬುದು ಗಾಂಧೀಜಿಗೆ ಗೊತ್ತಿತ್ತು. ಇದನ್ನು ಸರಳವಾಗಿಸಿ ಹೇಳುವುದಾದರೆ, ರಾಷ್ಟ್ರಕ್ಕಾಗಿ ಮನುಷ್ಯನೋ ಮನುಷ್ಯನಿಗಾಗಿ ರಾಷ್ಟ್ರವೋ ಎಂಬ ಪ್ರಶ್ನೆಗೆ ಗಾಂಧೀಜಿಯ ಉತ್ತರ ಏನೆಂದು ನಮಗೆಲ್ಲಾ ಗೊತ್ತು. ಆದ್ದರಿಂದಲೇ ಗಾಂಧೀಜಿಯ ಗಮನವೆಲ್ಲಾ ಮನುಷ್ಯರ ಕಡೆಗೆ, ಅವರ ಜೀವನದ ವಿವರಗಳ ಕಡೆಗೆ ಇರುತ್ತಿತ್ತು. ಇಂಗ್ಲಂಡು, ಪಾಕಿಸ್ತಾನ ಮುಂತಾದ ದೇಶಗಳೆಲ್ಲಾ ಆತನಿಗೆ ಮನುಷ್ಯರಿಂದ ಕೂಡಿದ ಜಾಗಗಳಾಗಿ ಕಾಣುತ್ತಿದ್ದವೇ ಹೊರತು ಕೇವಲ ಜಾಗಗಳಾಗಿ ಆತನಿಗೆ ಕಾಣುತ್ತಲೇ ಇರಲಿಲ್ಲ. ಆದ್ದರಿಂದಲೇ ಆತ ಎಲ್ಲ ದೇಶದ ವ್ಯಕ್ತಿಯಾಗಿದ್ದ; ಮಾತ್ರವಲ್ಲ, ದೇಶಾತೀತ ವ್ಯಕ್ತಿಯಗಿದ್ದ. ಸರಕಾರದ ಬಲವನ್ನು ಸದಾ ಸಂಶಯ ಮತ್ತು ತಾತ್ಸಾರದಿಂದ ನೋಡುತ್ತಿದ್ದ. ಕಮ್ಯೂನಿಸ್ಟ್ ಸಿದ್ಧಾಂತ ಎಲ್ಲಕ್ಕೂ ಮದ್ದೆಂದೂ ಜಾಗತಿಕ ಕಾರ್ಮಿಕರನ್ನು ಒಂದಾಗಿಸುವ ಸಾಧನವೆಂದೂ ನಂಬಿದ ಜನ ರಾಷ್ಟ್ರಗಳಾಗಿ ಒಡೆದದ್ದು, ಪ್ರಾಣಿಗಳಂತೆ ಕಚ್ಚಾಡತೊಡಗಿದ್ದು ಇದನ್ನು ಈಗ ಗಾಂಧಿ ನೋಡಿದ್ದರೆ ತನ್ನ ನಂಬಿಕೆ ಹೇಗೆ ನಿಜವಾಯಿತೆಂದು ಹೆಮ್ಮೆಪಡುವ ಬದಲು ಸರಕಾರಕ್ಕೆ ಗುಲಾಮರಾದ ಕೋಟ್ಯಾಂತರ ಜನರ ಬಗ್ಗೆ ಅನುಕಂಪೆ ಪಡುತ್ತಿದ್ದ.

ಎರಡನೆಯ ಗುಂಪಿನಲ್ಲಿ ಚರ್ಚಿಸಬೇಕಾದ್ದೊಂದಿದೆ. ಅದು, ಗಾಂಧೀಜಿ ಮನುಷ್ಯನ ಬಗ್ಗೆ ಕೇಳಿದ ಮೂಲಭೂತ ಪ್ರಶ್ನೆಗಳು. ರಾಜಕೀಯವಾಗಿ ಜನಕ್ಕೆ ಏನು ಬೇಕು ಎಂದು ಕೇಳಿದ ಈ ವ್ಯಕ್ತಿಗೆ ತನ್ನ ಹತ್ತಿರದ ಮನುಷ್ಯ ಆಶೆ, ಪ್ರಲೋಭನೆಗಳಂತೆಯೇ ಆತ ಹೊಂದಬಹುದಾದ ಸಂಗತಿಗಳ ಇತಿ ಮಿತಿ ಬಹಳ ಚೆನ್ನಾಗಿ ತಿಳಿದಿತ್ತು. ಆತನ ಮಾನಸಿಕ ಆರೋಗ್ಯ ಅನಾರೋಗ್ಯ ಕೂಡ. ಮನುಷ್ಯನ

ಊಟ, ನಿದ್ರೆ, ಮೈಥುನ, ಭೋಗ ಎಲ್ಲಕ್ಕೂ ಮಿತಿ ಇದೆ. ಈ ಮಿತಿಯು ಹತ್ತಿರ ಇರುವ ತನಕ ಅವನಿಗೆ ಆರೋಗ್ಯವಿರುತ್ತದೆ; ಅವುಗಳೊಂದಿಗೆ ದೂರ ಹೋದಾಗಲೆಲ್ಲ ಊಟ, ನಿದ್ರೆ, ಮೈಥುನ ಇತ್ಯಾದಿಗಳ ಭ್ರಮೆಯಲ್ಲಿ ಬದುಕುತ್ತಾನೆ. ಅದು ಆತನ ಕ್ರೌರ್ಯ, ಅಸ್ಥಿರತೆಯ ಸ್ಥಳ. ಆದ್ದರಿಂದಲೇ ಗಾಂಧಿ ಈ ಇಂದ್ರಿಯಗಳ ಪರಿಸರದ ಮೌಲ್ಯಕ್ಕಾಗಿ ಹುಡುಕುತ್ತಾನೆ. ಆತನ ಪ್ರೇಮ, ಘನತೆ, ಸ್ವಾತಂತ್ರ್ಯದ ಮೌಲ್ಯಗಳು ಎಲ್ಲರೂ ತಿಳಿದಂತೆ ದೈವಿಕ ಮೌಲ್ಯಗಳಲ್ಲ ; ಮಾನವನಿಗೆ ಸಾಧ್ಯವಾದ ಮೌಲ್ಯಗಳು; ಅವಿಲ್ಲದೇ ಆತನ ಊಟ, ನಿದ್ರೆ, ಮೈಥುನದ ಕ್ರಿಯೆಗಳು ನಿಷ್ಪ್ರಯೋಜಕವಾಗುತ್ತವೆ.

ಬಹುಶಃ ಮಾನವ ಕೋಟಿ ತನ್ನ ಲಕ್ಷಾಂತರ ವರ್ಷಗಳ ಮುನ್ನಡೆಯಲ್ಲಿ ಸೃಷ್ಟಿಸಿರಬಹುದಾದ ಅತ್ಯಂತ ದೊಡ್ಡ ಮನುಷ್ಯ ಗಾಂಧೀಜಿ ಇರಬಹುದು ಎನ್ನುವುದಕ್ಕೆ ಮೇಲಿನ ಕಾರಣಗಳ ಜೊತೆಗೆ ಆತನಿಗಿದ್ದ–ಭಾರತೀಯರಿಗೆ ಬಹುಪಾಲು ಇಲ್ಲದಿರುವ–ಇತಿಹಾಸ ಪ್ರಜ್ಞೆ ಮತ್ತು ಸಮಕಾಲೀನ ಪ್ರಜ್ಞೆ ಕೂಡ ಕಾರಣವಾಗುತ್ತದೆ. ಸಾಕ್ರೆಟೀಸ್, ಥಾಮಸ್ ಮೋರ್, ಲ್ಯೂಥರ, ಲಿಂಕನ್, ಮಾವೋ ಮುಂತಾದ ಜನರನ್ನು ನೆನೆಯುವಾಗ – (ಕ್ರಿಸ್ತ, ಬುದ್ಧರ ಬಗೆಗೆ ಖಚಿತವಾಗಿ ಅಷ್ಟಾಗಿ ಗೊತ್ತಿಲ್ಲವಾದ್ದರಿಂದ)– ಅವರೆಲ್ಲರೂ ಒಂದಿಲ್ಲ ಒಂದು ಕಾರಣಕ್ಕೆ ಮುಕ್ಕಾಗಿ ಕಾಣುತ್ತಾರೆ. ಗ್ರೀಸಿನ ಕ್ರಿಯಾಶಾಲಿತ್ವದ ಇಳಿಮುಖದ ವೇಳೆಯಲ್ಲಿ ಬಂದ ಸಾಕ್ರೆಟೀಸ್ ತನ್ನ ರಾಜ್ಯದ ಆಡಳಿತಕ್ಕೆ ಬೌದ್ಧಿಕ ಚೌಕಟ್ಟು ಸೂಚಿಸಿ ಕೊನೆಗೂ ತನ್ನವರೊಂದಿಗೆ ಒಂದಾಗದೇ ಹೋದ; ಲ್ಯೂಥರ, ಥಾಮಸ್ ಮೋರರ ಹಟಮಾರಿತನ ಮತ್ತು ಮೌಲ್ಯಪ್ರಜ್ಞೆಯ ನಡುವೆ ಹಟಮಾರಿತನಕ್ಕೆ ಹೆಚ್ಚು ಒತ್ತು ಬೀಳುತ್ತದೆ; ಇನ್ನಿಬ್ಬರು, ತಮ್ಮ ನಾಡಿನ ಶ್ರೇಷ್ಠತೆಯ ಬಗ್ಗೆ ಕಲ್ಪನೆಗಳನ್ನಿಟ್ಟುಕೊಂಡು ನೆತ್ತರು ಹರಿಸಿಯಾದರೂ ರಾಜ್ಯ ಕಟ್ಟಲು, ಒಗ್ಗಟ್ಟಾಗಿಸಲು ಹೋರಾಡಿದ ನೆಪೋಲಿಯನ್, ಅಲೆಗ್ಸಾಂಡರಗಳ ವಿವಿಧ ರೂಪಗಳು, ಮನುಷ್ಯರನ್ನು ದೇಶ, ಕಾಲವನ್ನು ಮೀರಿ ಪೊರೆಯಲು, ಪೊರೆಯುವ ಮೌಲ್ಯಗಳನ್ನು ನೀಡಲು ನಿರಂತರ ಧ್ಯಾನಿಸಿದ ಗಾಂಧಿ ಬಹುಮುಖ ವ್ಯಕ್ತಿತ್ವವುಳ್ಳ ಮನುಷ್ಯ.

ಗಾಂಧೀಜಿಯಂಥವರಿಗೆ ಒಂದು ದೇಶ ಏನನ್ನು ಮಾಡಬಹುದು ಎಂಬುದು ಈಗ ಸರ್ವವಿದಿತ ಸತ್ಯವಾಗಿದೆ. ಅಷ್ಟೇ ಅಲ್ಲ. ಗಾಂಧೀಜಿಗೆ ಹೊಗಳಿಕೆಯ ಕಾಣಿಕೆ ಸಲ್ಲಿಸಿದ ಜಗತ್ತಿನ ಜನ ಇವತ್ತಿಗೂ ಮಿಲಿಟರಿ ನೆರವಿನಿಂದ ವಿವಿಧ ದೇಶಗಳಾಗಿ ನಿಂತಿವೆ. ಮಿಲಿಟರಿ ನೆರವಿನಿಂದ ಸರಕಾರಗಳು ತಮ್ಮ ಜನರನ್ನು ಆಳುತ್ತಿವೆ. ಮುಂದುವರಿದ ದೇಶಗಳಲ್ಲಿ ಸರಕಾರಿ ವೆಚ್ಚದ ಬಹುಪಾಲು ಹಣ ಯುದ್ಧ ಸಲಕರಣೆಗೆ ಹೋದರೆ, ಹಿಂದುಳಿದ ನಾಡುಗಳಲ್ಲಿ ಬಾಂಬು ಗನ್ನುಗಳಿಗಾಗಿ ಅರ್ಧಕ್ಕಿಂತ ಹೆಚ್ಚು ಹಣ ವ್ಯಯವಾಗುತ್ತಿದೆ. ಗನ್ನುಗಳ ನೆರಳಿನಲ್ಲಿ ಬದುಕುತ್ತಿರುವ ಮನುಷ್ಯ ಗಾಂಧಿಯನ್ನು

ನೆನೆಯಲು ಸಾಧ್ಯವಿಲ್ಲ. ಆತನಿಗೆ ಯಾವುದೇ ರೀತಿಯ ಮಾನಸಿಕ ಆರೋಗ್ಯ ಸಾಧ್ಯವಿಲ್ಲ. ಈ ಸತ್ಯವನ್ನು ನೋಡಲಾರದ ಜನ ಮಾತ್ರ ಗಾಂಧೀಜಿ ಎಂದರೆ ದಿಗಿಲು ಬೀಳುತ್ತಾರೆ; ಆದ್ದರಿಂದ ಅವರನ್ನು ಮರೆಯಲೆತ್ನಿಸುತ್ತಾರೆ.

೨

ಪಾಟೀಲರು ಈ ಕವನ ಸಂಕಲನಕ್ಕೆ "ಗಾಂಧೀ ಸ್ಮರಣೆ" ಎಂದು ಕರೆದದ್ದು ಸರಿಯಾಗಿದೆ. ಇದೇನು ಹೊಸ ಹೆಸರಲ್ಲ. ಭಾರತದ ಕವಿಗಳು ಸುಮಾರು ಮೂವತ್ತು ವರ್ಷಗಳಿಂದ ಗಾಂಧೀಜಿಯವರನ್ನು ಒಂದಲ್ಲ ಒಂದು ರೀತಿಯಲ್ಲಿ ಕಾಡಿದ್ದಾರೆ. ಆದರೆ ಈ ಸಂದರ್ಭದಲ್ಲಿ ಗಾಂಧೀಜಿಯವರನ್ನು ನೆನೆದದ್ದು ಮತ್ತು ನೆನೆದ ರೀತಿ ವಿಶಿಷ್ಟ ಅರ್ಥ ಪಡೆದಿದೆ. ಹೆಚ್ಚು ವಿಳಂಬಿಸದೇ ಹೇಳುವುದಾದರೆ, ಈ ಒಂದೂವರೆ ವರ್ಷದ ಅವಧಿಯಲ್ಲಿ ನಮಗೆ ಕೇಳಿ ಬರುತ್ತಿರುವ ಒಂದೇ ಒಂದು ಸಾಹಿತ್ಯ ಧ್ವನಿ ಪಾಟೀಲರದು; ಅದು ಸಾಹಿತ್ಯ ಧ್ವನಿ ಎನಿಸಿಕೊಳ್ಳಲು ಯೋಗ್ಯವಾದದ್ದೂ ಕೂಡ ಅದರ ಸಾಹಿತ್ಯೇತರ ಗುಣಗಳಿಂದಾಗಿ.

ಗಾಂಧೀಜಿಯವರಿಗೆ ಸಾಹಿತ್ಯದ ಬಗ್ಗೆ ಹೇಳಿದಾಗಲೆಲ್ಲಾ ಅವರು ಅದು ಅಷ್ಟು ಮುಖ್ಯವಲ್ಲವೆಂದು ಸುಮ್ಮನಾಗುತ್ತಿದ್ದರು; ಅವರಿಗೆ ಸಾಹಿತ್ಯ ತನ್ನ ಪ್ರಚಾರ ಗುಣಗಳಿಂದಾಗಿ ಮತ್ತು ಕಲಾತ್ಮಕತೆಯಿಂದಾಗಿ ನಿರುಪಯುಕ್ತವಾಗಿ ಕಾಣುತ್ತಿತ್ತು. ತಮ್ಮ ನಾಡಿನ ಬಸವಳಿದ ದಲಿತರ ಅಸಂಖ್ಯ ಮುಖಗಳಲ್ಲಿ, ಮೂಡುತ್ತಿರುವ ಸೂರ್ಯನ ಪ್ರಕಾಶದಲ್ಲಿ ಅವರಿಗೆ ಕಾವ್ಯ ಕಾಣುತ್ತಿತ್ತು. ಅದೇನೂ ಸಾಹಿತ್ಯ ಪ್ರಜ್ಞೆಯಲ್ಲ ಎಂದು ರಸವಾದಿಗಳಾದ ಪಂಡಿತರು ಹೇಳುತ್ತಿದ್ದರು. ಮತ್ತು ಅವರ ಹೇಳಿಕೆಯಲ್ಲಿ ಪರಂಪರಾಗತ ಸತ್ಯವಿತ್ತು. ಆದರೆ ಗಾಂಧೀಜಿಯ ವ್ಯಕ್ತಿತ್ವ ಕಾವ್ಯಕ್ಕೆ, ಒಟ್ಟಾರೆ ಸಾಹಿತ್ಯಕ್ಕೆ, ಮಾಡಿದ ಕೆಲಸ ವಿಚಿತ್ರವಾಗಿದೆ. ಗಾಂಧೀಜಿಯ ಕ್ರಿಯೆ ಯಾವ ಕೇಂದ್ರದಿಂದ ಆರಂಭವಾಯಿತೋ ಅದೇ ಕೇಂದ್ರದಿಂದ ಎಲ್ಲ ಮುಖ್ಯ ಸಾಹಿತ್ಯವೂ ಬರಬೇಕಾಗಿರುವುದು ಒಂದು ಕಾಕತಾಳೀಯವಾದರೂ ಆಶ್ಚರ್ಯ ಹುಟ್ಟಿಸಬಲ್ಲ ಸತ್ಯ. ಗಾಂಧೀಜಿಯವರ ವಾಕ್ ಸ್ವಾತಂತ್ರ್ಯ, ಆತ್ಮಾಭಿಮಾನ, ಅಸಹಕಾರದ ಸಿದ್ಧಾಂತಗಳು ಈ ಮಾತನ್ನು ಸ್ಪಷ್ಟಪಡಿಸಬೇಕು. ಅವರಿಗೆ ಕಂಡದ್ದನ್ನು ಕಂಡ ಕಡೆ ಮಾತಾಡುವ ಸ್ವಾತಂತ್ರ್ಯ ವಾಕ್ ಸ್ವಾತಂತ್ರ್ಯವಾಗಿರಲಿಲ್ಲ. ಅದು ಆತ್ಮಾಭಿಮಾನ ಮತ್ತು ಪ್ರತಿಭಟನೆಗೆ ಮಾಧ್ಯಮವಾಗಿತ್ತು. ಪ್ರತಿಭಟನೆ ಕೂಡ ಹಿಂಸೆಯದಲ್ಲ; ಪ್ರೀತಿಯದು, ಗಾಢ ನಂಬಿಕೆಯಿಂದ ಬಂದದ್ದು. ಈ ದೃಷ್ಟಿಯಿಂದ ಗಾಂಧೀಜಿ ನಮ್ಮ ಜನಕ್ಕೆ ಯೋಚನೆಗೂ ಆತ್ಮಾಭಿಮಾನಕ್ಕೂ ಅಭಿವ್ಯಕ್ತಿಗೂ ಸಂಬಂಧವಿರುವುದನ್ನು ತೋರಿಸಿದರು. ಅನ್ನ ಬಟ್ಟೆಗಾಗಿ ಎಂಥ ದಣಿಯನ್ನೂ ಚಿಂತನೆ, ಕೆಲಸದ ಮೂಲಕ ಆರಾಧಿಸುವ ಕೆಲಸ, gentlemen scoundrels ಮಾತ್ರ ಮಾಡಬಲ್ಲರೆಂದು ಸಾರಿ ಹೇಳಿದರು.

ನಮ್ಮ ಕ್ರಿಯೆಯ ಆಳ, ಧಾರ್ಮಿಕವೆನ್ನಿಸಿಕೊಳ್ಳಬಲ್ಲಂಥ ಮೂಲಗಳನ್ನು ಹುಡುಕಿ ತೋರುವ ಮೂಲಕ ನಮ್ಮ ಸಾಹಿತ್ಯ ಕೃತಿಯ ಆಳ, ಧಾರ್ಮಿಕ ಮೂಲಗಳನ್ನು ಹುಡುಕಲು ನಮ್ಮನ್ನು ಹಚ್ಚಿದರು. ಸಾಹಿತ್ಯದ ಹೊರಗಿದ್ದ ಗಾಂಧೀಜಿ ಈ ದೃಷ್ಟಿಯಿಂದಲೇ ಸಾಹಿತ್ಯ ಕೇವಲ ಅಲಂಕಾರವಲ್ಲ, ಅದಕ್ಕೆ ನಮ್ಮನ್ನು ಮನುಷ್ಯರನ್ನಾಗಿಸುವ ಮೌಲ್ಯಗಳು ಆಧಾರ ಎಂದು ತೋರಿದರು.

೩

ಚಂದ್ರಶೇಖರ ಪಾಟೀಲರ ಧ್ವನಿ ನಮ್ಮ ಈ ಕಷ್ಟದ ವರ್ಷಗಳಲ್ಲಿ ಧೈರ್ಯದ, ಘನತೆಯ, ಸ್ವಾತಂತ್ರ್ಯಕ್ಕೆ ಹತ್ತಿರ ಬರಲೆಳಸುವ ಏಕಮಾತ್ರ ಧ್ವನಿ ಎಂದು ಮತ್ತೊಮ್ಮೆ ಹೇಳಬಯಸುವೆ. ನಮ್ಮಲ್ಲಿ ಜಾತಿಯ ಹೆಸರೆತ್ತಿದರೆ ಮೂಗುಮುರಿಯುವ, ವರ್ಗಗಳ ಮಾತೆತ್ತಿದರೆ ಕ್ರೂರಿ ಎನ್ನುವ, ಭಾಷೆಯ ಸೊಲ್ಲೆತ್ತಿದರೆ ಪ್ರಾಂತೀಯ ಎನ್ನುವ ಪರಿಪಾಠವಿದೆ. ಮುಖ್ಯ, ಜಾತೀಯತೆ, ಪ್ರಾಂತೀಯತೆ ಇತ್ಯಾದಿಗಳು ಯಾವುದೇ ಬೌದ್ಧಿಕ ಹಂದರವಿಲ್ಲದೆ ವಿಜೃಂಭಿಸಿದರೆ ಅವಕ್ಕೆ ಸಣ್ಣತನ ಕಟ್ಟಿಟ್ಟದ್ದು ಅನ್ನುವುದರ ಬಗ್ಗೆ ಎರಡಭಿಪ್ರಾಯವಿಲ್ಲ. ಆದರೆ ತಲತಲಾಂತರದಿಂದ ಈ ನಾಡನ್ನು ಶೋಷಿಸಿದ ಜಾತಿ, ವರ್ಗ, ಭಾಷೆಯ ಬಗ್ಗೆ ಸುಸಂಗತವಾಗಿ ಮತ್ತು ಅನುಭವಗಳ ಒತ್ತಡದಿಂದ ಮಾತಾಡಿದರೆ ಅದಕ್ಕೆ ಹೊಸ ಶಕ್ತಿ ಬರುತ್ತದೆ. ಗಾಂಧೀಜಿಯ ಅಚ್ಚು ಮೆಚ್ಚಿನ ಶಿಷ್ಯ ಲೋಹಿಯಾ ಈ ಜಾತಿ, ವರ್ಗ, ಭಾಷೆಯ ಪ್ರಶ್ನೆಯನ್ನು ನಿಜಕ್ಕೂ ಮುಕ್ತ ಮನಸ್ಸಿನಿಂದ ಚರ್ಚಿಸಬಲ್ಲವರಾಗಿದ್ದರು. ತಮ್ಮ ಜನತೆಯ ಸರ್ವಾಂಗೀಣ ಬೆಳವಣಿಗೆಯ ಬಗ್ಗೆ ಆಸಕ್ತಿಯುಳ್ಳ ಪ್ರತಿಯೊಬ್ಬರೂ ಪ್ರೀತಿ ಮತ್ತು ಜವಾಬ್ದಾರಿಯಿಂದ, ಯಾವುದೇ ಪಾಪ ಪ್ರಜ್ಞೆಯಿಲ್ಲದೆ, ಚರ್ಚಿಸುವುದು ಸಾಧ್ಯವಾಗಬೇಕು.

೪

ಪಾಟೀಲರು, ನಾನು, ಅನಂತಮೂರ್ತಿ ಮುಂತಾದವರೆಲ್ಲ ವಾರಿಗೆಯವರು ಮಾತ್ರವಲ್ಲದೆ ಈ ದೇಶದ ಮೂರು ನಾಲ್ಕು ಅವಸ್ಥೆಗಳಲ್ಲಿ ಇದ್ದು ಅನುಭವಿಸಿದವರು. ಅತ್ತ ಇತ್ತ ನೋಡುವಷ್ಟರಲ್ಲಿ ಮೊನ್ನೆ ತಾನೇ–ತರುಣ ಲೇಖಕರಾಗಿದ್ದ ನಾವು ಈಚೆಗೆ ಕೊನೆಯ ಪಕ್ಷ ತಾರುಣ್ಯವನ್ನು ಬಿಟ್ಟಂತೆ ಕಾಣುತ್ತದೆ. ನವ್ಯ ಲೇಖಕರೆಲ್ಲ ವಿಕೃತವಾದದ್ದನ್ನು, ನೀಚವಾದದ್ದನ್ನು, ಕ್ರೂರವಾದದ್ದನ್ನು ನೋಡುವವರು, ಅಥವಾ ತಾಂತ್ರಿಕವಾಗಿ ಕೇವಲ ಕೈಚಳಕವುಳ್ಳವರು ಎಂಬಂಥ ಅರ್ಥ ಬರುವ ಮಾತುಗಳನ್ನು ಈಚೆಗೆ ಅಲ್ಲಲ್ಲಿ ನೋಡುತ್ತಿದ್ದೇವೆ. (ಕಂಬಾರರಂಥವರು ಮೊನ್ನೆ ಉದಯವಾಣಿಯ ವಿಶೇಷ ಸಂಚಿಕೆಯೊಂದರಲ್ಲಿ ಆ ಬಗೆಯಲ್ಲಿ ಬರೆದಂತೆ ನೆನಪು) ಆದರೆ ನಾನೆಂದುಕೊಂಡಿರುವಂತೆ, ಹೊಸ ಸಾಹಿತ್ಯವೆಂದರೆ ನಮ್ಮ ಅರ್ಥದಲ್ಲಿ ಬದುಕನ್ನು

ಕಾಣುವುದು ಮತ್ತು ಕಂಡದ್ದನ್ನು ತಕ್ಕ ಮಾತುಗಳಲ್ಲಿ ಕಟ್ಟುವುದು; ನಾವು ನೋಡಿದ ಬಗೆಯ ಗಟ್ಟಿತನಕ್ಕೆ ಹಲವು ಉದಾಹರಣೆ ಕೊಡಬಲ್ಲೆ ಆದರೆ ಈ ಗಟ್ಟಿತನ ನನಗೆ ಮತ್ತು ಅನಂತಮೂರ್ತಿಯವರಿಗೆ ಈ ಪುಸ್ತಕ ನೋಡಿ ಖಂಡಿತ ಅನ್ನಿಸಬಹುದಾದಂತೆ, ಪಾಟೀಲರ ಕವನಗಳಲ್ಲಿ ನಿಜಕ್ಕೂ ರುದ್ರಸುಂದರ ರೂಪವನ್ನು ಪಡೆಯುತ್ತದೆ. ರಾಜಕೀಯ, ಜಾತಿ, ಪ್ರೇಮ, ವರ್ಗ, ಭಾಷೆ, ಕಲೆಯ ಪ್ರಶ್ನೆಗಳನ್ನು ಜೀವನದ ಅನುಭವಗಳ ಸಾಕ್ಷ್ಯದೊಂದಿಗೆ ನನ್ನ ಸಮಕಾಲೀನರು ಚರ್ಚಿಸಿ ಅನುಭವಿಸಿ ಪಡೆದಷ್ಟನ್ನು ನಮ್ಮ ಹಿಂದಿನ ಕನ್ನಡದ ಯಾವ ಜನಾಂಗವೂ ಪಡೆದಿರಲಿಕ್ಕಿಲ್ಲ; ಪ್ರತಿಯೊಂದು ಘಟ್ಟವೂ ನಮ್ಮ ತಿಳಿವಳಿಕೆಯನ್ನಲ್ಲದೇ ಸೃಜನಶೀಲತೆಯನ್ನು ಪುನಶ್ಚೇತನಗೊಳಿಸುವ ಸಾಧನವಾಯಿತು. ಜೀವನ ಸದಾ ಸ್ಪಂದಿಸಿ ಕಾಣಬೇಕಾದ್ದು ಆದ್ದರಿಂದ ಹಿಂದಕ್ಕೆ ನೋಡಿ ರೋಮಾಂಚನಗೊಳ್ಳುವ ಚಟ ನಮಗೆ ಇಷ್ಟವಿಲ್ಲ; ಆದರೆ ಒಂದು ಮಾತನ್ನು ಹೇಳಲಿಕ್ಕೆ ಮಾತ್ರ ನವ್ಯ ಸಾಹಿತ್ಯದ ಆವೃತ ಗ್ರಹಿಕೆಯ ಪ್ರಸ್ತಾಪ ಮಾಡುತ್ತಿದ್ದೇನೆ. ಕಳೆದ ಎರಡು ವರ್ಷಗಳ ಮೌನದಲ್ಲಿ, ಸಾರ್ವತ್ರಿಕ ಸ್ಮಶಾನ ಮೌನದಲ್ಲಿ, ಪಾಟೀಲರ ಒಂದೇ ಒಂದು ಧ್ವನಿ ಎಲ್ಲರಿಗೂ ತಾಗುವ ನೈತಿಕ ಹಾಗೂ ಕಲಾತ್ಮಕ ಗುಣ ಪಡೆದಿದೆ. ಇವರ ಧ್ವನಿ ಕೂಡ ನಾವು ಸೃಷ್ಟಿಸಿದ ವಾತಾವರಣ ಮತ್ತು ಕೃತಿಗಳ ಸಹಜ ತಾರಕವಾಗಿದೆ ಎಂದು ನಾನು ಯಾವುದೇ ಆತ್ಮ ಪ್ರಶಂಸೆಯ ಭಯವಿಲ್ಲದೆ ಹೇಳಬಲ್ಲೆ. ಈ ಮಾತನ್ನು ನಾನು ಹೇಳುವಾಗ ಪಾಟೀಲರು ಈ ಸಂಕಲನದ ಮುಖ್ಯ ಕವನಗಳಲ್ಲಿ ಗೇಲಿ ಮಾಡುವ ವ್ಯಕ್ತಿಗಳನ್ನು ಮತ್ತು ಅಂಶಗಳನ್ನು ಕೂಡ ಮರೆತಿಲ್ಲ. ಅಡಿಗರನ್ನು ಕುರಿತು ಅವರು ಬರೆದ ಮೊದಲ ಕವನಕ್ಕೂ ಎರಡನೇ ಕವನಕ್ಕೂ ಇರುವ ವ್ಯತ್ಯಾಸ ನೋಡಿದರೆ ತಿಳಿಯುತ್ತದೆ. ವಿವರಗಳನ್ನೂ ಹೇಳಿ ಅಡಿಗರ ಮನಸ್ಸು ನೋಯಿಸುವ ಆಶೆ ಕೂಡ ನನಗಾಗುತ್ತಿಲ್ಲವಾಗಿ ಇಷ್ಟು ಮಾತ್ರ ಹೇಳಬಲ್ಲೆ : ಅಡಿಗರಾಗಲೀ, ಅನಂತ ಮೂರ್ತಿಯಾಗಲೀ, ನಾನಾಗಲೀ, ಪಾಟೀಲರಾಗಲೀ–ನಾವೆಲ್ಲರೂ ಚಿಂತನಕಾರರೆಂದರೆ ಮಾರ್ಗದರ್ಶಕರು, ಮಾಡುವವರಲ್ಲ ಎಂಬ ಪರಂಪರೆಯಲ್ಲಿ ಬೆಳೆದವರು; ಆಡುವ ಮಾತು ಮಂತ್ರದ ಪರಿಣಾಮ ಬೀರಬಲ್ಲದು ಎಂಬ ಕಲ್ಪನೆಯಲ್ಲಿ ಬೆಳೆದವರು; ಇವೆರಡೂ ಇರಲಾರದು ಎಂಬ ಅನುಮಾನ ಕೂಡ ಇಟ್ಟುಕೊಂಡವರು. ಈ ಪರಂಪರೆಗೆ ಪಾಟೀಲರು ಪ್ರತಿಕ್ರಿಯೆಗೊಳ್ಳುತ್ತಲೇ ರಾಜಕೀಯ ಮತ್ತು ವಿಜ್ಞಾನ ನಮ್ಮನ್ನು ಸುತ್ತುವರಿದ ಬಗ್ಗೆ ತಮ್ಮ ನೋವನ್ನು ಮಂಡಿಸುವ ರೀತಿ ಪ್ರತಿಭಾ ಪೂರ್ಣವಾಗಿದೆ. ಅಷ್ಟೇ ಅಲ್ಲ. ನಾವೆಲ್ಲ ಬಹಳ ಸಲ ಗುರುತಿಸಿ ಹೇಳಿದ ಒಳದಾರಿಗಳ ಬಗ್ಗೆ ಕೂಡ ಸೂಚನೆ ಕೊಡುತ್ತಾರೆ. ಕಾಡು ಹರಟೆಯಲ್ಲಿ, ಮೋಕ್ಷದ ಕಲ್ಪನೆಯಲ್ಲಿ, ಕ್ಷುಲ್ಲಕ ಮಾಯಾ ಮಂತ್ರಗಳಲ್ಲಿ ಮೈಮರೆಯುವಂತೆಯೇ ತೀವ್ರಗಾಮಿ ರಾಜಕೀಯದ ಕನಸುಗಳಲ್ಲಿ ತಲೆ ತಪ್ಪಿಸಿಕೊಳ್ಳುವ ಜನರಿದ್ದಾರೆ. ಇವರೆಲ್ಲರ ಬಗ್ಗೆ ಪಾಟೀಲರು ಕ್ರುದ್ಧರಾಗಿದ್ದಾರೆ.

ಆದರೆ ಒಂದನ್ನು ಮಾತ್ರ ಅವರು ಹೆಚ್ಚು ಹೆಚ್ಚು ಗಾಢವಾಗಿ ಚಿಂತಿಸಿ ಪಡೆಯಬೇಕಾಗಿದೆ. ಅದೇನೆಂದರೆ, ಆಲ್ಬರ್ಟ ಕಮೂ ತನ್ನ "ಪ್ಲೇಗಿ"ನಲ್ಲಿ ಸೂಚಿಸಿದಂತೆ, ಪ್ಲೇಗಿನ ಬಗ್ಗೆ, ಅಂದರೆ ಫ್ಯಾಸಿಸ್ಟ್ ಮನೋಧರ್ಮದ ಬಗ್ಗೆ ಕೋಪಗೊಂಡರೆ, ವ್ಯಂಗ್ಯವಾಡಿದರೆ, ತಮಾಷೆ ಮಾಡಿದರೆ, ದೈವೀದೃಷ್ಟಿ ಪಡೆದರೆ, ನಿರ್ಲಿಪ್ತವಾದರೆ ಸಾಲದು – ಗಾಢವಾದ ಶ್ರದ್ಧೆಯುಳ್ಳ ವಸ್ತುನಿಷ್ಠತೆ ಪಡೆಯಬೇಕು. ಅಂಥ ಶ್ರದ್ಧೆ ಮತ್ತು ಅಂಥ ನಿಷ್ಠೆ ಪಡೆದೊಡನೆ, ನಮ್ಮೆಲ್ಲರ ವ್ಯಥೆಯೂ ಒಂದೇ ಬಗೆಯದಾದ್ದರಿಂದ, ಪಾಟೀಲರಿಂದ ಭೇಡಿಸಿಕೊಂಡ ಕೆಲವರೂ ಅದರಲ್ಲಿ ಭಾಗಿಗಳಾಗುತ್ತಾರೆ.

ಮೇಲಿನದು ನಾನು ಹೇಳಬೇಕೆಂದಿದ್ದ. ಒಂದು ಸಣ್ಣ ಅಂಶ ಮಾತ್ರ : ನಮ್ಮ ನೋವನ್ನು ಹೇಳುವ ಅವಸರದಲ್ಲಿ ನಮಗೆಲ್ಲ ಸಾಮಾನ್ಯವಾದ ಸಂಗತಿಗಳನ್ನು ನಾವು ಮರೆಯಬಾರದು ; ನಮ್ಮೆಲ್ಲರ ಸಾರ್ವತ್ರಿಕ ನೋವಿನಿಂದ ಒಂದು ಬೌದ್ಧಿಕ ಪರಂಪರೆಯೇ ಬೆಳೆಯುವುದಾದರೆ ಆ ಅವಕಾಶವನ್ನು ಕಳೆದುಕೊಳ್ಳಬಾರದು. ನಾನು ನಿಜಕ್ಕೂ ಹೇಳಬೇಕೆಂದು ಮಾಡಿದ್ದು ಇದು : ಪಡೆಯಬಹುದಾದ ದೈಹಿಕ, ಮಾನಸಿಕ ನೋವುಗಳಿಗೆ ಹೆದರದೇ ಅನ್ನಿಸಿದ್ದನ್ನು ಹಲವು ರೀತಿಯ ಪ್ರಯೋಗಗಳಿಂದ, ಆದಷ್ಟು ಪರಿಣಾಮಕಾರಿಯಾಗಿ ಹೇಳುವ ಪಾಟೀಲರ ಮಾರ್ಗಕ್ಕೆ ಕಾರಣವಾಗಿರುವುದು ಗಾಂಧೀಜಿಯವರ ಚೇತನ. ಗಾಂಧೀಜಿಯವರು ಈ ಸಂಕಲನದ ಐದಾರು ಕವನಗಳಲ್ಲಿ ಸಂಕೇತವಾಗಿ ಶ್ಲೇಷೆಯಾಗಿ, ಹಿನ್ನೆಲೆಯಾಗಿ, ಮಾಪನವಾಗಿ ಬರುತ್ತಾರೆ. ಈ ಸಂಕಲನದ ಅತ್ಯುತ್ತಮ ಕವನವಾದ 'ಗಾಂಧೀ ಸ್ಮರಣೆ'ಯ ಒಡಚುಗಳು ಎಷ್ಟು ಪರಿಣಾಮಕಾರಿಯಾಗಿವೆ ಮತ್ತು ಕಲಾತ್ಮಕವಾಗಿವೆ ಎಂದರೆ, ಈ ಕವನವನ್ನು ಕಾಂಗ್ರೇಸಿಗರಾದಿಯಾಗಿ ಎಲ್ಲ ದೇಶಭಕ್ತರೂ ಹೇಳಿಕೊಳ್ಳಲು ಯೋಗ್ಯವಾಗಿದೆ; ನಿಮ್ಮ ನಿಮ್ಮ ಪ್ರಜ್ಞೆಯ ಮಟ್ಟಕ್ಕನುಸಾರವಾಗಿ ಇದರ ಅರ್ಥ ತೆರೆದುಕೊಳ್ಳುತ್ತ ಹೋಗುತ್ತದೆ. ಗಾಂಧೀಜಿ ಸಾರಿದ ಶಾಂತಿಯ ಸಂದೇಶ ಮನುಷ್ಯನಿಗೆ ನಿತ್ಯ ಶಾಂತಿಯನ್ನು ತಂದದ್ದು; ಗಾಂಧೀಜಿ ಇಷ್ಟಪಟ್ಟ ಪ್ರಾರ್ಥನೆ 'ಗಾಂಧೀ' ಪ್ರಾರ್ಥನೆಯಾದದ್ದು – ಈ ಎಲ್ಲವನ್ನು ಸಂಯಮದಿಂದ, ಸಮರ್ಥವಾಗಿ ಹೇಳುತ್ತಲೇ ಪಾಟೀಲರು ಎಲ್ಲರ ಅಳಲಿಗೆ ಕಂಠವಾಗಿದ್ದಾರೆ. ಅಷ್ಟೇ ಅಲ್ಲ; ಅಡಿಗರು ತೀರಾ ತಾತ್ವಿಕ ಚಿಂತನೆ ಮಾಡುತ್ತಾ ಸಾಧಿಸಿದ ಏಕಾಗ್ರತೆ ಮತ್ತು ಅರ್ಥಬಾಹುಳ್ಯವನ್ನು ಪಾಟೀಲರು ದೇಶದ ಬಗ್ಗೆ, ಅದರ ವಿವಿಧ ಅಂಗಗಳ ಬಗ್ಗೆ ಸಾಧಿಸಿದ್ದಾರೆ. "ಅನಾಚಾರ, ಅತ್ಯಾಚಾರ, ಭ್ರಷ್ಟಾಚಾರಗಳ ಬದಲು / ಪತ್ರಿಕೆಗಳ ತುಂಬ ಶುದ್ಧ ಸಮಾಚಾರ ತುಂಬಿದೆ" – ಎಂಬಂಥ ಒಂದೇ ಒಂದು ಮಾತು ತೆಗೆದುಕೊಂಡರೆ, ಇದು ಮಾತು ಕಳೆದುಕೊಂಡ, ಕಣ್ಣು ಕಳೆದುಕೊಂಡ, ಆರೋಗ್ಯ ಕಳೆದು ಕೊಂಡ ಒಂದು ಸಮಾಜ ಸತ್ಯಕ್ಕೆ ದೂರವಾದ 'ಸಮಾಚಾರ'ದಲ್ಲಿ ತಡಕಾಡುವುದನ್ನು ವಿವಿಧ

ದನಿಗಳಲ್ಲಿ ಹೇಳುತ್ತದೆ. ಇಡೀ ಕವನ ಗಾಂಧೀಜಿಯನ್ನು ವ್ಯಂಗ್ಯ ಹಾಗೂ ತಾದಾತ್ಮ್ಯದಿಂದ ಸ್ಮರಿಸುತ್ತದೆ.

೫.

ಹೇಳಬೇಕಾದ್ದನ್ನು ಹೇಳುವ ಧೈರ್ಯ ಕಳೆದುಕೊಂಡ ಸಮಾಜ ಹೇಳಬಾರದ್ದನ್ನು ಹೇಳುವ ಪಾಪಕ್ಕೆ ಬೀಳಬೇಕಾಗುತ್ತದೆ. ಅಂಥ ಸ್ಥಿತಿಗೆ ಬರುವ ಮುನ್ನ ನಮ್ಮ ಬುದ್ಧಿಜೀವಿಗಳೆಲ್ಲ ಎಚ್ಚತ್ತುಕೊಳ್ಳಬೇಕಾಗಿದೆ. ಪಾಟೀಲರು, ನಮ್ಮೆಲ್ಲರಂತೆ, ಬಹಳ ತಪ್ಪು ಮಾಡುತ್ತಾರೆ. ತೀರಾ ಸಣ್ಣ ವಿಷಯಗಳಿಗೆಲ್ಲ ರೇಗಾಡುತ್ತಾರೆ. ತೀರ ಬೇಗ ಜನರನ್ನು ತಮ್ಮ ಮೂಗಿನ ನೇರಕ್ಕೆ ಹೆಸರಿಸತೊಡಗುತ್ತಾರೆ; ಇಲ್ಲಿಯ ಕವನಗಳಿಂದ ಹಲವರಿಗೆ – ನಾನು ಯಾರನ್ನು ಈ ಸಂದರ್ಭದಲ್ಲಿ ನೋಯಿಸಲಾರೆನೋ ಅವರಿಗೆ – ನೋವಾಗುವುದು ಖಂಡಿತ. ಅನೇಕ ಸಲ ತಮಾಷೆಗೆ, ಹಟಕ್ಕೆ ಕ್ಷುಲ್ಲಕ ಕಾರಣಗಳಿಗಾಗಿ ಪದ್ಯ ಬರೆಯುತ್ತಾರೆ. ಆದರೆ ಪಾಟೀಲನ್ನು ನಾವೀಗ ಅರ್ಥ ಮಾಡಿಕೊಳ್ಳದಿದ್ದರೆ ದೊಡ್ಡ ತಪ್ಪು ಮಾಡುತ್ತೇವೆ. ಅವರ ಕವನಗಳಲ್ಲಿ ಬರುವ ಪಾತ್ರಗಳು, ಸಂದರ್ಭಗಳು, ವಸ್ತುಗಳು ಹಲಬಗೆಯ ರೂಪಕಗಳಾಗಿ ನಮ್ಮನ್ನು ಕಾಡುವ ಶಕ್ತಿ ಪಡೆದಿವೆ. 'ಗೃಹಬಂಧನ'ದಂಥ ಕವನಗಳು ತಮ್ಮ ಹಾಸ್ಯದ ಮೂಲಕ ಸಂಕೇತ ಬೆಳೆಸುತ್ತ, ಒಂದು ಫ್ಯಾಸಿಸ್ಟ್ ವ್ಯವಸ್ಥೆ ಹೇಗೆ ಅನಾರೋಗ್ಯದ ಮನಸ್ಸಿನ ಫಲವೆಂಬುದನ್ನು ಹೇಳುತ್ತವೆ; 'ಎಲ್ಲಿದ್ದೀರಿ ಎಲ್ಲಿದ್ದೀರಿ' ತರಹೆಯ ಕವನಗಳು ನಮ್ಮ ಮಾತಿನಲ್ಲೇ ನಮ್ಮನ್ನು ಸಿಕ್ಕಿಸಿ, ಹಂಗಿಸಿ ಕೆಲಸಕ್ಕೆ ಕರೆ ನೀಡುತ್ತವೆ; 'ನಿನ್ನ ಎಲುಬಿನ ಹಾಡು' ಕವನದಂಥವು ಪರಿಸರ ಹೇಗೆ ಕವಿಯ ಅನಿಸಿಕೆಯನ್ನು ನಿರ್ಧರಿಸುತ್ತದೆ ಎಂಬುದನ್ನು ಹೇಳುತ್ತವೆ; 'ಏರುಹುಬ್ಬಿನವರೇ' ಎಂಬಂಥ ಕವನ 'ಗಾಂಧೀಸ್ಮರಣೆ'ಗೆ ತೀರಾ ಹತ್ತಿರ ಬಂದು ಸೋಲ್ಜೆನಿತ್ಸಿನ್ ಮತ್ತು ಡ್ಯಾಂಟೀ ತಮ್ಮ ಕೃತಿಗಳಲ್ಲಿ ಸೃಷ್ಟಿಸುವ ಬುದ್ಧಿಜೀವಿಗಳ ವಿಶೇಷ ವೃತ್ತವನ್ನು ನೆನಪಿಗೆ ತರುವಷ್ಟು ಯಶಸ್ವಿಯಾಗಿದೆ.

ಪಾಟೀಲರ ಧ್ವನಿಯನ್ನು ಕೇಳಿ ಏಕತಾನವೆನ್ನಿಸಿದರೆ ಕೊಂಚ ನಿಂತು ಮತ್ತೆ ಓದುವುದು ಮೇಲು; ಯಾಕೆಂದರೆ ಏಕತಾನವನ್ನು ಬೇಕಂತಲೇ ಅವಲಂಬಿಸುವ ಪಾಟೀಲರು ಇದ್ದಕ್ಕಿದ್ದಂತೆ ಹೊಸ ಬಾಗಿಲು ತೆರೆದು ನಮ್ಮನ್ನು ಒಳಕ್ಕೆ ಬಿಡುತ್ತಾರೆ:

ಕಪಿಗಳೇ, ಇದೋ ನಿಮಗೊಂದಾಜ್ಞೆ :
ನಿಮ್ಮ ಹುಬ್ಬುಗಳನ್ನು ತಕ್ಷಣ
ಇಳಿಸಲಾಗುವದು ; ಮತ್ತು
ಖಡ್ಗದಿಂದ
ಕರಕರ ಬೋಳಿಸಲಾಗುವದು.

– ಎಂದು ಹೇಳುವಲ್ಲಿ "ಕಪಿ" ಅಚ್ಚಿನ ತಪ್ಪೆ? ಧ್ವನಿಯ ತಪ್ಪೆ? ಅಲ್ಲ, ನಮ್ಮ ನಿಮ್ಮ ತಪ್ಪು–ಎಂಬುದು ಹೊಳೆಯುತ್ತದೆ.

೬

ನಾನು ಮೇಲಿನ ಸಾಲುಗಳನ್ನು ತೀರಾ ಅವಸರದಲ್ಲಿ ಬರೆದಿದ್ದೇನೆ. ಈ ಕವನಗಳಿಗೆ ಮುನ್ನುಡಿ ಬರೆಯಲು ಹೇಳಿ ಪಾಟೀಲರು ನನಗೆ ಉಪಕಾರ ಮಾಡಿದ್ದಾರೆ; ನಾನು ಕಾಂಗ್ರೆಸ್ ಮಿತ್ರರೊಂದಿಗೆ, ಕಮ್ಯೂನಿಸ್ಟ್ ಮಿತ್ರರೊಂದಿಗೆ, ಸೋಷ್ಯಲಿಸ್ಟ ಮಿತ್ರರೊಂದಿಗೆ ಈ ಪದ್ಯಗಳನ್ನು ಓದಿ, ಚರ್ಚಿಸಿ, ಜಗಳವಾಡಿ ಸ್ನೇಹ ಬೆಳೆಸುವ ಅವಕಾಶ ಕಲ್ಪಿಸಿದ್ದಾರೆ. ಅಂದರೆ ಮಾತಾಡುವಂತೆ ಮಾಡಿದ್ದಾರೆ. ಕೇವಲ ರಾಜಕೀಯವಲ್ಲ, ನೆಲ, ಮರ, ಸಮುದ್ರ, ವಿದೇಶ, ಹುಡುಗಿಯರು, ಹುಡುಗರು, ಮುದುಕರು, ಕುರುಡು ಸಿದ್ಧಾಂತಿಗಳು–ಎಲ್ಲರನ್ನೂ ಕಣ್ಣೊರೆಸಿಕೊಂಡು ನೋಡುವಂತೆ ಮಾಡಿದ್ದಾರೆ. ನಾವು ಪಾಟೀಲರಿಗೆ ಮಾಡಬೇಕಾದ್ದು ಇಷ್ಟು : ಕೇವಲ ಈ ಪದ್ಯಗಳನ್ನು ಓದುವದಲ್ಲ, ಆ ಬಗ್ಗೆ ಕೇವಲ ಯೋಚಿಸುವದು ಮಾತ್ರವಲ್ಲ; ನಾವೆಲ್ಲ ಗಾಂಧಿ ಕೇವಲ ನೆನಪಾಗದಿರುವಂತೆ ಮಾಡಬೇಕು. ಎಲ್ಲ ಭ್ರಷ್ಟರು, ಅಧಿಕಾರದಾಹಿಗಳು, ದ್ವಿಮುಖಿಗಳು, ಭೌತಿಕವಾದಿಗಳು, ಹೇಡಿಗಳು, ಬಾಯಿಮುಚ್ಚಿಸುವವರು–ಇವರಿಗೆ ಗಾಂಧೀಜಿಯನ್ನು ಮುಖಕ್ಕೆ ನೇರವಾಗಿ ಹಿಡಿಯಬೇಕು. ಇದರಿಂದ ಪಾಟೀಲರ ಧ್ವನಿಯ, ನಮ್ಮೆಲ್ಲರ ಧ್ವನಿಯ, ರೋಮ್ಯಾಂಟಿಕ್ ನೋಸ್ಟಾಲ್ಜಿಯಂ ಮತ್ತು ವ್ಯಂಗ್ಯ ಹೋಗಿ ಗಾಢ ರೋಷ ಮತ್ತು ಘನತೆಯುಳ್ಳ ಅಭಿವ್ಯಕ್ತಿ ಸಾಧ್ಯವಾಗುತ್ತದೆ.

ಬೆಂಗಳೂರು ೧೯–೧೧–೭೬ — ಪಿ. ಲಂಕೇಶ್

ಶತಮಾನೋತ್ಸವ ವರ್ಷ : ೨೦೧೪-೨೦೧೫

ಕನ್ನಡ ಸಾಹಿತ್ಯ ಪರಿಷತ್ತಿನ ನೂರರ ಸಂಭ್ರಮಕ್ಕೆ ಕಿರೀಟಪ್ರಾಯವಾದ ಯೋಜನೆ ಕನ್ನಡದ ನೂರು ಮೌಲಿಕ ಗ್ರಂಥಗಳ ಮರುಮುದ್ರಣ. ಈ ಪುಸ್ತಕಗಳ ಆಯ್ಕೆಯಲ್ಲಿ ಕನ್ನಡ ಸಾಹಿತ್ಯದ ವಿವಿಧ ಘಟ್ಟಗಳು, ಚಳುವಳಿಗಳು ಹಾಗೂ ವಿವಿಧ ಸಾಹಿತ್ಯಿಕ ಸಂವೇದನೆಗಳನ್ನು ಗಮನದಲ್ಲಿರಿಸಿಕೊಳ್ಳಲಾಗಿದೆ. ಸಾಹಿತ್ಯದ ಎಲ್ಲ ಪ್ರಕಾರಗಳಿಗೂ ಪ್ರಾತಿನಿಧ್ಯವಿರುವಂತೆ ಸಹ ನೋಡಿಕೊಳ್ಳಲಾಗಿದೆ. ಪ್ರತಿಭೆ, ಪ್ರಾದೇಶಿಕತೆ ಹಾಗೂ ಸಾಮಾಜಿಕ ನ್ಯಾಯಗಳನ್ನು ಪರಿಗಣಿಸಲಾಗಿದೆ. ಈ ಅಮೂಲ್ಯ ಕನ್ನಡ ಕೃತಿಗಳನ್ನು ಓದುಗರು ಪ್ರೀತಿ ಅಭಿಮಾನಗಳಿಂದ ಬರಮಾಡಿಕೊಳ್ಳುವರೆಂದು ನಂಬಿದ್ದೇನೆ.

ಪುಂಡಲೀಕ ಹಾಲಂಬಿ
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦೦೧೮

